


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ



ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಜನವರಿ 14 ಮಂಗಳವಾರ 2025

ಸಂಪುಟ: 45 | ಸಂಚಿಕೆ: 268 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಬಹಿರಂಗ ಹೇಳಿಕೆ; ಪ್ರತ್ಯೇಕ ಸಭೆಯನ್ನ ಪಕ್ಷ ಸಹಿಸಲ್ಲ

ಸಚಿವರುಗಳಿಗೆ ಕಾಂಗ್ರೆಸ್ ಉಸ್ತುವಾರಿಯೂ ಆದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಖಡಕ್ ಎಚ್ಚರಿಕೆ

- ಕರ್ನಾಟಕದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ; ಈ ಬಗ್ಗೆ ಯಾರೂ ಮಾತಾಡಬೇಡಿ
- ನೀವು ಸಭೆ ನಡೆಸಿ ನಾಯಕರ ಸೃಷ್ಟಿಸಿದರೆ ಯಾವ ಕಿಮ್ಮತ್ತಿಲ್ಲ; ವರಿಷ್ಠರ ನಿರ್ಣಯವೇ ಅಂತಿಮ



ಸರ್ವ ಸದಸ್ಯರ ಸಭೆಯಲ್ಲಿ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಸಿಎಂ, ಡಿಸಿಎಂ ಇನ್ನಿತರರಿದ್ದಾರೆ.

ಬೆಂಗಳೂರು, ಜ.13(ಕೆಎಂಶಿ)– ಕರ್ನಾಟಕದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ, ಈ ಬಗ್ಗೆ ಬಹಿರಂಗವಾಗಿ ಮಾತನಾಡುವುದು ಹಾಗೂ ಪ್ರತ್ಯೇಕ ಸಭೆಗಳನ್ನು ನಡೆಸುವುದನ್ನು ಪಕ್ಷ ಸಹಿಸುವುದಿಲ್ಲ ಎಂದು ಕಾಂಗ್ರೆಸ್ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಇಂದಿಲ್ಲಿ ಖಡಕ್ ಎಚ್ಚರಿಕೆ ನೀಡಿದ್ದಾರೆ.

ರಾಜಕೀಯ ನಿರ್ಧಾರಗಳನ್ನು ವರಿಷ್ಠರು ಕಾಲಾನುಕಾಲಕ್ಕೆ ತೆಗೆದುಕೊಳ್ಳುತ್ತಾರೆ, ಯಾವ ಸಮಯದಲ್ಲಿ ಏನು ನಿರ್ಧಾರ ಕೈಗೊಳ್ಳಬೇಕೆಂಬುದು ಅವರಿಗೆ ಗೊತ್ತಿದೆ, ನೀವು ಸಭೆಗಳನ್ನು ನಡೆಸಿ, ನಾಯಕರನ್ನು ಸೃಷ್ಟಿ ಮಾಡಿದರೆ

■ 7ನೇ ಪುಟಕ್ಕೆ


ಇನ್ನು ಯಾವ ಡಿನ್ನರ್ ಮೀಟಿಂಗೂ ಇಲ್ಲ

- ಖಾಸಗಿ ಹೋಟೆಲ್‌ನಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷ ಸಭೆಯಲ್ಲಿ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಖಡಕ್ ತಾಕೀತು
- ಯಾವುದೇ ಸಭೆ ನಡೆಸಬೇಕಾದರೂ ಹೈಕಮಾಂಡ್ ಅನುಮತಿ ಬೇಕು
- ಮಾತನಾಡಲೇಬೇಕೆಂದಿದ್ದರೆ ಬಿಜೆಪಿ ಬಗ್ಗೆ ಮಾತನಾಡಿ

ಬೆಂಗಳೂರು: ಎಲ್ಲಾ ರೀತಿಯ ಪ್ರತ್ಯೇಕ ಸಭೆ, ಊಟ, ಡಿನ್ನರ್ ಮೀಟಿಂಗ್ ಯಾವುದಕ್ಕೂ ಅವಕಾಶ ಇಲ್ಲ. ಎಲ್ಲದಕ್ಕೂ ಬ್ರೇಕ್ ಹಾಕಿ ಎಂದು ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲ ತಾಕೀತು ಮಾಡಿರುವ ವಿಚಾರ ಮೂಲಗಳಿಂದ ತಿಳಿದು ಬಂದಿದೆ. ಖಾಸಗಿ ಹೋಟೆಲಿನಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮಾತನಾಡಿದ ಅವರು, ಸಮುದಾಯದ ಸಭೆ, ಸಮುದಾಯದ ನಾಯಕರ ಸಭೆ ಮಾಡಬೇಕಾದ ಯಾವುದೇ ಪರಿಸ್ಥಿತಿ ಬಂದರೂ ಹೈಕಮಾಂಡ್ ಅನುಮತಿ ಪಡೆದು ಮಾಡಬೇಕು. ಬಹಿರಂಗವಾಗಿ ಮಾತನಾಡುವ ಎಲ್ಲಾ ಚಟುವಟಿಕೆಗಳನ್ನು ನಿಲ್ಲಿಸಬೇಕು ಎಂದು ಸೂಚಿಸಿದ್ದಾರೆ. ಏನೇ ಗೊಂದಲ ಇದ್ದರೂ ನಾಲ್ಕುಗೋಡೆ ಮಧ್ಯೆ ಬಗೆಹರಿಸಿಕೊಳ್ಳಿ ಎಂದು

■ 7ನೇ ಪುಟಕ್ಕೆ

ಶುಭಾಶಯಗಳು



ನಾಡಿನ ಸಮಸ್ತರಿಗೂ ಸಂಕ್ರಾಂತಿ ಹಬ್ಬದ ಶುಭಾಶಯಗಳು

ಬಿಡುವು

ಸಂಕ್ರಾಂತಿ ಹಬ್ಬದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 15–1–2025ರ ಬುಧವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.–ಸಂ



ಸೋನಿಯಾ, ರಾಹುಲ್ ಗಾಂಧಿಯಂತೆ ನಾವೂ ತ್ಯಾಗ ಮಾಡಬೇಕು...!

ಅಚ್ಚರಿ ಮೂಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ವೈರಾಗ್ಯದ ಮಾತು

ಬೆಂಗಳೂರು, ಜ.13– ಅಧಿಕಾರ ಹಂಚಿಕೆ ಕುರಿತಂತೆ ತೀವ್ರ ಚರ್ಚೆಗಳು ನಡೆಯುತ್ತಿರುವುದರ ನಡುವೆಯೇ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅಧಿಕಾರ ತ್ಯಾಗ ಮಾಡಿದಂತೆ, ನಾವು ಅದೇ ಹಾದಿಯಲ್ಲಿ ಸಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದು, ಅವರ ಮಾತಿನಲ್ಲಿ ವೈರಾಗ್ಯದ ಛಾಯೆ ಕಂಡುಬಂದಿದೆ.

ಕೆಪಿಸಿಸಿ ಕಚೇರಿಯಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲ ನೇತೃತ್ವದಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ತ್ಯಾಗದ ಮಾತನ್ನು ಆಡಿದ್ದಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ಮಹಾತ್ಮಾ ಗಾಂಧಿ ನೇತೃತ್ವದಲ್ಲಿ ಅನೇಕ ಕಾಂಗ್ರೆಸ್ಸಿಗರು ತ್ಯಾಗ ಬಲಿದಾನಗಳನ್ನು ಮಾಡಿದ್ದಾರೆ. ನಮ್ಮಲ್ಲೂ ಕೂಡ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ತ್ಯಾಗವನ್ನು ಮಾಡಿದ್ದಾರೆ. ಅವರಿಗಿಂತ ನಾವು ದೊಡ್ಡವರಲ್ಲ ಎಂಬ ಸಂದೇಶ ರವಾನೆ ಮಾಡಿದ್ದಾರೆ. ನಾವು ಅನಿವಾರ್ಯ ಪರಿಸ್ಥಿತಿ ಬಂದರೆ ತ್ಯಾಗ ಮಾಡಬೇಕಾಗುತ್ತದೆ ಎಂಬ ಅರ್ಥದಲ್ಲಿ ಸಿಎಂ ಮಾತನಾಡಿದ್ದಾರೆ. ಇದೇ ವೇಳೆ ಕಾಂಗ್ರೆಸ್ ಪಕ್ಷ ಮಾತ್ರ ಸಮಾಜದಲ್ಲಿ ಪರಿವರ್ತನೆ ಬಯಸುತ್ತದೆ. ಬಿಜೆಪಿಯವರು ಯಥಾಸ್ಥಿತಿಯನ್ನು ಬಯಸುವಂತವರು. ಜೆಡಿಎಸ್‌ನವರಿಗೆ ಯಾವ

■ 7ನೇ ಪುಟಕ್ಕೆ



ಇಂದು ಮಕರ ಸಂಕ್ರಾಂತಿ: ಮೈಸೂರಲ್ಲಿ ಸಡಗರವೋ ಸಡಗರ



ಮಕರ ಸಂಕ್ರಾಂತಿ ಹಬ್ಬದ ಹಿನ್ನೆಲೆಯಲ್ಲಿ ಮೈಸೂರಲ್ಲಿ ಸಾರ್ವಜನಿಕರು ವಿವಿಧ ಪೂಜಾ ಸಾಮಗ್ರಿಗಳನ್ನು ಖರೀದಿಸುತ್ತಿರುವುದು.

ಮೈಸೂರು, ಜ.13(ಆರ್‌ಕೆ)– ಮಕರ ಸಂಕ್ರಾಂತಿ ಹಬ್ಬಕ್ಕೆ ಮೈಸೂರಲ್ಲಿ ಸಡಗರದ ಸಿದ್ಧತೆ ನಡೆದಿದೆ.

ಮಂಗಳವಾರ ನಡೆಯಲಿರುವ ಹೊಸ ವರ್ಷದ ಮೊದಲ ಹಬ್ಬವನ್ನು ಸಂಭ್ರಮದಿಂದ ಆಚರಿಸಲು ಜನರು ತಯಾರಿ ಮಾಡಿಕೊಳ್ಳುತ್ತಿದ್ದು, ಪೂಜಾ ಸಾಮಗ್ರಿ ಮತ್ತು ಎಳ್ಳು–ಬೆಲ್ಲ ಖರೀದಿಸಲು ಮುಗಿ ಬೀಳುತ್ತಿದ್ದುದು ಮೈಸೂರು ನಗರ ಮತ್ತು ಜಿಲ್ಲಾದ್ಯಂತ ಎಲ್ಲಾ ತಾಲೂಕು, ಹೋಬಳಿ ಕೇಂದ್ರಗಳಲ್ಲಿ ಕಂಡುಬಂದಿತು.

ಮೈಸೂರಿನ ಶಿವರಾಂಪೇಟೆ, ಸಂತೆ ಪೇಟೆ, ದೇವರಾಜ ಮಾರುಕಟ್ಟೆ, ಕೆ.ಆರ್. ಮಾರುಕಟ್ಟೆ, ಜೆ.ಕೆ.ಮೈದಾನದ ಬಳಿ, ಹೆಬ್ಬಾಳಿನ ಸೂರ್ಯ ಬೇಕರಿ ಸರ್ಕಲ್ ಬಳಿ, ವಿವಿ ಮೊಹಲ್ಲಾದ ಮಾತೃ ಮಂಡಲಿ ಸರ್ಕಲ್, ಕುವೆಂಪುನಗರ ಕಾಂಪ್ಲೆಕ್ಸ್, ವಿವೇಕಾನಂದ ಸರ್ಕಲ್, ಅಗ್ರಹಾರ ಸರ್ಕಲ್, ನಂಜುಮಳಿಗೆ ವೃತ್ತ ಸೇರಿದಂತೆ ನಗರದ ವಿವಿಧ ಬಡಾವಣೆಗಳ ಪ್ರಮುಖ ರಸ್ತೆ, ಸರ್ಕಲ್‌ಗಳಲ್ಲಿ ಸೇವಂತಿಗೆ ಹೂ, ಕಬ್ಬಿನ ಜಲ್ಲೆ, ಪೂಜಾ ಸಾಮಗ್ರಿ, ಎಳ್ಳು–ಬೆಲ್ಲ ಮಾರಾಟ ಭರದಿಂದ ಸಾಗಿದೆ.

ಬೆಲೆ ಜಾಸ್ತಿಯಾಗಿದ್ದರೂ ಮನೆಯಲ್ಲಿ ಎಳ್ಳು ಬೀರಿ, ಇತರರಿಗೂ ಕೊಟ್ಟು ಸಂಕ್ರಾಂತಿ ಶುಭ ಕೋರಲು ಸಿದ್ಧತೆ ನಡೆಸಿರುವ ಜನರು, ಅಗತ್ಯ ಸಾಮಗ್ರಿ ಖರೀದಿಯಲ್ಲಿ ನಿರತರಾಗಿದ್ದಾರೆ. ಮಿಶ್ರಣ ಮಾಡಿರುವ ಎಳ್ಳು–ಬೆಲ್ಲ ಕೆಜಿಗೆ 250ರಿಂದ 280 ರೂ., ಬಿಡಿಯಾಗಿ ಖರೀದಿಸಿದರೆ ಅಚ್ಚು ಬೆಲ್ಲ ಕೆ.ಜಿಗೆ 60 ರೂ., ಚೂರು ಮಾಡಿ ಒಣಗಿಸಿದ ಬೆಲ್ಲ ಕೆ.ಜಿ.ಗೆ 250 ರೂ., ಉರಿದ ಬಿಳಿ ಎಳ್ಳು ಕೆ.ಜಿ.ಗೆ 260 ರೂ., ಉರಿಗಡಲೆ ಕೆ.ಜಿ.ಗೆ 120 ರೂ., ಉರಿದ ಕಡಲೆಕಾಯಿ ಬೀಜ ಕೆ.ಜಿ.ಗೆ 200 ರೂ.ನಂತರ ಮಾರಾಟವಾಗುತ್ತಿದೆ.

ಮಾರು ಸೇವಂತಿಗೆ 80ರಿಂದ 100 ರೂ., ಚೆಂಡು ಹೂ 50 ರೂ., ಕಬ್ಬಿನ ಜಲ್ಲೆ ಜೋಡಿಗೆ 30ರಿಂದ 50 ರೂ.ಗೆ ಮಾರಾಟವಾಗುತ್ತಿದ್ದು, ಕೈ ಸುಡುವ ಬೆಲೆಯಾದರೂ ಜನರು ಸಂಕ್ರಾಂತಿ ಹಬ್ಬದ ಹಿಂದಿನ ದಿನವಾದ ಇಂದು ಖರೀದಿಯಲ್ಲಿ ನಿರತರಾಗಿದ್ದರು.

ಕೆ.ಆರ್.ಸರ್ಕಲ್, ಗಾಂಧಿಚೌಕ, ಮಕ್ಕಾಜಿ ಚೌಕ, ಡಿ.ದೇವರಾಜ ಅರಸು ರಸ್ತೆ, ಕಾಳಿದಾಸ ರಸ್ತೆ, ಮಾಲ್‌ಗಳು, ಪ್ರಮುಖ ವಾಣಿಜ್ಯ ರಸ್ತೆಗಳ ಅಂಗಡಿಗಳಲ್ಲಿ ಬಟ್ಟೆ ಅಲಂಕಾರಿಕ ವಸ್ತುಗಳ ಖರೀದಿಗೆ ಮುಗಿ ಬೀಳುತ್ತಿರುವ ಜನರು, ಹೊಸ ಬಟ್ಟೆ ತೊಟ್ಟು ಎಳ್ಳು ಬೀರಲು ಸರ್ವ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಗ್ರಾಮಾಂತರ ಪ್ರದೇಶಗಳಲ್ಲಿ ದನ–ಕರುಗಳನ್ನು ಕಿಚ್ಚು ಹಾಯಿಸಲು ಉತ್ಸುಕರಾಗಿದ್ದು, ದನಗಳ ಅಲಂಕಾರಿಕ ವಸ್ತುಗಳ ಮಾರಾಟ ಭರಾಟೆ ಮೈಸೂರಿನ ಶಿವರಾಂಪೇಟೆ ರಸ್ತೆಯಲ್ಲಿ ಇಂದು ಕಂಡುಬಂದಿತು.

ವಿವೇಕಾನಂದ ಜಯಂತಿ ಅಂಗವಾಗಿ ರಕ್ತದಾನ



ಮೈಸೂರಿನ ಮಾಧವ ಕೃಪಾ ಭವನದ ಸಭಾಂಗಣದಲ್ಲಿ ರಕ್ತದಾನ ಶಿಬಿರ ನಡೆಯಿತು.

ಮೈಸೂರು: ಮೈಸೂರಿನ ತೇರಾಪಂತ್ ಯುವಕ್ ಪರಿಷತ್, ಜನಜಾಗರಣ್ ಟ್ರಸ್ಟ್ ಮತ್ತು ರಕ್ತದಾನ ಮಹಾದಾನ ಗೋಭಕ್ತ ಸಂಘಟನೆ ಟ್ರಸ್ಟ್ ಆಶ್ರಯದಲ್ಲಿ ಸ್ವಾಮಿ ವಿವೇಕಾನಂದ ಜಯಂತಿ ಅಂಗವಾಗಿ ರಾಷ್ಟ್ರೀಯ ಯುವ ದಿನವನ್ನು ಆಚರಿಸಲಾಯಿತು. ನಗರದ ಮಾಧವ ಕೃಪಾ ಭವನದ ಸಭಾಂಗಣದಲ್ಲಿ ರಕ್ತದಾನ ಶಿಬಿರ ನಡೆಸುವ ಮೂಲಕ ರಾಷ್ಟ್ರೀಯ ಯುವ ದಿನವನ್ನು ಆಚರಿಸಲಾಯಿತು.

27 ಮಂದಿ ರಕ್ತದಾನ ಮಾಡಿದರು. ಈ ವೇಳೆ ಸಂಘದ ಹಿತೇಶಿ ಮತ್ತು ಆದಿತ್ಯ ಅಧಿಕಾರಿ ಆಸ್ಪತ್ರೆಯ ಡಾ.ಚಂದ್ರಶೇಖರ್, ಜನಜಾಗರಣ್ ಟ್ರಸ್ಟ್‌ನ ಖಜಾಂಚಿ ಆನಂದ್, ಮೈಸೂರಿನ ರಕ್ತದಾನ ಮಹಾದಾನ ಗೋ ಭಕ್ತ ಸಂಘಟನೆ ಟ್ರಸ್ಟ್‌ನ ಮಹೇಂದ್ರಸಿಂಗ್ ಕಾಳಪ್ಪ ಬನ್ನೂರು, ಚಿರಂಜಿಲಾಲ್ ಸೆಂಗಾರ್, ತೇರಾಪಂತ್ ಯುವ ಮಂಡಳಿ ಉಪಾಧ್ಯಕ್ಷ ಪ್ರಮೋದ್ ಮುನೋತ್, ಲಯನ್ಸ್ ಜೀವಧಾರ ರಕ್ತಕೇಂದ್ರದ ನಿರ್ದೇಶಕ ಗಿರೀಶ್, ನವೀನ್ ದೇರಾಸಾರಿಯಾ, ವಿಕಾಸ್ ಗಾಂಧಿಮೆಹ್ತಾ, ರಾಕೇಶ್ ಶ್ರೀಮಲ್, ಚೇತನ್ ಡಾಕ್, ದಿನೇಶ್ ಸಿಂಗ್ ರಾಜಪುರೋಹಿತ್, ಪ್ರತೀಕ್‌ಸಿಂಗ್ ಮತ್ತು ಮಹೇಂದ್ರ ಚಾಯಲ್ ಇನ್ನಿತರರಿದ್ದರು.

ವಿವಿಧ ಕಾಮಗಾರಿಗಳಿಗೆ ಶಾಸಕರಿಂದ ಗುದ್ದಲಿಪೂಜೆ




ಚಾಮರಾಜ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಗುದ್ದಲಿಪೂಜೆ ನೆರವೇರಿಸಿದರು.

ಮೈಸೂರು,ಜ.13–ಚಾಮರಾಜ ಕ್ಷೇತ್ರದ ವ್ಯಾಪ್ತಿಯ ಮೈಸೂರು ನಗರಪಾಲಿಕೆಯ ವಾರ್ಡ್ ನಂ.4, 1, 2ರಲ್ಲಿ ಸುಮಾರು ಎರಡೂವರೆ ಕೋಟಿ ರೂ. ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಗುದ್ದಲಿಪೂಜೆ ನೆರವೇರಿಸಿದರು.


ವಾರ್ಡ್ 4ರ ಲೋಕನಾಯಕ ನಗರದ ಅಡ್ಡ ರಸ್ತೆಗಳು, ಅಕ್ಕಪಕ್ಕದ ರಸ್ತೆಗಳು ಮತ್ತು ಚರಂಡಿ, ಉದ್ಯಾನವನ ಅಭಿವೃದ್ಧಿ, ನಿಂಗಯ್ಯನಕೆರೆಯ ಮುಖ್ಯ ರಸ್ತೆಗೆ ಚರಂಡಿ ಹಾಗೂ ಡೆಕ್ ನಿರ್ಮಾಣ, ಭೈರವೇಶ್ವರ ನಗರದ ಅಡ್ಡ ರಸ್ತೆ ಅಭಿವೃದ್ಧಿ ಕಾಮಗಾರಿ, ವಾರ್ಡ್ 1ರ ಸ್ಕೇಟಿಂಗ್ ಮೈದಾನಕ್ಕೆ ಮಣ್ಣಿನಿಂದ ಸಮತಟ್ಟು ಮಾಡಿ ಚರಂಡಿ ಅಭಿವೃದ್ಧಿ ಹಾಗೂ ಫೆನ್ಸಿಂಗ್ ರಿಪೇರಿ ಮಾಡುವ ಕಾಮಗಾರಿ, ಹೆಬ್ಬಾಳು 3ನೇ ಹಂತದ ಸುಬ್ರಮಣ್ಯನಗರ ದೇವಸ್ಥಾನದ ಹಿಂಭಾಗದ ರಸ್ತೆಯಲ್ಲಿ ಮತ್ತು ಚರಂಡಿ ಅಭಿವೃದ್ಧಿ, ಶುಭೋದಿನಿ ಛತ್ರದ ಬಳಿ ಡೆಕ್ ಸ್ಲಾಬ್ ನಿರ್ಮಾಣ, ಹೆಬ್ಬಾಳು 1ನೇ ಹಂತದ ಲಕ್ಷ್ಮೀಕಾಂತನಗರದ ಸಹಕಾರ ಸಂಘದ ಹತ್ತಿರ ಚರಂಡಿ ಹಾಗೂ ಹೊಯ್ಸಳ ವೃತ್ತದ ಪಕ್ಕ ಡೆಕ್‌ಸ್ಲಾಬ್ ನಿರ್ಮಾಣ ಕಾಮಗಾರಿ, ವಾರ್ಡ್ 2ರ ಮಂಚೇಗೌಡನಕೊಪ್ಪಲಿನ ಅಭಿಷೇಕ್ ವೃತ್ತದ ಬಳಿ ಕಲ್ವರ್ಟ್ ಅಗಲೀಕರಣ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಗೇಟ್ ಅಳವಡಿಸುವ ಕಾಮಗಾರಿ, ಸರ್ವೆ ನಂ.89ರಲ್ಲಿ ಕಾಂಕ್ರೀಟ್ ರಸ್ತೆ ಎಂ.ಜಿ.ಕೊಪ್ಪಲಿನ ಲಾಯರ್ ಜಯರಾಂ ಅವರ ಮನೆ ಮುಂಭಾಗ ರಸ್ತೆಯಲ್ಲಿ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿ ಒಳಗೊಂಡಿದೆ. ಪಾಲಿಕೆ ಮಾಜಿ ಸದಸ್ಯರಾದ ಪೈಲ್ವಾನ್ ಶ್ರೀನಿವಾಸ್, ನಾಗಣ್ಣ, ಅಪ್ಪಾಜಿಗೌಡ, ಸುಪ್ರೀಂ ಮಂಜು, ಶ್ರೀನಿವಾಸ್, ಅರವಿಂದ್, ವೆಂಕಟೇಶ್, ಜಯರಾಮೇಗೌಡ, ಕುಮಾರ್, ದಿನೇಶ್, ಭೈರಪ್ಪ, ಗೋಪಾಲಸ್ವಾಮಿ, ಪ್ರಶಾಂತ್, ಸಂತೋಷ್, ಜೇಕಬ್, ಡೆಲ್ಲಿ ರವಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ, ಶ್ರೀಧರ್, ಲೋಕೇಶ್, ಕೇಬಲ್ ಪುಟ್ಟರಾಜು, ಮಹದೇವಣ್ಣ, ಮೂರ್ತಿ, ಜಗದೀಶ್, ರಾಮಚಂದ್ರು, ರಮೇಶ್, ಮಹೇಶ್ ಮಸಿಯಪ್ಪ, ವೆಂಕಟೇಶ್, ಚಂದ್ರು, ರಮೇಶ್, ಪಾಲಿಕೆ ಅಧಿಕಾರಿಗಳಾದ, ಮನುಗೌಡ, ಅಶ್ವಿನಿ, ಪ್ರಭಾಮಣಿ ಉಪಸ್ಥಿತರಿದ್ದರು.

ನಿಧನ



ಕೆ.ಬಿ.ಮಹದೇವಸ್ವಾಮಿ

ಮೈಸೂರು, ಜ.13– ಮೈಸೂರಿನ ಶಾರದಾದೇವಿನಗರ ನಿವಾಸಿ ಕೆ.ಬಿ.ಮಹದೇವಸ್ವಾಮಿ (57) ಸೋಮವಾರ ನಿಧನರಾದರು. ಮೃತರು ಪತ್ನಿ ಶ್ರೀಮತಿ ಲತಾ, ಪುತ್ರಿ ಶ್ರೀಮತಿ ಪೂಜಾ, ಪುತ್ರ ಜೇಂಕಾರ್, ಮೊಮ್ಮಕ್ಕಳು, ಸ್ನೇಹಿತರು ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಜ.14) ಕೆ.ಜಿ.ಕೊಪ್ಪಲಿನ ಕಾವೇರಿ ಶಾಲೆಯ ಬಳಿಯಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮಂಜುನಾಥ್

ಮೈಸೂರು: ಮೈಸೂರಿನ ಕುಂಬಾರಕೊಪ್ಪಲು ನಿವಾಸಿ ಮಂಜುನಾಥ್(51) ಸೋಮವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕುಂಬಾರಕೊಪ್ಪಲು ರುದ್ರಭೂಮಿಯಲ್ಲಿ ಮಧ್ಯಾಹ್ನ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.



ಬಾಲಸುಬ್ರಮಣ್ಯಂ

ಮೈಸೂರು: ಮೈಸೂರಿನ ಪರಸಯ್ಯನಹುಂಡಿ ನಿವಾಸಿ, ಖಾಸಗಿ ಕಂಪೆನಿ ಉದ್ಯೋಗಿ ಬಾಲಸುಬ್ರಮಣ್ಯಂ ಅಲಿಯಾಸ್ ಬಾಲು(42) ಅವರು ಭಾನುವಾರ ರಾತ್ರಿ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಅವಿವಾಹಿತರಾಗಿದ್ದು, ತಂದೆ, ತಾಯಿ, ಸಹೋದರ, ಇಬ್ಬರು ಸಹೋದರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಇಂದು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.01.2025 ಮಂಗಳವಾರ, ಮಳೆ ನಕ್ಷತ್ರ: ಪೂಷಾ, 29.12.2024ರಿಂದ 16.01.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಪುನರ್ವಸು, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಡಿ. ಪುರುಷೋತ್ತಮ್, ಎಂ.ಆರ್.ಸುಧಾ, ವ್ಯಾಖ್ಯಾನ–ಡಾ.ಜಿ.ಆರ್.ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ.ಆರ್.ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್ ಎಸ್.ಎಸ್., 8.30–ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಮಲ್ಲಾಡಿ ಸಹೋದರರು–ಯುಗಳ ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್, ಚೈತ್ರಿಕಾ. ಎಸ್ ಹಾಗೂ ಕಾರ್ತಿಕ್ ಎಂ.ಎಸ್, **ಮಧ್ಯಾಹ್ನ:** 12.05 ವನಿತಾ ವಿಹಾರ 'ಸಂಕ್ರಾಂತಿ' ಕುರಿತ ವಿಶೇಷ ಕಾರ್ಯಕ್ರಮ ನಡೆಸಿಕೊಡುತ್ತಾರೆ– ಮೈಸೂರಿನ ಚಿತ್ಕಲಾ ಮಹಿಳಾ ಸಂಘದ ಸದಸ್ಯೆಯರು, 12.35 ದೇವರನಾಮ–ಕೆ.ಎಲ್.ಯತಿರಾಜ್, 12.45 ಕನ್ನಡದಲ್ಲಿ ಭಾಷಣ–ಅನಾಮಾರ್ಫಿಕ್ ಕಲಾವಿದ ಅನಿಲ್‌ಕುಮಾರ್ ಭೋಗಶೆಟ್ಟಿ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಜಿ.ಶಾಂತಕುಮಾರ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಹೆಚ್.ಟಿ.ಹರೀಶ್–ಸ್ಯಾಕ್ಸೋಫೋನ್ ವಾದನ, 4.00–ಕಥಾ ಕಾಲಕ್ಷೇಪ–ಸಂಪೂರ್ಣ ರಾಮಾಯಣ–ಅಯೋಧ್ಯಾ ಕಾಂಡ, ಪ್ರಸ್ತುತಿ: ವಿದ್ವಾನ್. ಆರ್.ಗುರುರಾಜುಲು ನಾಯ್ಡು, 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ರೇಷ್ಮೆ ಐಸಿರಿ–ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ರೇಷ್ಮೆ ಕೃಷಿಯಲ್ಲಿ ತ್ಯಾಜ್ಯ ನಿರ್ವಹಣೆ ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ನಿವೃತ್ತ ವಿಜ್ಞಾನಿ ಡಾ.ಟಿ.ತಿಪ್ಪೇಸ್ವಾಮಿ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ಡಿ.ಕೆ.ದಾತರ್–ವೈಯೋಲಿನ್ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಸುಧಾ ರಘುನಾಥನ್–ಹಾಡುಗಾರಿಕೆ, 10.00 ಚೈತ್ರವನ– ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ: ಡಾ.ಎ.ಎಸ್.ಶಂಕರನಾರಾಯಣ, 10.30–ಸವಿನೆನಪು

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಕರ ದೀಪೋತ್ಸವ ಸೇವಾ, ಬೆಳಗ್ಗೆಯಿಂದ ಮಹತೋಭಾರ ಶ್ರೀ ಧರ್ಮಶಾಸ್ತ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ಬೆಂಗಳೂರು ಪದವಿ ಪೂರ್ವ ಶಿಕ್ಷಣ ಇಲಾಖೆ, ರಾಷ್ಟ್ರೀಯ ಸೇವಾ ಯೋಜನೆ ಮತ್ತು ಮಾತೃಮಂಡಲಿ ಬಾಲಕಿಯರ ಪದವಿ ಪೂರ್ವ ಕಾಲೇಜು (ಮೈಸೂರು):** 2024–25ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 7.30ಕ್ಕೆ ಧ್ವಜಾರೋಹಣ, ಬೆಳಗ್ಗೆ 11ಕ್ಕೆ ಸಮಾರೋಪ ಸಮಾರಂಭ, ಉಪಸ್ಥಿತರು : ಎನ್‌ಎಸ್‌ಎಸ್ ಸಹಾಯಕ ಸಂಯೋಜನಾಧಿಕಾರಿ ಡಾ. ಟಿ.ಕೆ. ರವಿ, ಮಾತೃ ಮಂಡಲಿ ವಿದ್ಯಾಸಂಸ್ಥೆ ಕಾರ್ಯದರ್ಶಿ ಶ್ರೀಮತಿ ವಾಣಿ ಪ್ರಸಾದ್, ಉಪನ್ಯಾಸಕರಾದ ಶ್ರೀಮತಿ ಗಿರಿಜಮ್ಮ, ಅಧ್ಯಕ್ಷತೆ : ಮಾತೃ ಮಂಡಲಿ ಬಾಲಕಿಯರ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ವಿಶ್ವನಾಥಯ್ಯ ಶೆಟ್ಟಿ, ಸ್ಥಳ: ಮಾತೃಮಂಡಳಿ ಶಿಶು ವಿಕಾಸ ಕೇಂದ್ರ, ಗೋಕುಲಂ ಎರಡನೇ ಹಂತ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮೂತ್ರಪಿಂಡ (ಕಿಡ್ನಿ) ಕಾಯಿಲೆ, ಸಂಧಿವಾತ, ಮಂಡಿನೋವು, ಕೀಲು ನೋವು ಮತ್ತು ಆರೋಗ್ಯಾಯುಷ್ಯ ಆರೋಗ್ಯವರ್ಧಕ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಗೆ.

■ **ಗಂಧದಗುಡಿ ಫೌಂಡೇಷನ್** : ಎಳ್ಳು–ಬೆಲ್ಲ ಹಾಗೂ ಗುಲಾಬಿ ವಿತರಿಸುವ ಮೂಲಕ ಕೆ.ಆರ್. ವೃತ್ತದಲ್ಲಿ ಸುರಕ್ಷತಾ ಸಪ್ತಾಹ ಆಚರಣೆ, ಮುಖ್ಯ ಅತಿಥಿಗಳು : ನಟ ಚಂದನ್ ಆಚಾರ್, ಗಂಧದಗುಡಿ ಫೌಂಡೇಷನ್ ಗೌರವಾಧ್ಯಕ್ಷ ನಾಗೇಂದ್ರ ಪ್ರಸಾದ್, ಆರ್.ಜೆ. ಅವಿನಾಶ್, ಗಂಧದಗುಡಿ ಫೌಂಡೇಷನ್ ರಾಜ್ಯಾಧ್ಯಕ್ಷ ಆರ್ಯನ್ ಗಂಧದಗುಡಿ, ರಾಜ್ಯ ಉಪಾಧ್ಯಕ್ಷ ಮನೋಹರ್‌ಗೌಡ, ಮೈಸೂರು ಜಿಲ್ಲಾ ಉಪಾಧ್ಯಕ್ಷ ಗೌತಮ್, ಮೇಘನರಾಜ್, ಪೃಥ್ವಿರಾಜ್, ಅಭಿನಂದನ್ ಅರಸ್, ಚೇತನ್ ಶೆಟ್ಟಿ, ಯಶೋಧ, ಸವಿತಾ, ಸ್ಥಳ: ಕೆ.ಆರ್. ವೃತ್ತ, ಬೆಳಗ್ಗೆ 10ಕ್ಕೆ

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ಗಂಟೆಗೆ.

■ **ಆರ್ಯ ಸಮಾಜ** : ಮಕರ ಸೌರ ಸಂಕ್ರಾಂತಿಯ ಪರ್ವ, ಯಜುರ್ವೇದ ಮಂತ್ರಗಳ ಮೂಲಕ ಆಚರಣೆ, ಸ್ಥಳ: ಆರ್ಯ ಸಮಾಜ, ದೇವರಾಜ ಮೊಹಲ್ಲಾ, ಬೆಳಗ್ಗೆ 10.30ಕ್ಕೆ.

■ **ಭೂಮಿಗಿರಿ ನಾರಾಯಣಪ್ಪ ಪ್ರತಿಷ್ಠಾನ, ಅಲೆಯನ್ಸ್ ಕ್ಲಬ್ ಆಫ್ ಮೈಸೂರು, ನಾಲ್ವಡಿ ಗಾನ ನಂದನ:** ರಾಜ್ಯ ಮಟ್ಟದ ಭೂಮಿಗಿರಿ ನಾರಾಯಣಪ್ಪ ಪ್ರಶಸ್ತಿ ಪ್ರದಾನ, ಪ್ರಶಸ್ತಿ ಪುರಸ್ಕೃತರು: ಇತಿಹಾಸಕಾರ ಡಾ.ತಲಕಾಡು ಚಿಕ್ಕರಂಗೇಗೌಡ, ಅಂತಾರಾಷ್ಟ್ರೀಯ ಅಥ್ಲೀಟ್ ಎಂ.ಯೋಗೇಂದ್ರ ಜೂನಿಯರ್ ವಿಷ್ಣುವರ್ಧನ್ ಅಪೇಕ್ಷಾ ಮಂಜುನಾಥ್, ಚಲನಚಿತ್ರ ನಟಿ ರಿಶಾಗೌಡ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಅಧ್ಯಕ್ಷತೆ : ಅಲೆಯನ್ಸ್ ಅಂತಾರಾಷ್ಟ್ರೀಯ ನಿರ್ದೇಶಕ ನಾಗರಾಜ ವಿ.ಬೈರಿ, ಪ್ರಶಸ್ತಿ ಪ್ರದಾನ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕ್ಯಾಲೆಂಡರ್ ಬಿಡುಗಡೆ: ಹಿರಿಯ ಸಾಹಿತಿ ಡಾ.ಸಿಪಿಕೆ, ಮುಖ್ಯ ಅತಿಥಿಗಳು: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ರಾಜಶೇಖರ್ ಮೆಡಿಕಲ್ ಫೌಂಡೇಷನ್ ಅಧ್ಯಕ್ಷ ಡಾ.ಎಚ್.ಬಿ. ರಾಜಶೇಖರ್, ಸಾಹಿತ್ಯ ಲೋಕ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಮೈವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ. ನಿಂಗರಾಜ್‌ಗೌಡ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಮೈಸೂರು ಘಟಕ, ನಿನಾದಂಮುಕ್ತ ಫೌಂಡೇಷನ್** : ಗಾನ ಗಾರುಡಿಗ ಸಿ.ಅಶ್ವಥ್ ಅವರ ಸಂಕ್ರಾಂತಿ ಸತ್ಯಾವತಾರ ಗಾಯನ, ಅಧ್ಯಕ್ಷತೆ : ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಮೈಸೂರು ಘಟಕದ ಅಧ್ಯಕ್ಷ ಡಾ.ನಾಗರಾಜ ವಿ.ಬೈರಿ, ಮುಖ್ಯ ಅತಿಥಿಗಳು : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಂಸ್ಕೃತಿ ಚಿಂತಕ ಡಾ.ರಘುರಾಂ ವಾಜಪೇಯಿ, ಬಡಗನಾಡು ಬಳಗದ ಅಧ್ಯಕ್ಷ ಬಿ.ಎನ್. ಪ್ರಭಾಕರ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ

■ **ಶ್ರೀ ಮಹಾಜನ ಸಭಾ:** ಧನುರ್ಮಾಸದ ಪ್ರಯುಕ್ತ ಶ್ರೀ ವೈಷ್ಣವ ಭಕ್ತ ಪರಾಯಣೆ ಆಂಡಾಳ್ (ಗೋದಾ ದೇವಿ) ವಿರಚಿತ ತಿರುಪ್ಪಾವೈ ಪಾಶುರಗಳ ಪ್ರವಚನ, ಮೇಲುಕೋಟೆಯ ಉ॥ ವೇ॥ ಶ್ರೀ ಮುಡುಂಬೆ ರಾಮಾನುಜನ್ ಅವರಿಂದ, ಸ್ಥಳ: ಶ್ರೀರಾಮ ಮಂದಿರ, ಕೃಷ್ಣಮೂರ್ತಿಪುರಂ, ಸಂಜೆ 6.30ಕ್ಕೆ

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ:** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮೈಸೂರು ಮಹಾರಾಣಿ ಕಲಾ ಕಾಲೇಜಿನ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರಾದ ವಿದ್ವನ್ಮಣಿ, ದರ್ಶನವಾರಿಧಿ ವಿದುಷಿ ಡಾ. ಕೆ.ಎಲ್.ಪ್ರಸನ್ನಾಕ್ಷಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ.

■ **ಶ್ರೀ ಬರಕ್ಕಿ ರಾಮೇಗೌಡರ ಮಿತ್ರ ಮಂಡಲಿ :** ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ದಿವಂಗತ ಪುಟ್ಟಸ್ವಾಮಯ್ಯ ವಿರಚಿತ 'ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ' ಪೌರಾಣಿಕ ನಾಟಕ ಪ್ರದರ್ಶನ, ಮುಖ್ಯ ಅತಿಥಿಗಳು: ಶಾಸಕ ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ಕರ್ನಾಟಕ ಕಾವಲು ಪಡೆ ರಾಜ್ಯಾಧ್ಯಕ್ಷ ಎಂ. ಮೋಹನ್‌ಕುಮಾರ್‌ಗೌಡ, ಉದ್ಯಮಿ ಕೆ.ನಂಜುಂಡಸ್ವಾಮಿ, ಸ್ಥಳ: ಶ್ರೀ ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ, ಕೆ.ಜಿ.ಕೊಪ್ಪಲು, ರಾತ್ರಿ 7.30ಕ್ಕೆ.

ರಂಗಾಯಣ
ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ

ಭೂಮಿಗೀತ : ಉದ್ಘಾಟನಾ ಸಮಾರಂಭ ಬೆಳಗ್ಗೆ 11ಕ್ಕೆ.

ಆಶಯ ನುಡಿ: ಬಹುರೂಪಿ ಚಲನಚಿತ್ರೋತ್ಸವ ಸಂಯೋಜಕ ಕೆ.ಮನು, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮುಖ್ಯ ಅತಿಥಿಗಳು : ಚಲನಚಿತ್ರ ನಟಿ ಶ್ರೀಮತಿ ಭಾವನಾ ರಾಮಣ್ಣ, ರಂಗ ಸಮಾಜ ಸದಸ್ಯ ಡಾ.ರಾಜಪ್ಪ ದಳವಾಯಿ, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ : ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು.

ವನರಂಗ: ಬಹುರೂಪಿ ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ರಂಗೋತ್ಸವ ಉದ್ಘಾಟನೆ: ಹಿರಿಯ ರಂಗಕರ್ಮಿ ಅತುಲ್ ಕುಲಕರ್ಣಿ, ಪುಸ್ತಕ, ಕರಕುಶಲ ಮೇಳ ಉದ್ಘಾಟನೆ: ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ರಂಗ ಸಂಚಿಕೆ ಬಿಡುಗಡೆ: ಕನ್ನಡ–ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಚಿತ್ರಕಲಾ ಪ್ರದರ್ಶನ ಉದ್ಘಾಟನೆ: ಸಂಸದ ಯದುವೀರ್ ಒಡೆಯರ್, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ವಿಶೇಷ ಆಹ್ವಾನಿತರು: ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ, ಡಾ.ಕೆ.ಧರಣಿದೇವಿ ಮಾಲಗತ್ತಿ, ಸೀಮಾ ಲಾಟ್ಕರ್, ಕೆ.ಎಂ.ಗಾಯಿತ್ರಿ, ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಎಚ್.ಎಸ್. ಸುರೇಶ್‌ಬಾಬು, ಸಂಜೆ 5ಕ್ಕೆ

ಭೂಮಿಗೀತ : ರಂಗಾಯಣ ರೆಪರ್ಟರಿ ಹಿರಿಯ ಕಲಾವಿದರಿಂದ 'ಕಾಣೆ ಆದವರು' (ಕನ್ನಡ) ನಾಟಕ ಪ್ರದರ್ಶನ, ನಿರ್ದೇಶನ : ಸೌರವ್, ಸಂಜೆ 6.30ಕ್ಕೆ

ಕಿರುರಂಗ ಮಂದಿರ : ನಿಭಾ ಥಿಯೇಟರ್ ಎನ್ಸೆಂಬಲ್ ಹೈದರಾಬಾ, ತೆಲಂಗಾಣ ಕಲಾವಿದರಿಂದ 'ಪಾಕುದೂರಾಳ್ಳು' (ತೆಲುಗು) ನಾಟಕ ಪ್ರದರ್ಶನ, ನಿರ್ದೇಶನ : ನಸ್ರಿನ್ ಇಷಾಕ್, ಸಂಜೆ 7ಕ್ಕೆ

ಬಹುರೂಪಿ ಚಲನಚಿತ್ರೋತ್ಸವ : ಇಮಾನ್ಸಿಪೇಷನ್ (2022) ಇಂಗ್ಲೀಷ್, ನಿರ್ದೇಶನ : ಆಂಟೊಯಿನ್ ಪುಕ್ವಾ, ಮಧ್ಯಾಹ್ನ 2 ರಿಂದ.

ಕಿಂದರಿ ಜೋಗಿ ಆವರಣ : ಕೊಂಕಣಿ ಖಾರ್ವಿ ಕಲಾ ಮಾಂಡ್, ಭಟ್ಕಳ ಅವರಿಂದ ಕೊಂಕಣಿ ಖಾರ್ವಿ ಜಾನಪದ ಕಲಾನೃತ್ಯ, ಸಂಜೆ 5.30ಕ್ಕೆ.

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ನಾಳಿನ ಪಂಚಾಂಗ

15.01.2025 ಬುಧವಾರ, ಮಳೆ ನಕ್ಷತ್ರ: ಪೂಷಾ, 29.12.2024ರಿಂದ 16.01.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಪುಷ್ಯ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ರಂಗ ದಿಗ್ಗಜರು–ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ ಮರೆಯಬಾರದ ಮಹನೀಯರು, ಲೇಖನ–ಎಸ್.ರಾಮನಾಥ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಸ್.ಸಂಗೀತಾ, ಜಯಂತಿ ವಿ.ಭಟ್, ವ್ಯಾಖ್ಯಾನ–ಡಾ.ಹೆಚ್.ಎನ್.ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಆರೋಗ್ಯವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, 8.30 ಚಿತ್ರಗೀತೆಗಳು, 9.00 ಮನೋನಂದನ–ಪ್ರಾಯೋಜಿತ ಮಾನಸಿಕ ಆರೋಗ್ಯ ಕಾರ್ಯಕ್ರಮ 'ಹದಿಹರೆಯದ ಮಕ್ಕಳೊಂದಿಗೆ ಸಂಭಾಷಣೆ' ಕುರಿತು ತಿಳಿಸಿಕೊಡಲಿದ್ದಾರೆ ಮಾನಸಿಕ ರೋಗ ತಜ್ಞರಾದ ಡಾ. ಅಭಿಜಿತ್ ಹೆಚ್. ಆರ್. ಪ್ರಾಯೋಜಕರು: ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣಾ ಫರ್ಟಿಲಿಟಿ ಕುವೆಂಪುನಗರ, ಮೈಸೂರು ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್ 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ಸಂಜನಾ ಕೌಶಿಕ್–ಹಾಡುಗಾರಿಕೆ, 10.30 –ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ **ಮಧ್ಯಾಹ್ನ:** 12.35 ಆಯುಷ್ ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40–ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಎಸ್.ರಾಜಲಕ್ಷ್ಮಿ–ವೀಣಾವಾದನ, 4.00 ಮಹಿಳಾರಂಗ. 4.45 ಹಿಂದಿ ಪಾಠ, ಪ್ರಸ್ತುತಿ: ಡಾ.ಜಯಂತಿ ಪ್ರಸಾದ್ ನೌಟಿಯಾಲ್, 6.50–ಕೃಷಿರಂಗ: ಮೇವು ಮೆಲುಕು, ಮೇವಿನ ಬೆಳೆಗಳ ಬೇಸಾಯ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ. ಮೇವು ಬೆಳೆ ಅಭಿವೃದ್ಧಿಗೆ ಯೋಜನೆಗಳು. ಈ ಕುರಿತು ಮೈಸೂರು ಜಿಲ್ಲಾ ಪಶುಪಾಲನೆ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕ ಡಾ.ನಾಗರಾಜ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವ ಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30–ಸವಿನೆನಪು

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಮಹತೋಭಾರ ಶ್ರೀ ಧರ್ಮಶಾಸ್ತ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ಬಹುಜನ ಸಮಾಜ ಪಾರ್ಟಿ:** ಮಾಯಾವತಿ ಅವರ ಹುಟ್ಟುಹಬ್ಬದ ಪ್ರಯುಕ್ತ ರಕ್ತದಾನ ಶಿಬಿರ, ಸ್ಥಳ: ಪುರಭವನ, ಬೆಳಗ್ಗೆ 8.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮೂತ್ರಪಿಂಡ (ಕಿಡ್ನಿ) ಕಾಯಿಲೆ ಮತ್ತು ಆರೋಗ್ಯಾಯುಷ್ಯ ಆರೋಗ್ಯವರ್ಧಕ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ಗಂಟೆಗೆ.

■ **ಮೈಸೂರು ಜಿಲ್ಲಾ ಪವರ್ ಲಿಫ್ಟಿಂಗ್ ಅಸೋಸಿಯೇಷನ್** : ಸರ್ವ ಸದಸ್ಯರ ಸಭೆ, ಸ್ಥಳ: ಕೆ. ಶಿವರಾಂ ಕ್ರೀಡಾಂಗಣ, ಬುದ್ಧ ಜ್ಞಾನಮಂದಿರ ಸಭಾಂಗಣ, ಅಶೋಕಪುರಂ, ಸಂಜೆ 4ಕ್ಕೆ.

■ **ಶ್ರೀ ಮಹಾಲಕ್ಷ್ಮಿ ಚಾರಿಟಬಲ್ ಟ್ರಸ್ಟ್:** ಸ್ವಾಮಿ ವಿವೇಕಾನಂದರ 163ನೇ ಜನ್ಮ ದಿನೋತ್ಸವ ಸಮಾರಂಭ ಮತ್ತು ಮುದ್ದುರಾಮ ಖ್ಯಾತಿಯ ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ ಅವರಿಗೆ ಅಭಿನಂದನಾ ಸಮಾರಂಭ, ಉದ್ಘಾಟನೆ: ತುಮಕೂರಿನ ಸುಕ್ಷೇತ್ರ ಹಿರೇಮಠ ತಪೋವನದ ಪೀಠಾಧಿಪತಿ ಡಾ.ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಸಂಸ್ಕೃತಿ ಚಿಂತಕ ಶಂಕರ್ ದೇವನೂರು, ಮುಖ್ಯ ಅತಿಥಿಗಳು : ಪ್ರಾಧ್ಯಾಪಕರಾದ ಬೆಟ್ಟಸ್ವಾಮಿ, ಚುಟುಕು ಯೋಗಾಚಾರ್ಯ ಡಾ.ಎಂ.ಜಿ.ಆರ್.ಅರಸ್, ಸ್ಥಳ: ಮಾಧವ ಶೆಣೈ ಸಭಾಂಗಣ, ಜೆ.ಪಿ.ನಗರ, ಸಂಜೆ 5.30ಕ್ಕೆ.

ರಂಗಾಯಣ
ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ

ಭೂಮಿಗೀತ : ಮುಂಬೈ ಮೆಜೋಕ್ ತಂಡದಿಂದ ಮೆಜೋಕ್ (ಬಹುಭಾಷಾ) ನಾಟಕ ಪ್ರದರ್ಶನ, ರಚನೆ, ನಿರ್ದೇಶನ : ಜ್ಯೋತಿ ಡೋಗ್ರಾ, ಸಂಜೆ 6.30ಕ್ಕೆ.

ಕಿರುರಂಗ ಮಂದಿರ : ಬೆಂಗಳೂರಿನ ರಂಗರಥ ಟ್ರಸ್ಟ್ ಕಲಾವಿದರಿಂದ ಧರ್ಮನಟಿ (ಕನ್ನಡ) ನಾಟಕ ಪ್ರದರ್ಶನ, ರಚನೆ : ಸಿದ್ದಲಿಂಗ ಪಟ್ಟಣಶೆಟ್ಟಿ, ನಿರ್ದೇಶನ : ಆಸಿಫ್ ಕ್ಷತ್ರಿಯ ಮತ್ತು ಶ್ವೇತಾ ಶ್ರೀನಿವಾಸ್, ಸಂಜೆ 7ಕ್ಕೆ

ವನರಂಗ : ಶ್ರೀ ಕುಮಾರೇಶ್ವರ ನಾಟಕ ಸಂಘ, ಚಿತ್ರದುರ್ಗ ಅವರಿಂದ ಮುದುಕನ ಮದುವೆ (ಕನ್ನಡ) ನಾಟಕ ಪ್ರದರ್ಶನ, ರಚನೆ : ಪಿ.ಬಿ. ದುತ್ತರಗಿ, ನಿರ್ದೇಶನ : ಬಿ. ಕುಮಾರಸ್ವಾಮಿ, ಸಂಜೆ 7ಕ್ಕೆ.

ಕಲಾಮಂದಿರ : ಧಮನಿ, ಕುಂದಾಪುರ, ಕಲಾಭಿ ಚಿಲ್ಡ್ರನ್ಸ್ ಥಿಯೇಟರ್, ಬೆಂಗಳೂರು ಅವರಿಂದ ಮೊಗ್ಲಿ (ಕನ್ನಡ) ನಾಟಕ ಪ್ರದರ್ಶನ, ರಂಗರೂಪ, ನಿರ್ದೇಶನ : ಭುವನ್ ಮಣಿಪಾಲ್, ಸಂಜೆ 7.30ಕ್ಕೆ.

ಬಹುರೂಪಿ ಚಲನಚಿತ್ರೋತ್ಸವ : ಬೆಳಗ್ಗೆ 10.30 ರಿಂದ ಫ್ರೀಡಂ ಅಫ್ ಬ್ಯೂಟಿಫುಲ್ (2023), ನಿರ್ದೇಶನ: ಅನ್ಗಸ್ ಮಾಕ್ ಡೊನಾಲ್ಡ್; ಮಧ್ಯಾಹ್ನ 12 ರಿಂದ ದಿ ಜರ್ನಿ ಆಫ್ ಟಿಬೇಟನ್ ರೆಫ್ಯೂಜೀಸ್: ಎ ಸ್ಟ್ರಗಲ್ ಫಾರ್ ಫ್ರೀಡಮ್ ಅಕ್ರಾಸ್ ದಿ ಹಿಮಾಲಯಾಸ್, ನಿರ್ದೇಶನ: ಲಿಸಾ ಸಿಂಕ್ಲೇರ್ ಮತ್ತು ಮೈಕೆಲ್ ಸ್ಕಾಟ್; ಮಧ್ಯಾಹ್ನ 2 ರಿಂದ ದಾಮುಲ್ (ಹಿಂದಿ), ನಿರ್ದೇಶನ : ಪ್ರಕಾಶ್ ಝಾ.

ಕಿಂದರಿ ಜೋಗಿ ಆವರಣ: ಬೋಳಕಾಟ್ ಮತ್ತು ಕತ್ತಿಯಾಟ್, ಕೊಡಗು, ಸಂಜೆ 5.30ಕ್ಕೆ

ಮಕ್ಕಳ ಬಹುರೂಪಿ, ಸ್ಥಳ: ಕರ್ನಾಟಕ ಕಲಾಮಂದಿರ, ಸಂಜೆ 6ಕ್ಕೆ ಉದ್ಘಾಟನೆ: ಚಿತ್ರನಟ ಪ್ರಕಾಶ್‌ರಾಜ್, ಮುಖ್ಯ ಅತಿಥಿಗಳು: ರಂಗ ಸಮಾಜದ ಸದಸ್ಯ ಶಶಿಧರ್ ಭಾರೀಘಾಟ್, ಉಪಸ್ಥಿತರು: ಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ: ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು.

ಆನ್‌ಲೈನ್ ದೋಖಾ: ಮತ್ತೊಂದು ಪ್ರಕರಣ ವರದಿ

ಮಹಿಳಾ ಅಕೌಂಟೆಂಟ್‌ಗೆ ಲಕ್ಷಾಂತರ ವಂಚನೆ ಮೂಲಕ 'ಲೆಕ್ಕ'ದ ಪಾಠ!


ಮೈಸೂರು, ಜ.13(ಎಸ್‌ಬಿಡಿ)– ಅಕೌಂಟೆಂಟ್ ಒಬ್ಬರು ಲಾಭದ ಆಸೆಗೆ ಆನ್‌ಲೈನ್‌ನಲ್ಲಿ 6 ಲಕ್ಷಕ್ಕೂ ಹೆಚ್ಚು ಹಣ ಹೂಡಿಕೆ ಮಾಡಿ, ಮೋಸ ಹೋಗಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಮೈಸೂರಿನ ವಿಜಯನಗರದಲ್ಲಿ ವಾಸವಿರುವ ಮಹಿಳಾ ಅಕೌಂಟೆಂಟ್ ಒಬ್ಬರು ಟೆಲಿಗ್ರಾಂನಲ್ಲಿ ಬಂದ ಸಂದೇಶವನ್ನು ನಂಬಿ ವಿವಿಧ ಹಂತಗಳಲ್ಲಿ ಹೂಡಿಕೆ ಮಾಡಿದ ಒಟ್ಟು 6,14,159 ರೂ.ಗಳನ್ನು ಸೈಬರ್ ವಂಚಕರು ಲಪಟಾಯಿಸಿದ್ದಾರೆ.


ಸರಳ ಟಾಸ್ಕ್ ಪೂರೈಸುವ ಮೂಲಕ ಲಾಭ ಗಳಿಸಬಹುದೆಂಬ ಸಂದೇಶವನ್ನು ಆರಂಭದಲ್ಲಿ ನಿರ್ಲಕ್ಷಿಸಿದ ಅಕೌಂಟೆಂಟ್, ನಂತರ ಈ ಬಗ್ಗೆ ಆಸಕ್ತಿ ಇದೆ ಎಂದು ಪ್ರತಿಕ್ರಿಯಿಸಿದ್ದಾರೆ. ಬಳಿಕ ಸೂಚನೆಯಂತೆ ಟಾಸ್ಕ್ ಖಾತೆ ತೆರೆದಿದ್ದಾರೆ. ತಕ್ಷಣವೇ ನೀಡಿದ ಒಂದು ಸರಳ ಟಾಸ್ಕ್ ಪೂರ್ಣಗೊಳಿಸಿದ್ದಕ್ಕೆ ಸಾವಿರ ರೂ. ಲಾಭ ನೀಡಿ, ಹಣ ಹೂಡಿಕೆ ಮಾಡಿ ಟಾಸ್ಕ್ ಪೂರ್ಣಗೊಳಿಸಿದರೆ ಹೆಚ್ಚು ಲಾಭ ಗಳಿಸಬಹುದು ಎಂದು ತಿಳಿಸಲಾಗಿದೆ.


ಇದನ್ನು ನಂಬಿ 10 ಸಾವಿರ ರೂ. ಹೂಡಿಕೆ ಮಾಡಿ, ಟಾಸ್ಕ್ ಪೂರ್ಣಗೊಳಿಸಿದ್ದಾರೆ. ಅದಕ್ಕೆ 20,800 ರೂ. ಲಾಭ ನೀಡಿದ್ದಾರೆ. ಇನ್ನೂ ಹೆಚ್ಚಿನ ಲಾಭದ ಆಸೆಗೆ ಮತ್ತೆ 10 ಸಾವಿರ ಹೂಡಿಕೆ ಮಾಡಿದ್ದಾರೆ. ಆದರೆ ಟಾಸ್ಕ್ ಪೂರ್ಣಗೊಳಿಸಿದರೂ ಲಾಭದ ಹಣವನ್ನು ಹೋಲ್ಡ್ ಮಾಡಿ, ಟಾಸ್ಕ್ ಮುಂದುವರೆಸಲು ಮತ್ತಷ್ಟು ಹಣ ಹೂಡಿಕೆ ಮಾಡಬೇಕೆಂದು ತಿಳಿಸಲಾಗಿದೆ. ಬಳಿಕ ಹಂತಹಂತವಾಗಿ 6 ಲಕ್ಷಕ್ಕೂ ಹೆಚ್ಚು ಹಣ ಹೂಡಿಕೆ ಮಾಡಿಸಿಕೊಂಡು, ವಂಚಿಸಲಾಗಿದೆ.











IN THE COURT OF THE HON'BLE PRINCIPAL DISTRICT & SESSIONS, AT MYSORE

In the matter of:

P & SC. No.: 2 of 2025

Between:

APPLICANT: Mr. RICHARD PRASHANTH BENNYSON.

S/o Late Mr. V.K. Bennyson & Late Mrs.C. Celina. Aged about 29 years. Residing at #1054/A, Prashantha Nilaya, Kalpavruksha Nagara, Kesare 3rd Stage, N.R. Mohalla, Mysuru, Karnataka-570 007.

AND:

RESPONDENT: -NIL-

PAPER PUBLICATION

The public at late is hereby notified that the applicant has installed the above petition for the issuance of a Succession Certificate in respect of the Savings Bank Accounts mentioned in the schedule below in favour of the Applicant. If any person / persons has / have any interest / objections to the same, you may raise the same in person or through your counsel/s on 31st day of January 2025 at 11 am before the Hon'ble Principal District & Sessions Judge, at Mysuru and implead yourself in the above petition for the necessary. Else, it will be presumed that there are no other persons has any interest in the above petition and the matter will be proceeded with in accordance with law.

SCHEDULE

Item No. A:

The Savings Bank Account maintained with State Bank of India, V.M. Double Road, Kuvempunagar Branch, Mysuru [IFSC Code SBIN0040441] bearing Account No. 54027488019, CIF No.: 78402747424] together with LOCKER and its contents and any other benefits payable.

Item No. B:

The Savings Bank Account maintained with State Bank of India, N.R. Mohalla Branch, Mysuru [IFSC Code SBIN0016499] bearing Account No. 54003097270, CIF No.: 78402747424] together with interests and any other benefits payable.

Given under my hand and seal on 9-1-25.

By the Order of the Court
Chief Administrative Officer
District & Sessions Court, Mysore
Advocate for the Applicant.
Place: Mysuru
Date: 20-12-24





ನಕ್ಕರೆ ಅದೇ ಸ್ವರ್ಗ

ಪರಿಚಿತ ವ್ಯಕ್ತಿ : ಏನಮ್ಮಾ ನಿನ್ನ ಗಂಡ ಚೆನ್ನಾಗಿದ್ದಾನಾ?
ಹೆಂಗಸು : ಏನ್ ಸ್ವಾಮಿ, ನನ್ನ ಗಂಡನನ್ನು ಏಕವಚನದಲ್ಲಿ ಮಾತಾಡಿಸ್ತೀರಾ?
ಪರಿಚಿತ ವ್ಯಕ್ತಿ : (ಯೋಚಿಸಿ) ಕ್ಷಮಿಸು ತಾಯಿ ಗೊತ್ತಾಗಲಿಲ್ಲ.
ನಿನ್ನ ಗಂಡಂದಿರೆಲ್ಲಾ ಚೆನ್ನಾಗಿದ್ದಾರಾ?

ಮೈಸೂರು ಮಿತ್ರ

ಮಂಗಳವಾರ, 14 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ನಾಳೆಯೇ ಸಾಯಬಹುದೆಂಬಂತೆ ಜೀವಿಸು, ಯಾವಾಗಲೂ ಜೀವಿಸುತ್ತೇನೆ ಎಂಬಂತೆ ಕಲಿಕೆಯನ್ನು ಮಾಡು. –ಮಹಾತ್ಮಗಾಂಧಿ

ವೇದ ಸುಳ್ಳಾದರೂ { ಮಂತ್ರಕ್ಕಿಂತ
ಗಾದೆ ಸುಳ್ಳಾಗದು { ಉಗುಳೇ ಜೋರು

ನಿಮ್ಮ ಪತ್ರಗಳು

■ ಮೂಲ ಕಾಂಗ್ರೆಸ್ಸಿಗ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆದ್ರೆ ತಪ್ಪೇನಿಲ್ಲ

ಮಾನ್ಯರೆ,

ದೇಶದಲ್ಲಿ ಕಾಂಗ್ರೆಸ್ ಎಲ್ಲಿದೆ ಎಂದರೆ ಅದು ಕರ್ನಾಟಕದಲ್ಲಿದೆ ಎಂದು ದೇಶದ ಜನ ಇವತ್ತಿಗೂ ಪುನರುಚ್ಚರಿಸುತ್ತಾರೆ. ದೇಶದಲ್ಲಿ ಎಂತಹ ಭಯಂಕರ ಅಲೆ ಬಂದರೂ ಕರ್ನಾಟಕದಲ್ಲಿ ಮಾತ್ರ ಕಾಂಗ್ರೆಸ್ ಅಲೆ ಇದ್ದೇ ಇದೆ. 138 ಶಾಸಕರು ಆಯ್ಕೆಯಾಗಿದ್ದಾರೆ. ಬಹುತೇಕ ಕಾಂಗ್ರೆಸ್ ಮಹಿಳಾ ಅಭ್ಯರ್ಥಿಗಳು ಸೋತು ಬಿಟ್ಟರು. ಒಂದು ವೇಳೆ ಮಹಿಳಾ ಕಾಂಗ್ರೆಸ್ ಅಭ್ಯರ್ಥಿಗಳು ಸಾಕಷ್ಟು ಗೆದ್ದಿದ್ದರೆ, 138 ರ ಸಂಖ್ಯೆ 150ಕ್ಕೂ ಅಧಿಕ ಸಂಖ್ಯೆಯನ್ನು ದಾಟುವ ಸಾಧ್ಯತೆ ಇತ್ತು. ಐದು ವರ್ಷಕ್ಕೊಮ್ಮೆ ಚುನಾವಣೆ ನಡೆಯುವುದರಿಂದ ವರ್ಷದಿಂದ ವರ್ಷಕ್ಕೆ ಕೆಲ ಜನರ ಮನಸ್ಸಿನ ಮನಸ್ಥಿತಿಗಳು ಬದಲಾಗಬಹುದು ಇಲ್ಲವೇ ಹೊಸ ಮತದಾರನ ಒಲವು ಬೇರೆ ಕಡೆ ವಾಲಬಹುದು. ಇಲ್ಲವೇ ಮತದಾರ ಸ್ಥಳಾಂತರ, ಮತದಾನದಿಂದ ದೂರ, ಗೈರಾಗಿ ಸಂಖ್ಯೆಯಲ್ಲಿ ಹೆಚ್ಚು–ಕಡಿಮೆ ವ್ಯತ್ಯಾಸ ಕಂಡು ಬರಬಹುದು. ಆದರೂ ಕರ್ನಾಟಕದಲ್ಲಿ ಮಾತ್ರ ಕಾಂಗ್ರೆಸ್ ಕಡಿಮೆ ಎಂದರೂ 85–95 ವಿಧಾನಸಭಾ ಕ್ಷೇತ್ರದಲ್ಲಿ ಸಲೀಸಾಗಿ ಗೆಲ್ಲಬಹುದಾಗಿದೆ. ದೇಶದ ಯಾವುದೇ ಮೂಲದ ವ್ಯಕ್ತಿಯೊಬ್ಬರನ್ನು ಕೇಳಿದರೂ ಕಾಂಗ್ರೆಸ್ ಇರೋದೇ ಕರ್ನಾಟಕದಲ್ಲಿ ಎಂದು ಉತ್ತರ ಸಿಗುತ್ತದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ತೆಲಂಗಾಣ, ಹಿಮಾಚಲ ಪ್ರದೇಶ ರಾಜ್ಯದಲ್ಲಿ ಅಧಿಕಾರಕ್ಕೆ ಬಂತು. ಎಸ್.ಎಂ.ಕೃಷ್ಣ ನಂತರ ಮೂಲ ಕಾಂಗ್ರೆಸ್ಸಿಗರು ಮುಖ್ಯಮಂತ್ರಿಯಾಗಿಲ್ಲ. ಡಿ.ಕೆ.ಶಿವಕುಮಾರ್ ಮೂಲ ಕಾಂಗ್ರೆಸ್ಸಿಗರಾಗಿದ್ದಾರೆ. ಮೊದಲಿನಿಂದಲೂ ಕಾಂಗ್ರೆಸ್ಸಿನಿಂದ ಗುರುತಿಸಿಕೊಂಡಿರುವ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬೇಕು ಎಂಬ ಕಾಂಗ್ರೆಸ್ ಕಾರ್ಯಕರ್ತರ ಆಶಯವೂ ಇದೆ. ಕಾಂಗ್ರೆಸ್ ಹೈಕಮಾಂಡ್ ತೆಗೆದು ಕೊಳ್ಳುವ ನಿರ್ಧಾರದ ಮೇಲೆ ಡಿ.ಕೆ.ಶಿವಕುಮಾರ್ ಭವಿಷ್ಯ ನಿರ್ಧಾರವಾಗಲಿದೆ. ಅಲ್ಲಿಯವರೆಗೂ ರಾಜಕೀಯ ತಲ್ಲಣ, ಬಣ ರಾಜಕೀಯ, ಗುಪ್ತ ವಿಚಾರಗಳು, ಗುಪ್ತ ಸಭೆ ಸಮಾರಂಭಗಳನ್ನು ಪಕ್ಕಕ್ಕೆ ಸರಿಸುವುದು ಉತ್ತಮ. ಈಗ ಏನಿದ್ದರೂ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ ಎಂಬ ಉತ್ತರ, ಐದು ವರ್ಷ ನಮ್ಮದೇ ಸರ್ಕಾರ ಎಂಬ ಧ್ಯೇಯವಾಕ್ಯ ಇರಲಿ.

–ವೀರೇಶ ಧೂಪದಮಠ, ಮೈಸೂರು.

■ ನಕ್ಸಲ್ ಮುಕ್ತ ದೇಶ !

ಮಾನ್ಯರೆ,

ಕರ್ನಾಟಕದ ಆರು ಮಂದಿ ನಕ್ಸಲರು ರಾಜ್ಯ ಸರ್ಕಾರಕ್ಕೆ ಶರಣಾದ ಬೆನ್ನಲ್ಲೇ ಬಿಜೆಪಿ ಆಳ್ವಿಕೆಯ ಛತ್ತೀಸ್‌ಘಡದಲ್ಲಿ 43 ಲಕ್ಷ ರೂಪಾಯಿ ಇನಾಮು ಹೊಂದಿದ್ದ ಇಬ್ಬರು ಮಹಿಳೆಯರು ಸೇರಿದಂತೆ ಒಟ್ಟು 9 ಮಂದಿ ನಕ್ಸಲರು ಪೊಲೀಸರಿಗೆ ಶರಣಾಗಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಇವರೆಲ್ಲರಿಗೂ ರಾಜ್ಯ ಸರ್ಕಾರ, ತಲಾ 25 ಸಾವಿರ ರೂಪಾಯಿಗಳನ್ನು ನೀಡಿದ್ದು, ತನ್ನ ನೀತಿಯಂತೆ ಪುನರ್ವಸತಿ ಕಲ್ಪಿಸಲಾಗುವುದೆಂದು ಹೇಳಿದೆ. ಬೇರೆ ಬೇರೆ ರಾಜ್ಯಗಳಲ್ಲಿರುವ ನಕ್ಸಲರು ಕೂಡ ಇದೇ ಹಾದಿ ಹಿಡಿದರೆ, ಶೀಘ್ರದಲ್ಲೇ, ಇಡೀ ದೇಶವೇ ನಕ್ಸಲ್ ಮುಕ್ತವಾಗಬಹುದೆಂಬ ಆಶಾಭಾವನೆ ಚಿಗುರೊಡೆದಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

■ ಬಹುರೂಪಿ–ಸಂಕ್ರಾಂತಿ

ಮಾನ್ಯರೇ,

ಈ ವರ್ಷದ ಮೊದಲ ಹಬ್ಬ ಸಂಕ್ರಾಂತಿಗೆ ಮೈಸೂರಲ್ಲಿ ಮತ್ತಷ್ಟು ಸಡಗರ–ಸಂಭ್ರಮ ಹೆಚ್ಚಲಿದೆ. ಕಾರಣ ಮೈಸೂರು ದಸರಾದಷ್ಟೇ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ. ಮೈಸೂರು ರಂಗಾಯಣ ಕಳೆದ 31 ವರ್ಷಗಳಿಂದ ಅಮೋಘ ರಂಗ ಚಟುವಟಿಕೆ ನಡೆಸುತ್ತಾ ಬಂದಿದೆ. ಈ ಬಾರಿಯ ಬಹುರೂಪಿಯು ಬಿಡುಗಡೆ (ಸಾಮಾಜಿಕ ನ್ಯಾಯ–ಚಳುವಳಿಗಳು ಮತ್ತು ರಂಗಭೂಮಿ) ಎಂಬ ಶೀರ್ಷಿಕೆ ಅಡಿಯಲ್ಲಿ 2025ರ ಜನವರಿ 14 ರಿಂದ 19 ರವರೆಗೆ 6 ದಿನಗಳ ಕಾಲ ಮೈಸೂರಿನ ಕಲಾಮಂದಿರದ ರಂಗಾಯಣದಲ್ಲಿ ಜರುಗಲಿದೆ. ಭಾರತದ ಬೇರೆ ಬೇರೆ ಭಾಷೆಗಳ 24 ನಾಟಕಗಳು, ಜನಪದ ಉತ್ಸವಗಳು, ಸಂಗೀತ, ನೃತ್ಯ, ಕವಿಗೋಷ್ಠಿ, ಚಲನಚಿತ್ರೋತ್ಸವ ಹಾಗೂ ವಿಶೇಷವಾಗಿ ಏಕಕಾಲದಲ್ಲಿ ಬಹುರೂಪಿಯಲ್ಲಿ ಮಕ್ಕಳ ನಾಟಕಗಳು ಪ್ರದರ್ಶನಗೊಳ್ಳಲಿವೆ. ನೂರಾರು ಕಲಾ ತಂಡಗಳು ಭಾಗಿಯಾಗಲಿದ್ದು ಸಾವಿರಾರು ಸಂಖ್ಯೆಯಲ್ಲಿ ಸಾರ್ವಜನಿಕರು, ಕಲಾ, ಸಾಹಿತ್ಯ, ಸಂಗೀತ, ನೃತ್ಯ ಪ್ರೇಮಿಗಳು ದೇಶದ ವಿವಿಧ ಭಾಗಗಳಿಂದ ಬರುತ್ತಾರೆ. ಈ ಬಾರಿಯ ಬಹುರೂಪಿ ಯಶಸ್ವಿಯಾಗಲೆಂದು ಆಶಿಸುತ್ತೇನೆ.

–ಅಂಕರಾಜು ಎನ್, ನಟ ನಿರ್ದೇಶಕ , ಮೈಸೂರು

■ ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಮರು ನಿರ್ಮಾಣ ಸೂಕ್ತ

ಮಾನ್ಯರೆ,

ಮೈಸೂರು – ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಅನ್ನು ನೆಲಸಮ ಮಾಡಬೇಡಿ. ಪಾರಂಪರಿಕ ಶೈಲಿಯಲ್ಲಿರುವ ಈ ಕಟ್ಟಡಗಳನ್ನು ಸಂರಕ್ಷಿಸಬೇಕೆಂದು ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದಾರೆ.

ಆದರೆ ಈ ಎರಡೂ ಪಾರಂಪರಿಕ ಕಟ್ಟಡಗಳು ಈಗಾಗಲೇ ಶಿಥಿಲಾವಸ್ಥೆಯಲ್ಲಿದ್ದು, ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಅನ್ನು ಸಂಪೂರ್ಣ ನೆಲಸಮಗೊಳಿಸಿ ಪುನರ್ ನಿರ್ಮಾಣ ಮಾಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರು ತಿಳಿಸಿದ್ದು, ಸಚಿವ ಸಂಪುಟ ಸಭೆಯಲ್ಲಿ ಈಗಾಗಲೇ ಅನುಮೋದನೆ ನೀಡಲಾಗಿದೆ ಎಂದು ಹೇಳಿದ್ದಾರೆ.

ಕಳೆದ ಎಂಟು ವರ್ಷಗಳ ಹಿಂದೆಯೇ ಲ್ಯಾನ್ಸ್‌ಡೌನ್ ಕಟ್ಟಡದ ಮಧ್ಯಭಾಗ ಮತ್ತು ದೇವರಾಜ ಮಾರುಕಟ್ಟೆಯ ಒಂದು ಭಾಗ ಕುಸಿದು ಅದಕ್ಕೆ ತೇಪೆ ಹಚ್ಚುವ ಕೆಲಸವನ್ನು ಅಂದಿನಿಂದಲೂ ಮಾಡುತ್ತಲೇ ಇದ್ದಾರೆ. ಈ ಎರಡೂ ಪಾರಂಪರಿಕ ಕಟ್ಟಡಗಳನ್ನು ನೆಲಸಮಗೊಳಿಸಿ, ನೆಲಮಾಳಿಗೆಯಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಿ ಜನಸಾಮಾನ್ಯರಿಗೆ ಮೂಲ ಸೌಕರ್ಯಗಳನ್ನು ಒದಗಿಸಿ, ಹಿಂದಿನ ಪಾರಂಪರಿಕ ವಿನ್ಯಾಸವನ್ನು ಹಾಗೆಯೇ ಉಳಿಸಿಕೊಂಡು, ನಾಲ್ಕು ಅಂತಸ್ತಿನ ಕಟ್ಟಡಗಳು ನಿರ್ಮಾಣವಾಗುವಂತೆ ತಜ್ಞರ ಅಭಿಪ್ರಾಯ ಪಡೆದು ನೂತನ ಕಟ್ಟಡಗಳು ನಿರ್ಮಾಣವಾದರೆ ಇಲ್ಲಿ ಸಾವಿರಾರು ಕುಟುಂಬಗಳು ಬದುಕನ್ನು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಿದಂತಾಗುತ್ತದೆ. ಮೈಸೂರು ನಗರದ ಹೃದಯ ಭಾಗದಲ್ಲಿ ಸ್ವಲ್ಪ ಮಟ್ಟಿಗಾದರೂ, ವಾಹನಗಳ ಪಾರ್ಕಿಂಗ್ ಸಮಸ್ಯೆ ಬಗೆಹರಿಯುತ್ತದೆ. ಜನರ ಸುಗಮ ಸಂಚಾರಕ್ಕೂ ಅನುಕೂಲವಾಗುತ್ತದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.



ಗುಬ್ಬಿಗೂಡು ರಮೇಶ್
ಮೊ: 97429-34512

ದೀಪ ಸಾಲು

ಎಳ್ಳು ಬೆಲ್ಲ ತಿಂದು ಒಳ್ಳೆ ಮಾತಾಡಿ





> ಮಣ್ಣಿನ ಮಕ್ಕಳ ಮನೆಗೆ ಮಕರ ಸಂಕ್ರಾಂತಿ ಬಂದಿದೆ. ಸುಗ್ಗಿಯ ಕಾಲದ ಸೊಬಗು ಸಂಕ್ರಾಂತಿ ಸಮಯದಲ್ಲಿ ಊರು ತುಂಬುತ್ತದೆ. ಊರು ತುಂಬಿದ ಹಬ್ಬದಲ್ಲಿ ದೇವರು ಕಾಣುತ್ತದೆ. ದೇವರೆಂದರೆ ಅದು ಪ್ರೀತಿಯ ಪ್ರತಿರೂಪ, ಅದಕ್ಕೊಂದು ರೂಪವಿದೆ; ಆಕಾರವಿದೆ, ಹೆಸರಿದೆ, ಅದರ ಹೆಸರು ಪುಣ್ಯಕೋಟಿ. ನಮ್ಮ ಮಣ್ಣಿನ ಮಕ್ಕಳ ಕೋಪ–ತಾಪ ಆವೇಶಗಳೆಲ್ಲವನ್ನೂ ಸಹಿಸಿಕೊಂಡು, ವರ್ಷಪೂರ್ತಿ ದುಡಿವ ರಾಸುಗಳಿಗೆ ಸಂಕ್ರಾಂತಿ.

ನಮ್ಮ ನಾಡಿನ ರೈತಾಪಿ ವರ್ಗ ವರ್ಷಪೂರ್ತಿ ಮಂಡಿ ಉದ್ದ ಕಬ್ಬು, ಎದೆ ಮಟ್ಟದ ಸಾಲದಲ್ಲಿ ಬದುಕುವ ಅಪ್ಪಟ ಸಾಲಗಾಮಿ ಸಂತತಿ. ಸಾಲ ಮಾಡಿಯಾದರೂ ಗಡಿಗೆ ತುಪ್ಪ ಕುಡಿದು ಬದುಕುವ ಕಿಲಾಡಿತನಗಳು ನಮ್ಮ ರೈತಕುಲಕ್ಕೆ ದಕ್ಕಲೇ ಇಲ್ಲ. ಜಾಗತೀಕರಣದ ವಿಶ್ವಮಾರುಕಟ್ಟೆ ತೆರೆದುಕೊಂಡರೂ ಕೂಡ ತಾವು ಮಾತ್ರ ತಾವು ಬೆಳೆದ ಹಣ್ಣು ತರಕಾರಿ ಬೆಳೆಗಳನ್ನು ಎ.ಪಿ.ಎಂ.ಸಿ. ಮಾರುಕಟ್ಟೆಗಳ ಪ್ರಾಂಗಣಕ್ಕೆ ತಂದು ಬೆಳೆದ ಬೆಳೆಗೆ ಕೂಲಿ ಹುಟ್ಟುತ್ತೋ ಇಲ್ಲವೋ ಎಂಬ ಇತ್ಯರ್ಥಕ್ಕೆ, ಬೆಲೆ ಸಿಗುವ ತನಕ ಚಾತಕ ಪಕ್ಷಿ ಕಾಯುವ ಹಾಗೆ ಕಾದು ಕುಳಿತವರು. ಇಂಥಾ ಮಣ್ಣಿನ ಮಕ್ಕಳ ಮನೆಗೆ ಮಕರ ಸಂಕ್ರಾಂತಿ ಬಂದಿದೆ. ಸುಗ್ಗಿಯ ಕಾಲದ ಸೊಬಗು ಸಂಕ್ರಾಂತಿ ಸಮಯದಲ್ಲಿ ಊರು ತುಂಬುತ್ತದೆ. ಊರು ತುಂಬಿದ ಹಬ್ಬದಲ್ಲಿ ದೇವರು ಕಾಣುತ್ತದೆ. ದೇವರೆಂದರೆ ಅದು ಪ್ರೀತಿಯ ಪ್ರತಿರೂಪ, ಅದಕ್ಕೊಂದು ರೂಪವಿದೆ; ಆಕಾರವಿದೆ, ಹೆಸರಿದೆ, ಅದರ ಹೆಸರು ಪುಣ್ಯಕೋಟಿ. ನಮ್ಮ ಮಣ್ಣಿನ ಮಕ್ಕಳ ಕೋಪ–ತಾಪ ಆವೇಶಗಳೆಲ್ಲವನ್ನೂ, ಸಹಿಸಿಕೊಂಡು, ವರ್ಷಪೂರ್ತಿ ದುಡಿವ ರಾಸುಗಳಿಗೆ ಸಂಕ್ರಾಂತಿ. ನಮ್ಮ ಗ್ರಾಮಸಮಾಜದಲ್ಲಿ ಈ ಎತ್ತುಗಳ ತಳಿಯನ್ನು 'ಹಳ್ಳಿಕಾರ್' ಅಂತ ಕರೀತೀವಿ. ಹಾಲೆಂಡ್ ದೇಶದ ಹಸುವನ್ನು ಹೆಚ್.ಎಫ್ (Holstien Fresian) ಅಂತೀವಿ. ಹೈಲ್ಯಾಂಡ್‌ನ ಹಸುವನ್ನು ಜೆರ್ಸಿ ಎನ್ನುತ್ತೇವೆ. ಹೆಚ್.ಎಫ್. ಹಸುವಿನ ಹಾಲು ಇಳುವರಿ ಜಾಸ್ತಿ. ಜೆರ್ಸಿಯಲ್ಲಿ ಕೊಬ್ಬಿನ ಅಂಶ ಜಾಸ್ತಿ. ಆದರೆ ಈ ಎರಡರ ಸಮ ಪ್ರಮಾಣವೆಂದರೆ ನಮ್ಮ 'ಹಳ್ಳಿಕಾರ್'. ಇದಕ್ಕೆ ರೋಗ ನಿರೋಧಕ ಶಕ್ತಿ ಜಾಸ್ತಿ. ಅಂದ ಮೇಲೆ ಈ ಎಲ್ಲ ಹಸುಗಳ ಸಂಕುಲವೇ ಮಣ್ಣಿನ ಮಕ್ಕಳ ಹಿತ ಕಾದಿದೆ. ನಮ್ಮ ರಾಸುಗಳಿಗೆ ಪಂಚವಾರ್ಷಿಕ ಯೋಜನೆ ಗೊತ್ತಿಲ್ಲ! ಬೆಂಬಲ ಬೆಲೆ ಗೊತ್ತಿಲ್ಲ! ತಮ್ಮ ದುಡಿಮೆಯೊಂದರಿಂದಲೇ ರೈತನ ಬದುಕಿನ ದಿಕ್ಕು ಬದಲಿಸುವುದು ಗೊತ್ತು! ಸಂಕ್ರಮಣದ ಕಾಲಕ್ಕೆ ನಮ್ಮ ಕಲೆ ಸಂಸ್ಕೃತಿಗಳ ಸಾಂಸ್ಕೃತಿಕ ವಿನ್ಯಾಸಗಳು ಬಿಚ್ಚಿಕೊಳ್ಳುತ್ತವೆ. ಒಳ್ಳೆಯ ಕೆಲಸ ಕಾರ್ಯಗಳು ಶುರುವಾಗುತ್ತವೆ. ಉತ್ತರಾಯಣ ಪುಣ್ಯಕಾಲಕ್ಕಾಗಿ ಕಾದ ಭೀಷ್ಮಾಚಾರ್ಯರ ಅಂತಿಮ ಕ್ಷಣಗಳು, ರಾಸುಗಳು ಹುಮ್ಮಸ್ಸಿನಿಂದ ಕಿಚ್ಚು ಹಾಯುವ ಸಾಹಸೀ ದೃಶ್ಯಗಳು, ಎಳ್ಳು, ಬೆಲ್ಲ ತಿಂದು ಒಳ್ಳೇ ಮಾತಾಡಿ ಎನ್ನುವ ಸಂದೇಶ ವಿನಿಮಯಗಳು ನಮ್ಮ ಸಂಕ್ರಮಣದ ಸುಖ ಹೆಚ್ಚಿಸಿ ಹೋಗಿವೆ. ತಿಂಗಳು ಪೂರ್ತಿ ಎಳ್ಳು–ಬೆಲ್ಲ ವಿನಿಮಯ ನಡೆಯುತ್ತಲೇ ಇರುವ ಸಂಕ್ರಾಂತಿಯ ಸಂಭ್ರಮ ಹತ್ತೂ ಹಬ್ಬಗಳಿಗೆ ಮುತ್ತು ಕಟ್ಟಿದಂತೆ ಬರುತ್ತದೆ. ನಮ್ಮ ಎಲ್ಲಾ ಶ್ರಮ ಸಂಸ್ಕೃತಿಗೂ ಉಸಿರಾಡುವ ಸಾವಧಾನ ಕಲಿಸುತ್ತದೆ. ಹಾಗಾಗಿ ಒಂದು ನಾಡಿನ ಜನ ಜೀವನಕ್ಕೆ ಇಂಥದ್ದೇ ಎಂಬ ನೀತಿಸಂಹಿತೆ ಇರುವುದಿಲ್ಲ. ಆ ನಾಡನ್ನು ಆಳಿದವರು, ಅಲ್ಲಿ ಬಾಳಿದವರು. ಬದುಕಿದವರು, ಬರೆದವರು, ಚಿಂತಿಸಿದವರು, ತಿಳಿದವರು, ಉತ್ತಿ ಬೆಳೆದವರೆಲ್ಲಾ ತಮಗೆ ತೋಚಿದ ಒಳ್ಳೆಯದನ್ನೆಲ್ಲಾ ಒಟ್ಟು ಮಾಡಿ ಒಂದು ಜೀವನ ಮೌಲ್ಯ ಅಂತ ರೂಪಿಸಿಕೊಂಡಿರುತ್ತಾರೆ. ಮುಂದೆ ಅದೇ ಆ ನಾಡಿನ ಸಾಂಸ್ಕೃತಿಕ ವಿನ್ಯಾಸವಾಗುತ್ತದೆ. ಅಲ್ಲಿ ಬದುಕುವವರಿಗೆ ಅದೇ ಜೀವನ ವಿಧಾನವಾಗುತ್ತದೆ (Life style). ಇವತ್ತಿಗೂ ವಿಚಾರವಂತರು, ವಿವೇಕಿಗಳು, ಪ್ರಜ್ಞಾವಂತರೆಲ್ಲ ಇಂತಹ ಸಂಸ್ಕೃತಿ ಚಿಂತಕರ, ದಾರ್ಶನಿಕರ ಮಾತುಗಳನ್ನು ಉದ್ಧರಿಸುತ್ತಾ ಮಾತನಾಡುತ್ತಿರುತ್ತಾರೆ. ಮಹಾಗ್ರಂಥಗಳೂ, ಗ್ರಂಥಕರ್ತರ ಮಾತುಗಳನ್ನು ಉಲ್ಲೇಖಿಸಿ ಸಂಸ್ಕೃತಿಯ ಮತ್ತು ಜೀವನ ವಿಧಾನದ ಪರಿಧಿಯನ್ನು ಪರಿಚಯಿಸುತ್ತಿರುತ್ತಾರೆ. ಹೀಗೆ ಚಿಂತಿಸಿದ ಮಹನೀಯರೆಲ್ಲ ಬರೆದದ್ದು ನಮ್ಮ ಸಮಾಜದ ಎಲ್ಲಾ ಸ್ತರದವರಿಗೂ ಅರ್ಥವಾಗಲಿಲ್ಲ. ಅಕ್ಷರ ತಿಳಿದ ಮಂದಿಗೆ ಓದು ಬರಹ ಬಲ್ಲ ವಿಚಾರವಂತರಿಗೆ ಮಾತ್ರ ಶಿಷ್ಟಸಾಹಿತ್ಯ ಅರ್ಥವಾಗುತ್ತಿತ್ತು. ಆದರೆ ಅಕ್ಷರ ಲೋಕ ಗೊತ್ತಿಲ್ಲದ ಅಸಂಖ್ಯಾತ ಗ್ರಾಮ ಸಮಾಜಗಳು ತಮ್ಮ ತಮ್ಮ ತಿಳುವಳಿಕೆಗಳ ಮೂಲಕ ತಮ್ಮ ತಮ್ಮ ಜೀವನ ಮೌಲ್ಯಗಳನ್ನು ತಾವೇ ಕಟ್ಟಿಕೊಂಡವರು. ತಮ್ಮ ಸುಖಕ್ಕಾಗಿ ಸೋಬಾನೆ ಪದ ಹಾಡಿದರು. ಶ್ರಮದಿಂದ ಮೈದಣಿದ ಆಯಾಸ ಪರಿಹಾರಕ್ಕಾಗಿ ನಾಟಿ ಹಾಕುವಾಗ ನಾಟಿ ಪದ ಹಾಡಿದರು. ನಮ್ಮ ಹೆಣ್ಣು ಮಕ್ಕಳು ರಾಗಿಬೀಸೋವಾಗ ಕೈನೋವಿಗೆ ಮುಲಾಮಿನಂತೆ ರಾಗಿಬೀಸೋ ಪದ ಹಾಡಿದರು, ಕಲ್ಲಿನ ಜೊತೆ ತಾವೂ ಸವೆದರು.

ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಾಲಿ
ಎಳ್ಳು ಜೀರಿಗೆ ಬೆಳೆಯೋಳ ॥
ಎಳ್ಳು ಜೀರಿಗೆ ಬೆಳೆಯೋಳ ಭೂತಾಯಿ ॥
ನಿನ್ನ ಎದ್ದೊಂದು ಘಳಿಗೆ ನೆನೆದೇನು

ಎನ್ನುತ್ತಾ ಬೆಳ್ಳಂಬೆಳಿಗ್ಗೆ ಭೂತಾಯಿಯನ್ನು ನೆನೆದು ದಿನ ಪ್ರಾರಂಭಿಸಿದರು. ಕನ್ನಡದ ಚರಿತ್ರೆಯ 'ಕವಿರಾಜಮಾರ್ಗ' ಎಂಬ ಕೃತಿಯಲ್ಲಿ ಇಂಥವರನ್ನು ಕುರಿತು ಕೃತಿಕಾರ "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್" ಎಂದು ಬರೆದಿದ್ದಾನೆ. ಅದೇ ಜನಪದ, ಅವರೇ ಜನಪದರು. ಅವರು ಹೇಳಿದ ಜೀವನ ಮೌಲ್ಯಗಳೇ ನಮ್ಮ ಸಂಕ್ರಾಂತಿ ಸಂಭ್ರಮ.

"ಆಚಾರಕೆ ಅರಸಾಗು ನೀತಿಗೆ ಪ್ರಭುವಾಗು
ಜ್ಯೋತಿಯೇ ಆಗು ಜಗಕೆಲ್ಲ"
"ಬಡತನ ನನಗಿರಲಿ, ಬಾಳು ಮಕ್ಕಳಿಗಿರಲಿ
ಭಗವಂತ ಬಡತನದ ಚಿಂತೆ ನಿನಗಿರಲಿ"
"ಸತ್ಯವೇ ನಮ್ಮ ತಾಯಿ ತಂದೆ
ಸತ್ಯವೇ ನಮ್ಮ ಬಂಧು ಬಳಗ
ಸತ್ಯವಾಕ್ಯಕೆ ತಪ್ಪಿ ನಡೆದರೆ
ಮೆಚ್ಚನಾ ಪರಮಾತ್ಮನು"

ಹೀಗೆ ಇನ್ನೂ ಹೆಚ್ಚೆಚ್ಚು ಬೆಲೆಯುಳ್ಳ ಮಾತುಗಳನ್ನು ಅವರು ತಮಗೆ ತೋಚಿದ ಭಾಷೆಯಲ್ಲಿ ಬರೆದು ಬಾಳಿದರು. ಅಂಥಾ ದೊಡ್ಡ ಜನಪದ ಸಂಗ್ರಹದಲ್ಲಿ ಇಡಿಯ ಕನ್ನಡವನ್ನೂ, ಕನ್ನಡಿಗರನ್ನೂ ಅದರ ಲಯ ಮಾಧುರ್ಯದಿಂದ, ಅದರ ನೀತಿಕಥೆಯಿಂದ, ಅದರ ತಾಳಜ್ಞಾನದಿಂದ ಆಕರ್ಷಿಸಿದ್ದು 'ಧರಣಿ ಮಂಡಲ ಮಧ್ಯದೊಳಗೆ' ಎಂಬ ಜನಪದ ಕಥನಗೀತೆ. ಇದನ್ನು ಕೇಳದ ಕನ್ನಡದ ಕಿವಿಗಳಿಲ್ಲ. ಆಸ್ವಾದಿಸದ ಕನ್ನಡದ ಮನಸ್ಸುಗಳಿಲ್ಲ. ಮುಖ್ಯಮಂತ್ರಿಯಿಂದ ಶ್ರೀಸಾಮಾನ್ಯನವರೆಗೆ ಅಬಾಲವೃದ್ಧರಾದಿಯಾಗಿ ಎಲ್ಲ ವಯೋಮಾನದವರೆಗೆ ಅಕ್ಷರಸ್ಥರಾದಿಯಾಗಿ ಗ್ರಾಮಸಮಾಜದವರೆಗೆ ಎಲ್ಲರಿಗೂ ಈ ಪುಣ್ಯಕೋಟಿಯ ಕಥೆ ಗೊತ್ತು. ಮಾಂಸಾಹಾರಿಯಾದ ಹುಲಿಯ ಮನಸ್ಸನ್ನು ತನ್ನ ಸತ್ಯವಾಕ್ಯದಿಂದ ಕೊಟ್ಟ ಮಾತಿಗೆ ತಪ್ಪದೆ ಪ್ರಾಮಾಣಿಕತೆಯಿಂದ ಮೆಚ್ಚಿಸಿ, ಘರ್ಜಿಸಿದ ಹುಲಿಯಿಂದ ತನ್ನ ಜೀವ ಉಳಿಸಿಕೊಂಡ ಕಥೆಯಿದು. ತನ್ನ ತಪ್ಪಿನ ಪ್ರಾಯಶ್ಚಿತ್ತದಿಂದಾಗಿ ಕ್ರೂರ ಮೃಗವಾದ ಹುಲಿಯೇ ತನ್ನ ಪ್ರಾಣ ಕಳೆದುಕೊಂಡ ಕಥೆಯಿದು. ಇಂದು ಇಂಥಾ ಜೀವಂತ ಕಥೆಯೊಂದು ಜಗತ್ತಿನ ಯಾವ ದೇಶದ ಯಾವ ಭಾಷೆಯಲ್ಲಿಯೂ ಇಲ್ಲ ಎಂಬುದು ಸತ್ಯ. ನೀತಿಗೆ ಇದಕ್ಕಿಂತ ಕಥೆ ಬೇಕೇ? ಇದು ಕನ್ನಡ ಸಂಸ್ಕೃತಿಯ ನೀತಿಸಂಹಿತೆ, ಅಣ್ಣ ತಮ್ಮಂದಿರು ಅಕ್ಕತಂಗಿಯರೇ ಪರಸ್ಪರ ಒಬ್ಬರಿಗೊಬ್ಬರು ಇಲ್ಲವಾಗಿರುವ ಈ ಕಾಲದಲ್ಲಿ

"ಎನ್ನ ತಾಯೊಡ ಹುಟ್ಟುಗಳಿರಾ
ಕಂದ ನಿಮ್ಮನವೆಚಿದು ಕಾಣಿರಿ
ತಬ್ಬಲಿಯನೀ ಕರುವನು"

ತಾಯ ಒಡಹುಟ್ಟು ಎಂಬುದೇ ಒಂದು ವಾತ್ಸಲ್ಯ. ನಿಜಕ್ಕೂ ತಾಯಿಯ ಒಡಹುಟ್ಟಿದವರೂ ತನ್ನ ಕರುಳ ಕುಡಿಯ ಮಮಕಾರಕ್ಕೆ ಓಡಿ ಬರುವ ತಾಯ್ತನವನ್ನು ನಿರೀಕ್ಷಿಸುವ ಮತ್ತು ಬಯಸುವ ಸಂಬಂಧಗಳೇ ಜೀವಪರವಾದ ನಿಲುವುಗಳು. ಅವೇ ಜೀವನ ಮೌಲ್ಯಗಳು. ನಾಲ್ಕಾರು ಕವಿತೆ ಕಥೆಗಳನ್ನು ಬರೆದು ಪ್ರಶಸ್ತಿಗಳು, ಪುರಸ್ಕಾರಗಳಿಗೆ ಹಾತೊರೆಯುವ ನಮ್ಮಂಥವರಿಗೆ ಹೆಸರಿನ ಬಗ್ಗೆ ಇರುವ ಭ್ರಮೆ ದೊಡ್ಡದು. ಆಶ್ಚರ್ಯವೆಂದರೆ ಇಂಥ ಅದ್ಭುತವಾದ ಕಥನ ಕವಿತೆಯನ್ನು ಬರೆದ ಕವಿ ಯಾರು ಎಂಬುದಕ್ಕೇ ಇವತ್ತಿಗೂ ದಾಖಲೆಯಿಲ್ಲ. ಮಂಡ್ಯ ಜಿಲ್ಲೆ ಮದ್ದೂರು ತಾಲೂಕು ವೈದ್ಯನಾಥಪುರ ಎಂಬ ಗ್ರಾಮದಲ್ಲಿ ದನಕಾಯುವ ಗೋಪಾಲನೊಬ್ಬ ತನ್ನ ಕೊಳಲ ಗೀತೆಯಾಗಿ ಇದನ್ನು ಹಾಡಿ ಹೋದನೆಂಬುದು ನಮ್ಮ ಜನಪದರ ನಂಬಿಕೆ. ಪುಣ್ಯಾತ್ಮ ಈ ಹಾಡು ಬರೆದು ತನ್ನ ಹೆಸರನ್ನೂ ಬರೆಯದೆ ಹೊರಟು ಬಿಟ್ಟ, ಕವಿಯೂ ಕವಿತೆಯೂ ಎರಡೂ ಕೂಡ ನಮಗೆ ಮಾದರಿಯಾಗಿ ಬಿಟ್ಟಿತು.

ಈ ಹಾಡಿನ ಮೂಲಕ ಕರ್ನಾಟಕದ ಸಂಸ್ಕೃತಿಗೆ ಸುವರ್ಣ ಚೌಕಟ್ಟು ಹಾಕಿದ ಮಾಂತ್ರಿಕನಾಗಿ ಹೋದ ಆ ಗೋಪಾಲನಿಗೆ ಕೊಟ್ಟಿದ್ದರೆ ಯಾವ ಪ್ರಶಸ್ತಿಯೂ ಚಿಕ್ಕದೆ. ಪ್ರೊ. ಬರಗೂರು ರಾಮಚಂದ್ರಪ್ಪ ಕೂಡ ಸರ್ಕಾರಕ್ಕೆ ಸಲ್ಲಿಸಿದ ಸಾಂಸ್ಕೃತಿಕ ನೀತಿಯ ವರದಿಯಲ್ಲಿ ಇಂಥಾ ಸಾವಿರದ ಜನಪದವನ್ನು ಉಳಿಸಬೇಕೆಂಬ ಉಮ್ಮೇದಿಯಿದೆ.

ಜಗತ್ತಿನ ಯಾವ ದೇಶದ, ಯಾವ ಭಾಷೆಯಲ್ಲಿಯೂ ಹಸುವೊಂದು ಹುಲಿಯ ಮನಸ್ಸನ್ನು ಬದಲಿಸಿದ ಕಥೆ ಇಲ್ಲ. ನಮ್ಮ ನೆಲದಲ್ಲಿ ಪ್ರತಿನಿತ್ಯ ಹುಲಿವೇಷದ ಗಂಡಸರ ಮನಸ್ಸನ್ನು ಬದಲಾಯಿಸಲು ಹೆಣಗುವ ನಮ್ಮ ಪುಣ್ಯಕೋಟಿಯಂಥ ಹೆಣ್ಣು ಮಕ್ಕಳ ಪ್ರತಿನಿತ್ಯದ ಯತ್ನಗಳು ಹೇಗಿರುತ್ತವೆ ಅಂತ ನಿಮಗೆ ಗೊತ್ತೇ ಇದೆ.

ಹೀಗೆ ಜೀವನ ಮೌಲ್ಯಗಳು ಶಿಥಿಲಗೊಂಡು ದುಡ್ಡೇ ದೊಡ್ಡಪ್ಪನಾಗಿರುವ ಈ ತಲೆಮಾರಿನ ಜೀವನ ವಿಧಾನ ಬದಲಾಗಿದೆ, ಆಲೋಚನಾಕ್ರಮ ಬದಲಾಗಿದೆ. ಬೇಕುಗಳು ಬದಲಾಗಿವೆ. ಈ ಎಲ್ಲ ಹೊಸತನಗಳ ಮಧ್ಯೆ ಜೀವನ ಮೌಲ್ಯಗಳು ಸದ್ದಿಲ್ಲದೇ ಎದ್ದು ಹೋಗಿವೆ. ಶಿಕ್ಷಣಕ್ರಮದ ಪಠ್ಯಗಳಲ್ಲಿ ಮತ್ತೆ ಇಂಥ ಸಂಸ್ಕೃತಿ ಕಟ್ಟುವ ಕಥಾನಕಗಳು ಹೆಚ್ಚು ಹೆಚ್ಚು ಬಂದರೆ ಗೋವಿನ ಹಾಡಿನ ಗೋಪಾಲ ಮತ್ತೆ ಬರುತ್ತಾನೆ. ಧರಣಿ ಮಂಡಲ ಮಧ್ಯದೊಳಗೆ ಜೀವನ ಅರಳುತ್ತದೆ. ನಾಗರಿಕ ಸಮಾಜದ ಆಶಯಗಳು ಖಂಡಿತಾ ಫಲಿಸುತ್ತವೆ.

ಸಂಕ್ರಾಂತಿಯ ನೆವದಲ್ಲಿ ಪುಣ್ಯಕೋಟಿಯ ನೆನೆದು ಸುಗ್ಗಿಯ ದಿನಗಳಲ್ಲಿ ಬದುಕುವ ನಮ್ಮ ಗ್ರಾಮ ಸಮಾಜಗಳು ದೊಡ್ಡ ದೊಡ್ಡ ಗ್ರಂಥಗಳನ್ನು ಓದದೇ ಇದ್ದರೂ ತಾವು ನಂಬಿದ ಎತ್ತುಗಳನ್ನೇ ಪುಣ್ಯಕೋಟಿಯೆಂಬ ಹಸುವಿನ ರೂಪದಲ್ಲಿ ಕಂಡವರು. ಸಂಕ್ರಾಂತಿಯ ದಿನ ಅವುಗಳ ಮೈಗೆ ಬಣ್ಣ ಬಳಿದು ಕೊಂಬಿಗೆ ಬತಾಸು ಕಟ್ಟಿ, ಅವುಗಳ ಜೊತೆ ಕಿಚ್ಚು ಹಾಯಿಸುವ ಕೆಚ್ಚು ಬೆಳೆಸಿಕೊಂಡ ನಮ್ಮ ರೈತಾಪಿ ವರ್ಗಕ್ಕೆ ಯಾವತ್ತಿನಿಂದಲೂ ಕಷ್ಟಕ್ಕೆ ಜೊತೆಯಾದದ್ದು ನಮ್ಮ ಪುಣ್ಯಕೋಟಿ. ಇಂಥಾ ಪುಣ್ಯಕೋಟಿಯ ಕುರಿತಾದ ಈ ಸಂಕ್ರಾಂತಿ, ದಕ್ಷಿಣ ಭಾರತದ ಅದರಲ್ಲೂ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶಗಳಿಗೆ ಸುಗ್ಗಿಯ ದೊಡ್ಡ ಹಬ್ಬ. ಕರ್ನಾಟಕದಲ್ಲಿ ಎತ್ತುಗಳ ಕಿಚ್ಚು ಹಾಯಿಸಿದರೆ, ತಮಿಳುನಾಡಲ್ಲಿ 'ಜಲ್ಲಿಕಟ್ಟು' ಎಂಬ ಗೂಳಿಯ ಓಟ ನಡೆಸುತ್ತಾರೆ. ಈಗ ಆ 'ಜಲ್ಲಿಕಟ್ಟು' ನಿಷೇಧಗೊಂಡು ರಾಜಕಾರಣದ ಅಂಗಳದಲ್ಲಿ ಚೆಂಡಾಟ ಶುರು ಮಾಡಿದೆ. ನಮ್ಮ ಸಾಂಸ್ಕೃತಿಕ ಸಂತೋಷಗಳಿಗೆ ಯಾವಾಗ ರಾಜಕಾರಣ ಕಾಲಿಡುತ್ತದೋ ಅಲ್ಲಿಗೆ ಅದರಲ್ಲಿನ ಕಸುವು ಕಳೆದು ಹೋಗುತ್ತದೆ. ಇವತ್ತು ತಮಿಳುನಾಡಿನ 'ಜಲ್ಲಿಕಟ್ಟು' ಹಾಗೂ ಕರ್ನಾಟಕದ 'ಕಂಬಳ' ಅಂಥದೊಂದು ಸಾಂಸ್ಕೃತಿಕ ರಾಜಕಾರಣಕ್ಕೆ ಬಲಿಯಾಗಿ ಹೋಗಿವೆ. ಆದರೆ ಕರುನಾಡಿನ ನಮ್ಮ ಪುಣ್ಯಕೋಟಿ; ಸುಗ್ಗಿಯ ದಿನಗಳಲ್ಲಿ ಎಂದಿನಂತೆ ತನ್ನ ನೆಲದ ಮಕ್ಕಳ ಜೊತೆ ಕಿಚ್ಚು ಹಾಯುವ ಮೂಲಕ ರೈತಾಪಿ ವರ್ಗಕ್ಕೆ ಉಲ್ಲಾಸ ತುಂಬಿ ಎಂಥ ಕಷ್ಟದ ದಿನಗಳೇ ಬರಲಿ, ಜೊತೆಗಾರರಾಗಿ ನಾವಿರುತ್ತೇವೆ ಎಂದು ತಮ್ಮ ಮೂಕ ಭಾಷೆಯಲ್ಲಿ ತಲೆ ಅಲ್ಲಾಡಿಸುತ್ತಿವೆ. ನಮ್ಮೂರಿನ ಚಿಕ್ಕ ಹುಡುಗರೂ ಕೂಡ ಬೆಂಕಿ ಕಂಡು ಹೆದರದೆ ತಮ್ಮ ಎತ್ತರಕ್ಕೆ ಸರಿಯಾದ ಚಿಕ್ಕ ಕರುವೊಂದನ್ನು ಹಿಡಿದುಕೊಂಡು ಉದುರಿ ಹೋಗುತ್ತಿರುವ ಚೆಡ್ಡಿಯನ್ನೂ ಲೆಕ್ಕಿಸದೆ ಓಡುತ್ತಾರಲ್ಲ ಆ ಹುಡುಗರ ಸಂತಸದ ಕ್ಷಣಕ್ಕೆ ಸಾಕ್ಷಿಯಾದ ಗಾದೆ ಮಾತೇನು ಗೊತ್ತ? 'ಯಾರ್ ಕಟ್ಕೊಂಡೇನು? ಏರ್ ಕಟ್ಕೊಂಡು ಹೊಲ ಉಳುಮಗ!' ಎನ್ನುವ ನಮ್ಮ ಹಿರಿಯಜ್ಜನ ಮಾತು. ಈ ಮಾತು ನಮ್ಮ ಗ್ರಾಮ ಭಾರತವನ್ನೂ, ನಮ್ಮನ್ನೂ ಕಾಪಾಡಿದೆ. ಎಲ್ಲವನ್ನೂ ಬಲ್ಲ ನೀವು ಏನಂತೀರಿ?

'ಗಾಂಧಿ ಭಾರತ' ಕಾರ್ಯಕ್ರಮದ ಪೂರ್ವ ಸಿದ್ಧತೆ; ಜ.21ರ ಜೈ ಬಾಪು; ಜೈ ಭೀಮ್; ಜೈ ಸಂವಿಧಾನ ಐತಿಹಾಸಿಕ ಅಭಿಯಾನ ಯಶಸ್ಸಿಗೆ ಸಿಎಂ ಕರೆ

ಬೆಂಗಳೂರು,ಜ.13(ಕೆಎಂಶಿ)–ಜೈ ಬಾಪು, ಜೈ ಭೀಮ್, ಜೈ ಸಂವಿಧಾನದ ಐತಿಹಾಸಿಕ ಅಭಿಯಾನ ಯಶಸ್ವಿಗೊಳಿಸಲು ಜ.21ರಂದು ನಡೆಯಲಿರುವ ಬೆಳಗಾವಿ ಸಮಾವೇಶಕ್ಕೆ ಬನ್ನಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನಾಡಿನ ಜನತೆಗೆ ಕರೆ ನೀಡಿದ್ದಾರೆ.



ಕೆಪಿಸಿಸಿ ಕಚೇರಿಯಲ್ಲಿ ನಡೆದ ಬೆಳಗಾವಿ 'ಗಾಂಧಿ ಭಾರತ' ಕಾರ್ಯಕ್ರಮದ ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಹೋರಾಟ, ದೇಶದ ಸ್ವಾತಂತ್ರ್ಯ ಮತ್ತು ಸಂವಿಧಾನದ ಬಗ್ಗೆ ಗೌರವ ಇರುವ ಎಲ್ಲರಿಗೂ ಸಮಾವೇಶಕ್ಕೆ ಸ್ವಾಗತ ಎಂದರು.

ಕಾಂಗ್ರೆಸ್ ಪಕ್ಷವನ್ನು ಹೋರಾಟ, ತ್ಯಾಗ, ಬಲಿದಾನಗಳಿಂದ ಕಟ್ಟಲಾಗಿದೆ, ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ದೇಶಕ್ಕಾಗಿ ಹುತಾತ್ಮರಾದರು, ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ತಮಗೆ ಒದಗಿ ಬಂದ ಪ್ರಧಾನಿ ಹುದ್ದೆ ತ್ಯಾಗ ಮಾಡಿ ಡಾ.ಮನಮೋಹನ್ ಸಿಂಗ್ ಅವರನ್ನು ಪ್ರಧಾನಿ ಮಾಡಿದರು, ಇಂತಹ ಆದರ್ಶಗಳ ಮಾರ್ಗದಲ್ಲಿ ನಾವು ಮುನ್ನಡೆಯೋಣ. ಸರ್ದಾರ್ ವಲ್ಲಭಬಾಯಿ ಪಟೇಲ್ ಬಗ್ಗೆ ಗೌರವ ಇಲ್ಲದೆ ವಿಗ್ರಹ ಮಾಡಿಟ್ಟುಕೊಂಡಿರುವ, ಗಾಂಧಿ ಬಗ್ಗೆ ಗೌರವ ಇಲ್ಲದ, ಸ್ವಾತಂತ್ರ್ಯ ಹೋರಾಟದ ಬಗ್ಗೆ ಗೌರವ ಇಲ್ಲದ ಬಿಜೆಪಿಯವರಿಗೆ, ಡಾ.ಅಂಬೇಡ್ಕರ್, ನೆಹರೂ ಯಾರ ಬಗ್ಗೆಯೂ ಗೌರವ ಇಲ್ಲದ ಇವರಿಗೆ ದೇಶದ ಸಂವಿಧಾನ ಮತ್ತು ಚರಿತ್ರೆ ಬಗ್ಗೆಯೂ ಗೌರವ ಇಲ್ಲ ಎಂದರು. ಡಾ.ಅಂಬೇಡ್ಕರ್, ಗಾಂಧಿ, ನೆಹರೂ ಮತ್ತು ಕಾಂಗ್ರೆಸ್ಸಿನ ಹೋರಾಟದ ಚರಿತ್ರೆಯನ್ನು ನಾವು ಮುಂದಿನ ಪೀಳಿಗೆಗೆ ಅರ್ಥ ಮಾಡಿಸಬೇಕಿದೆ. ನಾವು ಗಾಂಧಿ ವಂಶಸ್ಥರು, ಅವರು ಗೋಡ್ಸೆ ವಂಶಸ್ಥರು, ಬಿಜೆಪಿ ಮತ್ತು ಕಾಂಗ್ರೆಸ್‌ನ ಈ ಸೈದ್ಧಾಂತಿಕ ವ್ಯತ್ಯಾಸವನ್ನು ಇವತ್ತಿನ ಯುವಪೀಳಿಗೆಗೆ ಅರ್ಥೈಸಬೇಕಿದೆ, ಇದಕ್ಕಾಗಿ ಜ.21ರ ಗಾಂಧಿ ಭಾರತ ಸಮಾವೇಶ ಅತ್ಯಂತ ಯಶಸ್ವಿಗೊಳಿಸೋಣ. ದೇಶದ ಸ್ವಾತಂತ್ರ್ಯ, ಸಂವಿಧಾನದ ಬಗ್ಗೆ ಗೌರವ ಇರುವ ಎಲ್ಲರಿಗೂ, ಎಲ್ಲಾ ಪಕ್ಷದವರಿಗೂ ಸಮಾವೇಶಕ್ಕೆ ಸ್ವಾಗತ ಎಂದರು.

ಮೃಗಾಲಯ, ಕಾರಂಜಿಕೆರೆ ವೀಕ್ಷಣೆಗೆ ಇಂದು ಅವಕಾಶ

ಮೈಸೂರು,ಜ.13–ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಪ್ರವಾಸಿಗರು, ಜನ ಸಾಮಾನ್ಯರು ಹಾಗೂ ಸ್ಥಳೀಯರಿಗೆ ಮೃಗಾಲಯವನ್ನು ವೀಕ್ಷಿಸಲು ಅನುವಾಗುವಂತೆ ಜ.14ರಂದು ಶ್ರೀ ಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿಕೆರೆ ಪ್ರಕೃತಿ ಉದ್ಯಾನವನವನ್ನು ಸಾರ್ವಜನಿಕ ವೀಕ್ಷಣೆಗೆ ತೆರೆದಿರಲಾಗುವುದು ಎಂದು ಶ್ರೀ ಚಾಮರಾಜೇಂದ್ರ ಮೃಗಾಲಯ ಕಾರ್ಯನಿರ್ವಾಹಕ ನಿರ್ದೇಶಕರು ತಿಳಿಸಿದ್ದಾರೆ.

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡಗಳ ಸಂರಕ್ಷಿಸಿ

ಅಧಿಕಾರಿಗಳಿಗೆ ಅಂಗಡಿ ಮಳಿಗೆ ಬಾಡಿಗೆದಾರರ ಆಗ್ರಹ

ಮೈಸೂರು,ಜ.13(ಆರ್‌ಕೆ)– ನೆಲ ಸಮಗೊಳಿಸದೇ ದುರಸ್ತಿ ಮಾಡಿಸುವ ಮೂಲಕ ಮೈಸೂರಿನ ಅತೀ ಹಳೆಯದಾದ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸಬೇಕೆಂದು ಅಂಗಡಿ ಮಳಿಗೆ ಬಾಡಿಗೆದಾರರು ಒತ್ತಾಯಿಸಿದ್ದಾರೆ.



ದೇವರಾಜ ಮಾರುಕಟ್ಟೆ

ಇತ್ತೀಚೆಗಷ್ಟೇ ಮೈಸೂರು ಭಾಗದ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಬೆಂಗಳೂರಲ್ಲಿ ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಪಾರಂಪರಿಕ ಕಟ್ಟಡಗಳ ಬಾಕಿ ಇರುವ ಕಾನೂನು ತೊಡಕು ಇತ್ಯರ್ಥಗೊಳಿಸಿ ಸಂರಕ್ಷಿಸುವಂತೆ ಅಥವಾ ನೆಲಸಮಗೊಳಿಸಿ ಅದೇ ಮಾದರಿಯಲ್ಲಿ ಪುನರ್ ನಿರ್ಮಿಸುವ ಬಗ್ಗೆ ಅಗತ್ಯ ಕ್ರಮ ವಹಿಸಲು ನಿರ್ದೇಶನ ನೀಡಿದ ಬೆನ್ನಲ್ಲೇ ಈ ಕಟ್ಟಡಗಳ ಬಾಡಿಗೆದಾರರು, ದುರಸ್ತಿ ಮಾಡಿ ಸಂರಕ್ಷಣೆ ಮಾಡಬೇಕೆಂದು ಒತ್ತಾಯಿಸಿದ್ದಾರೆ.

ನವೀಕರಣ ಮತ್ತು ಸಂರಕ್ಷಣೆ ಸಂಬಂಧ ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿ ಬಾಕಿ ಇದ್ದು, ದೇವರಾಜ ಮಾರುಕಟ್ಟೆ ಪಾರಂಪರಿಕ ಕಟ್ಟಡವನ್ನು ನೆಲಸಮಗೊಳಿಸಬಾರದು ಎಂದು ಒತ್ತಾಯಿಸುತ್ತಿದ್ದೇವೆ ಎಂದು ದೇವರಾಜ ಮಾರುಕಟ್ಟೆ ಬಾಡಿಗೆದಾರರ ಸಂಘದ ಅಧ್ಯಕ್ಷ ಮಹದೇವು ತಿಳಿಸಿದ್ದಾರೆ.

ಧನ್ವಂತರಿ ರಸ್ತೆ ಕಡೆ ಮಾರುಕಟ್ಟೆ ಕಟ್ಟಡ ಭಾಗಶಃ ಕುಸಿದಿರುವುದನ್ನು ಹೊರತುಪಡಿಸಿದರೆ, ಕಟ್ಟಡದ ಉಳಿದ ಭಾಗವು ಸದೃಢವಾಗಿದೆ. ಅಧಿಕಾರಿಗಳು ಅದನ್ನು ರಿಪೇರಿ ಬದಲು ಕೆಡವಿ ಹೊಸದಾಗಿ ನಿರ್ಮಿಸಬೇಕೆಂದು ವಿವಾದ ಸೃಷ್ಟಿಸಿ ಅನಗತ್ಯ ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.



ಲ್ಯಾನ್ಸ್‌ಡೌನ್ ಬಿಲ್ಡಿಂಗ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ ವಿಚಾರದಲ್ಲಿ ನ್ಯಾಯಾಲಯವು ತಡೆಯಾಜ್ಞೆ ನೀಡಿಲ್ಲವಾದ್ದರಿಂದ, ಅಡ್ವೊಕೇಟ್ ಜನರಲ್‌ರಿಂದ ಪರಿಶೀಲನೆ ನಡೆಸಿ ಮಾಹಿತಿ ನೀಡಿ ನೆಲಸಮ ಸಂಬಂಧ ಕ್ರಮ ವಹಿಸಿ ಎಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ದೇವರಾಜ ಮಾರುಕಟ್ಟೆ ಬಿಲ್ಡಿಂಗ್‌ನಲ್ಲಿ ವ್ಯಾಪಾರ ಮಾಡುತ್ತಿರುವ 700 ಅಂಗಡಿ ಬಾಡಿಗೆದಾರರಿಗೆ ಬೇರೆಡೆ ಜಾಗ ಗುರ್ತಿಸಿ ವ್ಯಾಪಾರಕ್ಕೆ ಅನುವು ಮಾಡಿಕೊಟ್ಟು ಕಟ್ಟಡ ಕೆಡವಿ ಪುನರ್ ನಿರ್ಮಿಸೋಣ ಎಂದು ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಸಲಹೆ ನೀಡಿದರು ಎಂದು ಶಾಸಕ ಟಿ.ಎಸ್.ಶ್ರೀವತ್ಸ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಒಂದಿಷ್ಟು ಡಾಂಬರ್‌ಗೂ ಗತಿ ಇಲ್ಲವೇ!?

ರೈಲ್ವೆ ಅಂಡರ್‌ಪಾಸ್ ರಸ್ತೆಯ ಹಳ್ಳಕ್ಕೆ ಬೇಕಾಬಿಟ್ಟಿಯಾಗಿ ಮಣ್ಣು ಸುರಿದು ನಿರ್ಲಕ್ಷ್ಯ



ಮೈಸೂರು,ಜ.13(ಪಿಎಂ)–ಮೈಸೂರಿನ ಬಂಬೂ ಬಜಾರ್‌ನ ಮೇದರ್ ಬ್ಲಾಕ್ ಸಮೀಪ ಜಾವಾ ಮುಖ್ಯರಸ್ತೆಯಲ್ಲಿರುವ ರೈಲ್ವೆ ಅಂಡರ್‌ಪಾಸ್ ರಸ್ತೆಯಲ್ಲಿ ಡಾಂಬರ್ ಕಿತ್ತು ಹಳ್ಳಕೊಳ್ಳ ಉಂಟಾಗಿರುವ ಸ್ಥಳಕ್ಕೆ ಮಣ್ಣು ಹಾಕಿ ಕೈತೊಳೆದುಕೊಳ್ಳಲಾಗಿದೆ.

'ರೈಲ್ವೆ ಅಂಡರ್‌ಪಾಸ್ ಹಳ್ಳಕೊಳ್ಳದಲ್ಲಿ ಆಯ ತಪ್ಪಿದರೆ ಘೋರ ಅಪಾಯ!' ಶೀರ್ಷಿಕೆಯಡಿ 'ಮೈಸೂರು ಮಿತ್ರ'ನ ಜ.11ರ ಸಂಚಿಕೆಯಲ್ಲಿ ಸುದ್ದಿ ಪ್ರಕಟಿಸಿ ಸಂಬಂಧಿಸಿದವರ ಗಮನ ಸೆಳೆಯಲಾಗಿತ್ತು. ರಸ್ತೆ ಮಾತ್ರವಲ್ಲದೆ, ಇಡೀ ರೈಲ್ವೆ ಅಂಡರ್‌ಪಾಸ್ ಕಟ್ಟಡದ ಅವ್ಯವಸ್ಥೆ ಮೇಲೂ ಬೆಳಕು ಚೆಲ್ಲಲಾಗಿತ್ತು.

ಆ ಮೂಲಕ ರೈಲ್ವೆ ಇಲಾಖೆ ಹಾಗೂ ಮಹಾನಗರ ಪಾಲಿಕೆ ಶೀಘ್ರ ಕ್ರಮ ವಹಿಸುವ ಆಶಯ ಪತ್ರಿಕೆಯದಾಗಿತ್ತು. ಆದರೆ ಇದೀಗ ಒಂದಿಷ್ಟು ಡಾಂಬರ್‌ಗೂ ಗತ್ತಿ ಇಲ್ಲವೆಂಬಂತೆ ಕೇವಲ ಒಂದಿಷ್ಟು ಮಣ್ಣನ್ನು ಹಳ್ಳಗಳಿಗೆ ಹಾಕಲಾಗಿದೆ. ದುರಂತವೆಂದರೆ ಆ ಮಣ್ಣನ್ನಾದರೂ ಸಮತಟ್ಟಾಗಿ ಹಾಕದೇ ಅದರಲ್ಲಿಯೂ ನಿರ್ಲಕ್ಷ್ಯ ಮಾಡಲಾಗಿದೆ. ಸಮಗ್ರವಾಗಿ ಇಲ್ಲಿನ ಅಂಡರ್ ಪಾಸ್ ಕಟ್ಟಡ ಮತ್ತು ರಸ್ತೆ ಅಭಿವೃದ್ಧಿಗೆ ಸಮಯ ಬೇಕಾಗಬಹುದು. ಆದರೆ ವಾಹನ ಸವಾರರ ಸುರಕ್ಷತೆ ದೃಷ್ಟಿಯಿಂದ ತ್ವರಿತ ಕ್ರಮವಾಗಿ ರಸ್ತೆಯ ಹಳ್ಳಕೊಳ್ಳಗಳಿಗೆ ಡಾಂಬರ್ ಹಾಕಿ ತೇಪೆ ಕಾರ್ಯವನ್ನಾದರೂ ಮಾಡಬಹುದಿತ್ತು. ಈಗ ನೋಡಿದರೆ ಮಣ್ಣು ಸುರಿದು ಸುಮ್ಮನಾಗುವ ಮೂಲಕ ಅಪ್ರಯೋಜಕ ಕೆಲಸ ಮಾಡಲಾಗಿದೆ.

ಸಿದ್ದರಾಮಯ್ಯ ಬಳಿಕ ಡಿಕೆಶಿ ಮುಖ್ಯಮಂತ್ರಿ

ಬೆಂಗಳೂರು: ಸಿದ್ದರಾಮಯ್ಯ ಬಳಿಕ ಡಿಕೆ ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ ಎಂದು ಶಾಸಕ ಹಾಗೂ ಡಿಕೆ ಶಿವಕುಮಾರ್ ಬಳಗದಲ್ಲಿ



ಗುರುತಿಸಿಕೊಂಡಿರುವ ಮಾಗಡಿ ಬಾಲಕೃಷ್ಣ ಹೇಳಿದ್ದಾರೆ. ಭಾರತ್ ಜೋಡೋ ಭವನದಲ್ಲಿ ಕಾಂಗ್ರೆಸ್ ನಾಯಕರ ಸಭೆಗೂ ಮುನ್ನ ಮಾತನಾಡಿದ ಅವರು, ಅಧಿಕಾರ ಹಂಚಿಕೆ ಚರ್ಚೆ ವಿಚಾರವಾಗಿ ಶಾಸಕರು ಚರ್ಚೆ ಮಾಡುತ್ತಿಲ್ಲ, ಮಾಧ್ಯಮಗಳಲ್ಲಿ ಚರ್ಚೆ ಆಗ್ತಿದೆ ಎಂದರು.

ಸಿದ್ದರಾಮಯ್ಯ ಬಳಿಕ ಡಿಸಿಎಂ ಡಿಕೆಶಿ ಅವರು ಸಿಎಂ ಆಗ್ತಾರೆ. ಸಿದ್ದರಾಮಯ್ಯ ಬಳಿಕ ಡಿಸಿಎಂ ಸಿಎಂ ಆಗಬೇಕಲ್ವಾ. ಬೇರೆ ಬೇರೆಯವರೂ ಇದ್ದಾರೆ. ಆದರೆ ಅಂತಿಮವಾಗಿ ಹೈಕಮಾಂಡ್ ನಾಯಕರು ನಿರ್ಧಾರ ಮಾಡುತ್ತಾರೆ ಎಂದರು.

ಒಕ್ಕಲಿಗರ ಸಂಘದಿಂದ ಡಿಕೆಶಿ ಸಿಎಂ ಮಾಡಲು ಒತ್ತಾಯ ವಿಚಾರಕ್ಕೆ ಪ್ರತಿಕ್ರಿಯಿಸಿ, ಯಾರೋ ಹೇಳಿದ್ರು ಅಂದ ಮಾತ್ರಕ್ಕೆ ಹೇಳಿದವರನ್ನೆಲ್ಲಾ ಸಿಎಂ ಮಾಡೋದಕ್ಕೆ ಆಗಲ್ಲ. ಅವರು ಜಾತಿ ಅಭಿಮಾನದಿಂದ ಹೇಳಿದ್ದಾರೆ. ಹೈಕಮಾಂಡ್ ನಾಯಕರು ಅಂತಿಮ ನಿರ್ಧಾರ ಮಾಡ್ತಾರೆ ಎಂದರು.

ಜಯಪುರ ಬಳಿಯ ತಳೂರಲ್ಲಿ ಚಿರತೆ ಪ್ರತ್ಯಕ್ಷ: ಗ್ರಾಮಸ್ಥರಲ್ಲಿ ಭೀತಿ

ಮೈಸೂರು, ಜ.13(ಎಸ್‌ಬಿಡಿ)–ತಾಲೂಕಿನ ಜಯಪುರ ಹೋಬಳಿಯ ತಳೂರು ಗ್ರಾಮದಲ್ಲಿ ಚಿರತೆ ಪ್ರತ್ಯಕ್ಷವಾಗಿದ್ದು, ಸಾರ್ವಜನಿಕರು ಆತಂಕಗೊಂಡಿದ್ದಾರೆ.



ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿರುವ ಚಿರತೆ.

ರಿಯಲ್ ಎಸ್ಟೇಟ್ ಉದ್ಯಮಿಯೂ ಆದ ರೈತ ರವಿಕುಮಾರ್ ಅವರ ಮನೆ ಬಳಿ ಇಂದು ಮುಂಜಾನೆ 3 ಗಂಟೆ ಸಮಯದಲ್ಲಿ ಚಿರತೆ ಬಂದು ಹೋಗಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಚಿರತೆ ಸಾಕುನಾಯಿ ಬೇಟೆಗೆ ಬಂದು ಅದು ಸಾಧ್ಯವಾಗದೆ ಇದ್ದಾಗ ಅಲ್ಲಿಂದ ಓಡಿಹೋಗಿದೆ ಎಂದು ಹೇಳಲಾಗುತ್ತಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ರವಿಕುಮಾರ್, ಈ ಹಿಂದೆಯೂ ಮೂರ್ನಾಲ್ಕು ಬಾರಿ ಚಿರತೆ ನೋಡಿದ್ದೆವು. ಅಲ್ಲದೆ ನಾವು ಸಾಕಿದ್ದ ನಾಯಿಗಳೂ ನಾಪತ್ತೆಯಾಗಿದ್ದವು. ನಂತರದಲ್ಲಿ ಮನೆ ಸುತ್ತಲೂ ಸಿಸಿ ಕ್ಯಾಮರಾ ಅಳವಡಿಸಿ, ನಾಯಿಗೆ ಬೋನ್ ಮಾದರಿಯ ರಕ್ಷಣೆ ಮಾಡಿದ್ದೇವೆ. ಆದ್ದರಿಂದ ಇಂದು ಮುಂಜಾನೆ ಬಂದಿದ್ದ ಚಿರತೆಗೆ ನಾಯಿ ಬೇಟೆ ಸಾಧ್ಯವಾಗದೆ ಅಲ್ಲಿಂದ ಹೋಗಿದೆ. ಮನೆ ಬಳಿ ಚಿರತೆ ಬಂದು ಹೋಗಿರುವುದು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿರುವ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದೇವೆ ಎಂದು ತಿಳಿಸಿದರು.


ನಮ್ಮ ಗ್ರಾಮದಲ್ಲಿ ಆಗಾಗ ಚಿರತೆ ಕಾಣಿಸಿಕೊಳ್ಳುತ್ತಿದ್ದು, ಜನ ಭಯಭೀತರಾಗಿದ್ದಾರೆ. ಸಾಕು ಪ್ರಾಣಿಗಳ ಮೇಲೆ ದಾಳಿ ನಡೆಸಬಹುದೆಂಬ ಆತಂಕದಲ್ಲಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ, ಸೂಕ್ತ ಸ್ಥಳದಲ್ಲಿ ಬೋನ್ ಇಟ್ಟು ಚಿರತೆ ಸೆರೆ ಹಿಡಿಯಬೇಕು ಎಂದು ಅವರು ಆಗ್ರಹಿಸಿದ್ದಾರೆ.



ಪ್ರಯಾಗ್‌ರಾಜ್‌ನ ಜಗತ್ತಿನ ಮಹಾ ಕುಂಭಮೇಳಕ್ಕೆ ವಿಧ್ಯುಕ್ತ ಚಾಲನೆ

ಮೊದಲ ದಿನವೇ 1.5 ಕೋಟಿ ಮಂದಿಯಿಂದ ಪವಿತ್ರ ಸ್ನಾನ









ಪ್ರಯಾಗ್‌ರಾಜ್, ಜ.13– ದಟ್ಟವಾಗಿ ಆವರಿಸಿದ ಮಂಜು, ತೀವ್ರ ಚಳಿಯ ನಡುವೆಯೂ ಅಂದಾಜು 1.5 ಕೋಟಿ ಭಕ್ತರು ಸೋಮವಾರ ಪವಿತ್ರ ಸ್ನಾನ ಮಾಡುವುದರೊಂದಿಗೆ ಜಗತ್ತಿನ ಅತ್ಯಂತ ದೊಡ್ಡ ಧಾರ್ಮಿಕ ಉತ್ಸವ ಮಹಾ ಕುಂಭ ಮೇಳಕ್ಕೆ ವಿಧ್ಯುಕ್ತ ಚಾಲನೆ ದೊರೆಯಿತು.

ಸನಾತನ ಧರ್ಮದಲ್ಲಿ ನಂಬಿಕೆಯಿರಿಸಿದ 1.5 ಕೋಟಿ ಮಂದಿ 'ಪುಷ್ಯ ಪೂರ್ಣಿಮಾ' ದಿನದಂದು ಪ್ರಯಾಗ್ ರಾಜ್‌ನ ಸಂಗಮದಲ್ಲಿ (ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳು ಕೂಡುವ ಸ್ಥಳ) ಪುಣ್ಯಸ್ನಾನ ಮಾಡಿದರು ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ಚಳಿಯ ವಾತಾವರಣವನ್ನು ಲೆಕ್ಕಿಸದೆ ಭಕ್ತರು ಮುಂಜಾನೆಯಿಂದಲೇ ಸಂಗಮಕ್ಕೆ ಬರಲಾರಂಭಿಸಿದರಲ್ಲದೆ, ಕೆಲವೇ ಗಂಟೆಗಳಲ್ಲಿ ಇಡೀ ಪ್ರದೇಶ ಸಾಧು–ಸಂತರಿಂದ ತುಂಬಿತು.

ಬೆಳಿಗ್ಗೆ 11ರ ವೇಳೆಗೆ 80 ಲಕ್ಷಕ್ಕೂ ಅಧಿಕ ಮಂದಿ ಪವಿತ್ರ ಸ್ನಾನ ಮಾಡಿದರು ಎಂದು ಉತ್ತರಪ್ರದೇಶ ಸರ್ಕಾರದ ಪ್ರಕಟಣೆ ತಿಳಿಸಿದೆ. ಗಂಗಾನದಿ ದಡದಲ್ಲಿ ಪೂಜೆ ಸಲ್ಲಿಸಿದ ಭಕ್ತರು ನಂತರ ವಿವಿಧ ಕಡೆಗಳಲ್ಲಿ ಆಯೋಜಿಸಿರುವ ಧಾರ್ಮಿಕ ಪ್ರವಚನ ಮತ್ತು ಇತರ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು.

ಮಹಾ ಕುಂಭಮೇಳಕ್ಕೆ ಔಪಚಾರಿಕವಾಗಿ ಚಾಲನೆ ದೊರೆತಾಗ, ಭಕ್ತರು 'ಜೈ ಗಂಗಾ', 'ಜೈ ಶ್ರೀರಾಮ್', 'ಹರ ಹರ ಮಹಾದೇವ' ಎನ್ನುತ್ತಾ ತಂಡೋಪತಂಡವಾಗಿ ಸ್ನಾನಘಟ್ಟಗಳತ್ತ ಹೆಜ್ಜೆಯಿಟ್ಟರು. ಈ ವೇಳೆ ಇಡೀ ಸಂಗಮ ಪ್ರದೇಶದಲ್ಲಿ ಉತ್ಸಾಹದ ಅಲೆ ಎದ್ದಿತು. ಶಂಖ ಮತ್ತು ಭಜನೆಯ ಧ್ವನಿ ದಿನವಿಡೀ ಮೊಳಗಿತು.

ಸಂಗಮ ಪ್ರದೇಶದ ಹನುಮಾನ್ ದೇಗುಲದ ಬಳಿ ಸ್ಥಾಪಿಸಿರುವ 'ಸೆಲ್ಫಿ ಪಾಯಿಂಟ್' ಅಪಾರ ಸಂಖ್ಯೆಯ ಭಕ್ತರನ್ನು ತನ್ನತ್ತ ಸೆಳೆಯಿತು. ಅನೇಕ ಭಕ್ತರು ಸೆಲ್ಫಿ ತೆಗೆದುಕೊಳ್ಳಲು ತಮ್ಮ ಸರದಿಗಾಗಿ ತುಂಬಾ ಹೊತ್ತು ಕಾಯುತ್ತಾ ನಿಂತದ್ದು ಕಂಡುಬಂದಿತು. ಮಹಾ ಕುಂಭಮೇಳಕ್ಕೆ ಬಂದ ಅಸ್ಸಾಂ ಮತ್ತು ಛತ್ತೀಸಗಢದ ತಲಾ ಒಬ್ಬರು ಭಾನುವಾರ ತೀವ್ರ ಚಳಿಯಿಂದಾಗಿ ಮೃತಪಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ. ಕಳೆದ ಎರಡು ದಿನಗಳಲ್ಲಿ ಅಸ್ವಸ್ಥತೆ ಮತ್ತು ಎದೆ ನೋವಿನಿಂದ ಒಂಬತ್ತು ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಗಂಗಾ ನದಿಯ ದಂಡೆಯಲ್ಲಿರುವ ಬಿಡಾರಗಳನ್ನೊಳಗೊಂಡ ತಾತ್ಕಾಲಿಕ ನಗರವು ನಾಗಸಾಧುಗಳು, ಸಂತರು, ಮಠಾಧೀಶರು, ಬೈರಾಗಿಗಳು ಮತ್ತು ಭಕ್ತರಿಂದ ಬಹುತೇಕ ಭರ್ತಿಯಾಗಿದೆ.

ಮಹಾ ಕುಂಭಮೇಳದಲ್ಲಿ ಆರು ಶಾಹಿ ಸ್ನಾನ ನಡೆಯಲಿದೆ. ಪುಣ್ಯಸ್ನಾನಕ್ಕೆ ಸರ್ಕಾರದಿಂದ ಸಕಲ ವ್ಯವಸ್ಥೆಯಾಗಿದೆ. ಅವಘಡಗಳು ನಡೆಯದಂತೆ ಸರ್ಕಾರ ಎಚ್ಚರಿಕೆ ವಹಿಸಿದೆ. ನದಿಯ ಉದ್ದಕ್ಕೂ 12 ಕಿಲೋ ಮೀಟರ್ ಘಾಟ್‌ಗಳನ್ನು ನಿರ್ಮಾಣ ಮಾಡಲಾಗಿದೆ. ಇದೇ ಮೊದಲ ಬಾರಿಗೆ ಎನ್‌ಡಿಆರ್‌ಎಫ್ ಪಡೆಯಿಂದ ನೀರಿನ ಮೇಲೆ ಆಂಬುಲೆನ್ಸ್ ನಿರ್ಮಾಣ ಮಾಡಲಾಗಿದೆ. ಐಸಿಯು ಸೌಲಭ್ಯ ಹೊಂದಿರುವ ಅಂಬುಲೆನ್ಸ್‌ಗಳನ್ನು ನದಿ ನೀರಿನ ಮೇಲೆ ನಿಲ್ಲಿಸಲಾಗಿದೆ. ಅಂಬುಲೆನ್ಸ್‌ಗಳಲ್ಲಿ ವೈದ್ಯಕೀಯ ಸಿಬ್ಬಂದಿ ಮತ್ತು ಹಾಸಿಗೆಗಳ ಜೊತೆಗೆ ಆಮ್ಲಜನಕ ಮತ್ತು ವೆಂಟಿಲೇಟರ್‌ಗಳ ಸೌಲಭ್ಯ ಕಲ್ಪಿಸಲಾಗಿದೆ. ನದಿಯಲ್ಲಿ ಸ್ನಾನ ಮಾಡುವವರ ಸುರಕ್ಷತೆಗಾಗಿ 800 ಪ್ರಾದೇಶಿಕ ಸಶಸ್ತ್ರ ಕಾನ್ಸ್‌ಟೇಬಲ್, 150 ಎಸ್‌ಡಿಆರ್‌ಎಫ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.



ಗಿನ್ನಿಸ್ ದಾಖಲೆಗೆ ಮುಂದಾದ ಕೆಎಂಎಫ್!

ಮಹಾ ಕುಂಭಮೇಳದಲ್ಲಿ 1 ಕೋಟಿ ಕಪ್ ಚಹಾ ವಿತರಣೆ

ಬೆಂಗಳೂರು: ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭ ಮೇಳಕ್ಕಾಗಿ ಚಾಯ್ ಪಾಯಿಂಟ್ ಜೊತೆಗೆ 1 ಕೋಟಿ ಕಪ್ ಚಹಾ ವಿತರಿಸಲಾಗುವುದು ಎಂದು ಕರ್ನಾಟಕ ಹಾಲು ಒಕ್ಕೂಟ – ಕೆಎಂಎಫ್ ಸೋಮವಾರ ತಿಳಿಸಿದೆ.

ಈ ಸಹಭಾಗಿತ್ವದ ಭಾಗವಾಗಿ ಚಾಯ್ ಪಾಯಿಂಟ್ ಮಹಾ ಕುಂಭ ಮೇಳದ ಆವರಣದಲ್ಲಿ 10 ಮಳಿಗೆಗಳನ್ನು ಸ್ಥಾಪಿಸಿದೆ. ಈ ಮಳಿಗೆಗಳು ಐತಿಹಾಸಿಕ ಮೇಳದ ಸಂದರ್ಭದಲ್ಲಿ 1 ಕೋಟಿ ಕಪ್‌ಗೂ ಹೆಚ್ಚು ಚಹಾವನ್ನು ನೀಡಲು ಸಿದ್ಧವಾಗಿವೆ.

ಈ ಮೂಲಕ ಒಂದು ಕಾರ್ಯಕ್ರಮದಲ್ಲಿ ಸಮಾರಂಭದಲ್ಲಿ ಅತಿ ಹೆಚ್ಚು ಕಪ್ ಚಹಾ ಮಾರಾಟ ಮಾಡಿ ಗಿನ್ನೆಸ್ ವಿಶ್ವ ದಾಖಲೆಯನ್ನು ಸ್ಥಾಪಿಸುವ ಗುರಿಯನ್ನು KMF ಹೊಂದಿದೆ. ಮಹಾ ಕುಂಭಮೇಳದಲ್ಲಿ ಪ್ರತಿ ಕಪ್ ಚಹಾವು ನಂದಿನಿಯ ಉತ್ತಮ–ಗುಣಮಟ್ಟದ ಹಾಲನ್ನು ಹೊಂದಿರುತ್ತದೆ. ಇದು ಚಹಾ ಪ್ರಿಯರಲ್ಲಿ ಸಂತೋಷಕರ ಅನುಭವ ನೀಡುತ್ತದೆ ಎಂದು ಕೆಎಂಎಫ್ ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ವಿದ್ಯುಕ್ತವಾಗಿ ಆರಂಭವಾಗಿರುವ ಮಹಾ ಕುಂಭಮೇಳ ಫೆಬ್ರವರಿ 26 ರವರೆಗೆ ನಡೆಯಲಿದ್ದು, ಜಗತ್ತಿನಾದ್ಯಂತ ಲಕ್ಷಾಂತರ ಪ್ರವಾಸಿಗರನ್ನು ಆಕರ್ಷಿಸುವ ನಿರೀಕ್ಷೆಯಿದೆ.ಚಹಾದ ಜೊತೆಗೆ, ಚಾಯ್ ಪಾಯಿಂಟ್ ಸ್ಟೋರ್‌ಗಳಲ್ಲಿ ಸಿಹಿತಿಂಡಿಗಳು, ಮಿಲ್ಕ್‌ಶೇಕ್‌ಗಳು ಸೇರಿದಂತೆ ವಿವಿಧ ನಂದಿನಿ ಉತ್ಪನ್ನಗಳು ದೊರೆಯಲಿವೆ.

ಈ ಸಹಯೋಗ ಉತ್ತರದ ಭಾರತದ ಮಾರುಕಟ್ಟೆಗಳಲ್ಲಿ ತನ್ನ ಹೆಜ್ಜೆಗುರುತನ್ನು ವಿಸ್ತರಿಸಲು ನಂದಿನಿಯ ಬದ್ಧತೆ ಮತ್ತು ರಾಷ್ಟ್ರವ್ಯಾಪಿ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಹಾಲಿನ ಉತ್ಪನ್ನಗಳನ್ನು ತಲುಪಿಸಲು ಅದರ ಸಮರ್ಪಣೆಯನ್ನು ತೋರಿಸುತ್ತದೆ.ಈ ಐತಿಹಾಸಿಕ ಕಾರ್ಯಕ್ರಮದ ಯಶಸ್ಸಿಗೆ ಕೊಡುಗೆ ನೀಡಲು ಎದುರು ನೋಡುತ್ತಿದ್ದೇವೆ ಎಂದು ಕೆಎಂಎಫ್ ಎಂಡಿ ಬಿ. ಶಿವಸ್ವಾಮಿ ಹೇಳಿದ್ದಾರೆ.

ಅಭಿನಂದನೆ



ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ಚುನಾವಣೆಯಲ್ಲಿ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾದ ಕುಂಬಾರಕೊಪ್ಪಲಿನ ಟೆಂಟ್ ರವಿ ಅವರನ್ನು ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ ಅಭಿನಂದಿಸಿದರು. ಈ ವೇಳೆ ಟಿಎಪಿಸಿಎಂಎಸ್ ನಿರ್ದೇಶಕ ಚಂದ್ರಶೇಖರ್, ಮೈಸೂರು ಕೋ ಆಪರೇಟಿವ್ ಬ್ಯಾಂಕಿನ ನಿರ್ದೇಶಕ ಯೋಗೇಶ್, ಪ್ರೆಸ್ ರಾಜು, ಕಾಳಪ್ಪ, ಪ್ರವೀಣ್ ಕುಮಾರ್, ಸಿಟಿ ಕೋ ಆಪರೇಟಿವ್ ಬ್ಯಾಂಕಿನ ನಿರ್ದೇಶಕ ಎಸ್‌ಬಿ ಶಿವು, ಸಿದ್ದಪ್ಪ, ಲೋಕೇಶ್, ಕೇಬಲ್ ರವಿ ಉಪಸ್ಥಿತರಿದ್ದರು

ಬೆಟ್ಟದಪುರ ಪೊಲೀಸರಿಂದ ಖದೀಮರಿಬ್ಬರ ಬಂಧನ; 4.75 ಲಕ್ಷ ರೂ. ಮೌಲ್ಯದ ಸ್ವತ್ತು ವಶಕ್ಕೆ

ಮೈಸೂರು,ಜ.13(ಪಿಎಂ)– ಇಬ್ಬರು ಖದೀಮರನ್ನು ಬಂಧಿಸುವ ಮೂಲಕ ಬೆಟ್ಟದಪುರ ಪೊಲೀಸರು ಏಳು ಕಳ್ಳತನ ಪ್ರಕರಣಗಳನ್ನು ಭೇದಿಸಿದ್ದು, ಬಂಧಿತರಿಂದ ಒಟ್ಟು 4.75 ಲಕ್ಷ ರೂ. ಮೌಲ್ಯದ ಸ್ವತ್ತನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಜಿಲ್ಲೆಯ ಬೆಟ್ಟದಪುರ ಪೊಲೀಸ್ ಠಾಣಾ ವ್ಯಾಪ್ತಿಯ ಪಿಹೆಚ್ ರಸ್ತೆಯಲ್ಲಿರುವ ಎಸ್‌ಎಂಹೆಚ್ ಹಾರ್ಡ್‌ವೇರ್ ಅಂಗಡಿಯಲ್ಲಿ 2024ರ ಡಿ.30ರಂದು ರಾತ್ರಿ ಕಳ್ಳತನ ನಡೆದಿತ್ತು. ಈ ಸಂಬಂಧ ಕಳ್ಳರ ಪತ್ತೆಗೆ ಬೈಲಕುಪ್ಪೆ ವೃತ್ತದ ಸಿಪಿಐ ಎಂ.ಕೆ.ದೀಪಕ್ ನೇತೃತ್ವದಲ್ಲಿ ಬೆಟ್ಟದಪುರ ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದರು. ಅಂತೆಯೇ ಸೋಮವಾರ ಇಬ್ಬರು ಖದೀಮರನ್ನು ಬಂಧಿಸಲಾಗಿದೆ.

ಬಂಧಿತರ ವಿಚಾರಣೆ ವೇಳೆ ಬೆಟ್ಟದಪುರ ಪೊಲೀಸ್ ಠಾಣೆಯ ಪ್ರಕರಣ ಸೇರಿದಂತೆ ಹುಣಸೂರು ಪಟ್ಟಣ ಪೊಲೀಸ್ ಠಾಣೆಯ ಎರಡು ಪ್ರಕರಣ, ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆ, ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆ, ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆ, ಮದ್ದೂರು ಪಟ್ಟಣ ಪೊಲೀಸ್ ಠಾಣೆಯ ತಲಾ ಒಂದು ಪ್ರಕರಣ ಸೇರಿದಂತೆ ಒಟ್ಟು 7 ಪ್ರಕರಣಗಳನ್ನು ಭೇದಿಸಲಾಗಿದೆ.

ಆ ಮೂಲಕ ಬಂಧಿತರಿಂದ ಸುಮಾರು 50 ಸಾವಿರ ರೂ. ಮೌಲ್ಯದ ಕಾರಿನ ನಾಲ್ಕು ಚಕ್ರಗಳು, ಸುಮಾರು 5 ಸಾವಿರ ರೂ. ಮೌಲ್ಯದ ಐರನ್ ಕಟ್ಟರ್, ಸುಮಾರು 10 ಸಾವಿರ ರೂ. ಮೌಲ್ಯದ ಟೂಲ್ ಕಿಟ್, ಸುಮಾರು 5 ಸಾವಿರ ರೂ. ಮೌಲ್ಯದ ಡ್ರಿಲ್ಲಿಂಗ್ ಮಿಷಿನ್, 4 ಲಕ್ಷ ರೂ. ಮೌಲ್ಯದ ಮೂರು ದ್ವಿಚಕ್ರ ವಾಹನಗಳು, 5 ಸಾವಿರ ರೂ. ನಗದು ಹಾಗೂ ಇನ್ನಿತರೆ ವಸ್ತುಗಳು ಸೇರಿದಂತೆ ಒಟ್ಟು 4.75 ಲಕ್ಷ ರೂ ಮೌಲ್ಯದ ಸ್ವತ್ತನ್ನು ವಶಪಡಿಸಿಕೊಳ್ಳಲಾಗಿದೆ. ಬೆಟ್ಟದಪುರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್‌ಗಳಾದ ಶಿವಶಂಕರ್ (ಕಾನೂನು ಮತ್ತು ಸುವ್ಯವಸ್ಥೆ), ಸ್ವಾಮಿ ನಾಯಕ (ತನಿಖೆ) ಮತ್ತು ಸಿಬ್ಬಂದಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್, ವಿಷ್ಣುವರ್ಧನ್ ಶ್ಲಾಘಿಸಿದ್ದಾರೆ.


ಅಭಿನಂದನೆ



ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ ಬಿಸಿಬಿ ವಿಭಾಗದ ನಿರ್ದೇಶಕರಾಗಿ ಕುಂಬಾರಕೊಪ್ಪಲು ರವಿ ಟೆಂಟ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ತಮ್ಮ ಆಯ್ಕೆಗೆ ಸಹಕರಿಸಿದ ಮಾಜಿ ಶಾಸಕ ಎಲ್.ನಾಗೇಂದ್ರ, ರವಿ, ಕೆಂಪಣ್ಣ, ಸಿಟಿ ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಪಡುವಾರಹಳ್ಳಿ ಶಿವು, ಕೇಬಲ್ ವಿಜಿ, ದುರ್ಗಾ ಗ್ರೂಪ್ಸ್ ಎಂ.ಡಿ ರವಿ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಹಸುಗಳ ಕೆಚ್ಚಲು ಕೊಯ್ದ ಪ್ರಕರಣ

ಓರ್ವ ಆರೋಪಿ ಬಂಧನ; ಜ.24ರವರೆಗೆ ನ್ಯಾಯಾಂಗ ಬಂಧನ



ಶೇಕ್ ನಸ್ರು

ಬೆಂಗಳೂರು: ಹಸುಗಳ ಕೆಚ್ಚಲು ಕೊಯ್ದು ಕ್ರೌರ್ಯ ಮೆರೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವ ಆರೋಪಿಯನ್ನು ಕಾಟನ್‌ಪೇಟೆ ಪೊಲೀಸರು ಭಾನುವಾರ ರಾತ್ರಿ ಬಂಧನಕ್ಕೊಳಪಡಿಸಿದ್ದಾರೆ.

ಆರೋಪಿಯನ್ನು ಶೇಕ್ ನಸ್ರು (30) ಎಂದು ಗುರ್ತಿಸಲಾಗಿದೆ. ಈತ ಬಿಹಾರ ರಾಜ್ಯದ ಚಂಪಾರನ್ ಜಿಲ್ಲೆ ಮೂಲದವನಾಗಿದ್ದು, ಘಟನೆ ನಡೆದ ಸ್ಥಳದಿಂದ 50 ಮೀಟರ್ ದೂರದಲ್ಲಿರುವ ಪ್ಲಾಸ್ಟಿಕ್ ಹಾಗೂ ಬಟ್ಟೆ ಹೊಲೆಯುವ ಅಂಗಡಿಯಲ್ಲಿ ಸಹಾಯಕನಾಗಿ ಈತ ಕೆಲಸ ಮಾಡುತ್ತಿದ್ದ ಎಂದು ತಿಳಿದುಬಂದಿದೆ.

ಆರೋಪಿಯನ್ನು ಬಂಧನಕ್ಕೊಳಪಡಿಸಿರುವ ಪೊಲೀಸರು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು, ಆರೋಪಿಯನ್ನು ಜ.24ರವರೆಗೆ ನ್ಯಾಯಾಂಗ ಬಂಧನಕ್ಕೊಳಪಡಿಸಲಾಗಿದೆ. ಈ ಕೃತ್ಯದಲ್ಲಿ ಬೇರೆ ಯಾರೂ ಭಾಗಿಯಾಗಿರುವುದು ಕಂಡುಬಂದಿಲ್ಲ. ಆರೋಪಿಯನ್ನು ಬಂಧಿಸಿ ಜ.24 ರವರೆಗೆ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ಚಿಕಿತ್ಸೆ ಬಳಿಕ ಹಸುಗಳು ಅಪಾಯದಿಂದ ಪಾರಾಗಿವೆ ಎಂದು ಡಿಸಿಪಿ (ಪಶ್ಚಿಮ) ಎಸ್. ಗಿರೀಶ್ ಅವರು ಹೇಳಿದ್ದಾರೆ. ಈ ಘಟನೆ ಚಾಮರಾಜಪೇಟೆಯ ಓಲ್ಡ್ ಪೆನ್ಷನ್ ಮೊಹಲ್ಲಾದ ವಿನಾಯಕನಗರದಲ್ಲಿ ನಡೆದಿತ್ತು. ಹಸುಗಳ ಮಾಲೀಕ ಕರ್ಣ ಅವರು ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ದೂರು ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದರು. ಚಿಕ್ಕಪೇಟೆ ಉಪ ವಿಭಾಗದ ಎಸಿಪಿ ರಮೇಶ್ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಇನ್ನು, ಹಸುಗಳಿಗೆ ಚಾಮರಾಜಪೇಟೆ ಪಶು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದ್ದು, ಹಸುಗಳು ಕ್ಷೇಮವಾಗಿವೆ. ಆದರೆ, ಇನ್ನೂ ಎರಡು ವಾರ ಗಾಯ ಮಾಸಲು ಸಮಯ ಬೇಕಿದೆ ಎಂದು ತಿಳಿದುಬಂದಿದೆ.

ಈ ವಿಚಾರ ತಿಳಿಯುತ್ತಿದ್ದಂತೆ ಹಿಂದೂ ಪರ ಸಂಘಟನೆ ಮುಖಂಡರು, ವಿಪಕ್ಷ ನಾಯಕ ಆರ್.ಅಶೋಕ್, ಸಂಸದ ಪಿಸಿ ಮೋಹನ್, ಎಂಎಲ್‌ಸಿ ರವಿ ಕುಮಾರ್ ಸ್ಥಳಕ್ಕೆ ಭೇಟಿ ನೀಡಿ, ಮಾಲೀಕ ಕರ್ಣನಿಗೆ ಸಾಂತ್ವನ ಹೇಳಿದ್ದರು. ಘಟನೆಯನ್ನು ಖಂಡಿಸಿದ ನಾಯಕರು, ಕಾಂಗ್ರೆಸ್ ಸರ್ಕಾರದ ವಿರುದ್ಧ ಕಿಡಿಕಾರಿದ್ದರು. ವಿಪಕ್ಷ ನಾಯಕ ಆರ್.ಅಶೋಕ್ ವೈಯಕ್ತಿಕವಾಗಿ ಒಂದು ಲಕ್ಷ ರೂ. ಪರಿಹಾರ ಘೋಷಣೆ ಮಾಡಿದ್ದರು.

ಬೈಕ್‌ಗೆ ಗೂಡ್ಸ್ ವಾಹನ ಡಿಕ್ಕಿ; ತಂದೆ ಸಾವು, ಮಗನಿಗೆ ಗಾಯ

ಮೈಸೂರು, ಜ.13(ಎಸ್‌ಬಿಡಿ)– ಟಾಟಾ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನ ಹಿಂಬದಿ ಸವಾರ ಮೃತಪಟ್ಟಿರುವ ಘಟನೆ ಮೈಸೂರಿನ ಇಲವಾಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದೆ.

ಇಲವಾಲ ಹೋಬಳಿ, ಕಮರಹಳ್ಳಿ ಗ್ರಾಮದ ನಿಂಗೇಗೌಡ(55) ಅಪಘಾತದಲ್ಲಿ ಸಾವನ್ನಪ್ಪಿದ್ದು, ಅವರ ಪುತ್ರ ಪ್ರದೀಪ್ ಕುಮಾರ್(27) ಗಾಯಗೊಂಡಿದ್ದಾರೆ.

ಭಾನುವಾರ ಬೆಳಗ್ಗೆ 6 ಗಂಟೆ ಸಮಯದಲ್ಲಿ ನಿಂಗೇಗೌಡ ಹಾಗೂ ಪ್ರದೀಪ್ ಕುಮಾರ್ ತಮ್ಮ ಸ್ಪ್ಲೆಂಡರ್ ಪ್ಲಸ್ ಬೈಕ್(ಕೆಎ–55, ವೈ–3805)ನಲ್ಲಿ ಕೆಆರ್‌ಎಸ್ ಸಂತೆಗೆ ಹೋಗುತ್ತಿದ್ದಾಗ ನಾಗವಾಲ ಜಂಕ್ಷನ್ ಬಳಿ ಅಪಘಾತ ಸಂಭವಿಸಿದೆ.

ಲಿಂಗದೇವರಕೊಪ್ಪಲು ಗ್ರಾಮದ ಕಡೆಯಿಂದ ಕಾಮನಕೊಪ್ಪಲು ಕಡೆಗೆ ಸಾಗುತ್ತಿದ್ದ ಟಾಟಾ ಗೂಡ್ಸ್ ವಾಹನ(ಕೆಎ–09, ಎಎ–3609) ಬೈಕ್‌ಗೆ ಡಿಕ್ಕಿ ಹೊಡೆದಿದೆ. ಇದರಿಂದ ತಂದೆ–ಮಗ ನೆಲಕ್ಕುರುಳಿ ಗಾಯಗೊಂಡಿದ್ದಾರೆ. ತಕ್ಷಣ ಇಬ್ಬರನ್ನೂ ಮೈಸೂರಿನ ಆಸ್ಪತ್ರೆಗೆ ಕರೆತಂದು ದಾಖಲಿಸಲಾಗಿದೆ. ಆದರೆ ತೀವ್ರವಾಗಿ ಗಾಯಗೊಂಡಿದ್ದ ನಿಂಗೇಗೌಡ ಅವರು ಚಿಕಿತ್ಸೆ ಫಲಕಾರಿಯಾಗದೆ ಸಂಜೆ ವೇಳೆಗೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ಇಲವಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಕರುಳಬಳ್ಳಿಯನ್ನೇ ಕಾಲುವೆಗೆ ಎಸೆದು ಆತ್ಮಹತ್ಯೆಗೆ ತಾಯಿ ಯತ್ನ; 4 ಮಕ್ಕಳು ನೀರುಪಾಲು

ವಿಜಯಪುರ: ಜಿಲ್ಲೆಯ ನಿಡಗುಂದಿ ತಾಲೂಕಿನ ಬೇನಾಳ ಗ್ರಾಮದಲ್ಲಿ ಕೌಟುಂಬಿಕ ಕಲಹಕ್ಕೆ ಬೇಸತ್ತ ತಾಯಿಯೊಬ್ಬಳು ಮಕ್ಕಳ ಸಮೇತ ಕಾಲುವೆಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದು, ಘಟನೆಯಲ್ಲಿ ನಾಲ್ಕು ಮಕ್ಕಳು ಸಾವನ್ನಪ್ಪಿವೆ. ಇನ್ನು ಮಹಿಳೆಯನ್ನು ಸ್ಥಳೀಯರು ರಕ್ಷಿಸಿದ್ದಾರೆ. ಮೃತ ಮಕ್ಕಳನ್ನು ಕೊಲ್ಹಾರ ತಾಲೂಕಿನ ತೆಲಗಿ ಗ್ರಾಮದ 5 ವರ್ಷದ ತನು ನಿಂಗರಾಜ ಭಜಂತ್ರಿ, ಮೂರು ವರ್ಷದ ರಕ್ಷಾ ನಿಂಗರಾಜ ಭಜಂತ್ರಿ ಹಾಗೂ 13 ತಿಂಗಳ ಮಕ್ಕಳಾದ ಹಸೇನ ನಿಂಗರಾಜ ಭಜಂತ್ರಿ ಹಾಗೂ ಹುಸೇನ ನಿಂಗರಾಜ ಭಜಂತ್ರಿ ಎಂದು ಗುರುತಿಸಲಾಗಿದೆ. ವಿಜಯಪುರ ಜಿಲ್ಲೆಯ ನಿಡಗುಂದಿ ತಾಲೂಕಿನ ಬೇನಾಳ ಬಳಿಯ, ಆಲಮಟ್ಟಿ ಎಡದಂಡೆ ಮುಖ್ಯ ಕಾಲುವೆಯಲ್ಲಿ ಈ ಘಟನೆ ನಡೆದಿದೆ.

ಚೆಲುವಾಂಬ ಆಸ್ಪತ್ರೆಯ ಐಸಿಯುನಲ್ಲಿ ಪತ್ನಿ ಚಿಕಿತ್ಸೆ ಪಡೆಯುತ್ತಿದ್ದರೆ ಹೊರಗೆ ಮಲಗಿದ್ದಲ್ಲೇ ಪತಿ ಸಾವು!



ಸೋಮವಾರ ರಾತ್ರಿ ಆಸ್ಪತ್ರೆ ಮುಂಭಾಗ ನಾಗೇಶ ಅಸುನೀಗಿರುವುದು.

ಕೊರೆಯುವ ಚಳಿಯಲ್ಲಿ ಹೃದಯಾಘಾತದಿಂದ ಸಾವಿನ ಶಂಕೆ

ಮೈಸೂರು, ಜ.13(ಆರ್‌ಕೆ)– ಹೆರಿಗೆಯಾದ ಪತ್ನಿ ಚೆಲುವಾಂಬ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೆ, ರಾತ್ರಿ ಹೊರಗೆ ಮಲಗಿದ್ದ ಆಕೆಯ ಪತಿ ಬೆಳಗಾಗುವಷ್ಟರಲ್ಲಿ ಸಾವನ್ನಪ್ಪಿರುವ ಘಟನೆ ಇಂದು ಸಂಭವಿಸಿದೆ. ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕು, ಚೌಡಳ್ಳಿ ಗ್ರಾಮದ ಲೇಟ್ ಗೋವಿಂದಯ್ಯ ಅವರ ಮಗ ನಾಗೇಶ(35) ಸಾವನ್ನಪ್ಪಿದವರು. ನಾಲ್ಕು ದಿನಗಳ ಹಿಂದಷ್ಟೇ ನಾಗೇಶ ಹೆರಿಗೆಗಾಗಿ ಪತ್ನಿ ಅಶ್ವತ್ಥಮ್ಮ ಅವರನ್ನು ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ದಾಖಲು ಮಾಡಿದ್ದರು. ಎರಡು ದಿನಗಳ ಹಿಂದೆ ಡೆಲಿವರಿಯಾಯಿತಾದರೂ, ರಕ್ತದೊತ್ತಡ ನಿಯಂತ್ರಣಕ್ಕೆ ಬರುತ್ತಿರಲಿಲ್ಲ. ಹಾಗಾಗಿ ನಿಗಾ ವಹಿಸುವ ಸಲುವಾಗಿ ಬಾಣಂತಿ ಅಶ್ವತ್ಥಮ್ಮರನ್ನು ತೀವ್ರ ನಿಗಾ ಘಟಕದಲ್ಲಿರಿಸಿ ಚಿಕಿತ್ಸೆ ನೀಡಲಾಗುತ್ತಿತ್ತು.

ಪತ್ನಿಯ ನೋಡಿಕೊಳ್ಳಲು ನಾಗೇಶ ನಾಲ್ಕು ದಿನಗಳಿಂದಲೂ ಆಸ್ಪತ್ರೆ ಬಳಿಯೇ ಇದ್ದರು. ಆವರಣದಲ್ಲಿ ರೋಗಿಗಳ ಕಡೆಯವರಿಗೆ ಉಳಿದುಕೊಳ್ಳಲು ಡಾರ್ಮೆಟರಿ ನಿರ್ಮಿಸಿ, ಮೂಲಸೌಕರ್ಯ ಕಲ್ಪಿಸಲಾಗಿದೆಯಾದರೂ, ಕಳೆದ ರಾತ್ರಿ ನಾಗೇಶ ಆಸ್ಪತ್ರೆ ಮುಂಭಾಗ ಪಾರ್ಕ್‌ನಲ್ಲಿ ಚಾಪೆ ಹಾಸಿಕೊಂಡು ಮಲಗಿದ್ದರು.

ಇಂದು ಬೆಳಗ್ಗೆ ಬಹಳ ಹೊತ್ತಾದರೂ ಎಚ್ಚರವಾಗದ ಕಾರಣ ಆಸ್ಪತ್ರೆ ಸಿಬ್ಬಂದಿ ಹೋಗಿ ನೋಡಿದಾಗ ನಾಗೇಶ ಮೃತಪಟ್ಟಿರುವುದು ದೃಢಪಟ್ಟಿತು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ದೇವರಾಜ ಠಾಣೆ ಸಬ್‌ಇನ್‌ಸ್ಪೆಕ್ಟರ್ ಪ್ರಭು ಹಾಗೂ ಸಿಬ್ಬಂದಿ, ಮಹಜರು ನಡೆಸಿ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು.

ಹೊರಗೆ ಕೊರೆಯುವ ಚಳಿಯಿಂದ ತೀವ್ರ ಹೃದಯಾಘಾತವಾಗಿ ಅವರು ಮೃತಪಟ್ಟಿರಬಹುದೆಂದು ಶಂಕಿಸಲಾಗಿದೆಯಾದರೂ, ಮರಣೋತ್ತರ ಪರೀಕ್ಷಾ ವರದಿ ಬಂದ ನಂತರ ನಾಗೇಶ ಸಾವಿಗೆ ನಿಖರ ಕಾರಣ ಏನೆಂಬುದು ತಿಳಿಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಡಾ. ಕೆ.ಎಸ್.ದಾಕ್ಷಾಯಿಣಿ, ರೋಗಿಗಳ ಕಡೆಯವರು ತಂಗಲೆಂದೇ ಚೆಲುವಾಂಬ ಆಸ್ಪತ್ರೆ ಆವರಣದಲ್ಲಿ ಮೂಲ ಸೌಕರ್ಯಗಳೊಂದಿಗೆ ಡಾರ್ಮೆಟರಿ ನಿರ್ಮಿಸಲಾಗಿದೆ. ಅಲ್ಲಿ ಮಲಗುವ ಬದಲು ಕೆಲವರು ಆಸ್ಪತ್ರೆ ಬಾಗಿಲ ಎದುರು, ಹೊರಗಡೆ ಪಾರ್ಕ್‌ನಲ್ಲಿ ಮಲಗುವುದುಂಟು. ಪತ್ನಿ ಐಸಿಯುನಲ್ಲಿದ್ದ ಕಾರಣ, ನಾಗೇಶ ಹೊರಗೆ ಮಲಗಿದ್ದರು ಎಂದು ಹೇಳಲಾಗಿದೆ. ಈ ವೇಳೆ ಸಾವಿಗೀಡಾಗಿದ್ದಾರೆ ಎಂಬ ಮಾಹಿತಿ ಇದೆ. ಮರಣೋತ್ತರ ಪರೀಕ್ಷಾ ವರದಿ ಬಂದ ನಂತರ ಸಾವಿನ ನಿಖರ ಕಾರಣ ತಿಳಿಯಲಿದೆ ಎಂದರು.

ಮೈಸೂರು ಮಿತ್ರ

ಒಂದನೇ ಪುಟದಿಂದ

ಪ್ರತ್ಯೇಕ ಸಭೆಯನ್ನ ಪಕ್ಷ ಸಹಿಸಲ್ಲ

ಅದಕ್ಕೆ ಯಾವುದೇ ಕಿಮ್ಮತ್ತು ಇರುವುದಿಲ್ಲ ಎಂದಿದ್ದಾರೆ. ಸಿದ್ದರಾಮಯ್ಯ ಅಧಿಕಾರದಿಂದ ಕೆಳಗಿಳಿಯುತ್ತಾರೆ, ಶಿವಕುಮಾರ್ ಆ ಸ್ಥಾನಕ್ಕೆ ಏರುತ್ತಾರೆ ಎಂಬ ಕಲ್ಪನೆಗಳೊಂದಿಗೆ ಸಭೆಗಳನ್ನು ಮಾಡಬೇಡಿ ಎಂದು ಸಚಿವರುಗಳನ್ನು ಎಚ್ಚರಿಸಿದ್ದಾರೆ.

ಆಡಳಿತ ಮತ್ತು ಸರ್ಕಾರದಲ್ಲಿ ನಾಯಕತ್ವ ಕುರಿತು ಎದ್ದಿರುವ ಗೊಂದಲ ಪರಿಹರಿಸಲು ರಾಜ್ಯಕ್ಕೆ ಆಗಮಿಸಿರುವ ಸುರ್ಜೇವಾಲ ಇಂದು ಬೆಳ್ಳಂಬೆಳಗ್ಗೆಯೇ ಆಯ್ದ ಸಚಿವರನ್ನು ತಾವು ಉಳಿದುಕೊಂಡಿದ್ದ ಪಂಚತಾರಾ ಹೋಟೆಲ್‌ಗೆ ಕರೆಸಿಕೊಂಡು ಖಡಕ್ ಸೂಚನೆ ನೀಡಿದ್ದಾರೆ.

ಜಾತಿ ಮತ್ತು ಗುಂಪುಗಳಿಗೆ ಪಕ್ಷ ಎಂದೂ ಮಣೆ ಹಾಕುವುದಿಲ್ಲ, ಆಡಳಿತ ನಡೆಸುವ ನೀವುಗಳು ಪ್ರತ್ಯೇಕ ಸಭೆ ಮತ್ತು ಔತಣಕೂಟಗಳನ್ನು ನಡೆಸಿದರೆ, ತಪ್ಪು ಸಂದೇಶ ಹೋಗುತ್ತದೆ. ನಿಮ್ಮ ಇಂತಹ ನಡವಳಿಕೆಗಳಿಂದ ಪಕ್ಷ ಮತ್ತು ಸರ್ಕಾರ ಮುಜುಗರಕ್ಕೆ ಒಳಗಾಗಬೇಕಾಗುತ್ತದೆ, ಅಲ್ಲದೆ, ಪ್ರತಿಪಕ್ಷ ಬಿಜೆಪಿ ಇದನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತದೆ ಎಂದು ಕಿವಿಮಾತು ಹೇಳಿದ್ದಾರೆ.

ನೀವು ಏನೇ ಮಾಡುವುದಾದರೂ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರನ್ನು ಮುಂದಿಟ್ಟುಕೊಂಡು ಮಾಡಿ, ಪಕ್ಷಕ್ಕೆ ವಿರುದ್ಧವಾಗಿ ನಡೆದುಕೊಂಡರೆ ವರಿಷ್ಠರು ತಮ್ಮದೇ ಆದ ನಿರ್ಣಯಗಳನ್ನು ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಬಳಿಕ ಪಕ್ಷದ ಕಚೇರಿಯಲ್ಲಿ ನಡೆದ ರಾಜ್ಯಮಟ್ಟದ ಕಾರ್ಯಕರ್ತರ ಸಭೆಯಲ್ಲೂ ಪಕ್ಷವನ್ನು ಬುಲ್ಡೋಜ್ ಮಾಡಲು ಮುಂದಾದರೆ ಸುಮ್ಮನಿರುವುದಿಲ್ಲ ಎಂದಿದ್ದಾರೆ. ನಾಯಕರ ಭಾವನೆಗಳು ಅರ್ಥವಾಗುತ್ತದೆ. ಆದರೆ, ಪಕ್ಷಕ್ಕಿಂತ ನಾವು ದೊಡ್ಡವರು ಎಂಬುದಾಗಿ ಭಾವಿಸಿಕೊಳ್ಳಬೇಡಿ. ಶಿಸ್ತನ್ನು ಯಾರೂ ಮೀರಬಾರದು, ನಾನು, ಸಿದ್ದರಾಮಯ್ಯ, ಶಿವಕುಮಾರ್ ಸೇರಿದಂತೆ ಎಲ್ಲರೂ ಪಕ್ಷದ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಿದೆ.

ಯಾರನ್ನೋ ಓಲೈಸಲು, ಯಾರನ್ನೋ ವಿರೋಧಿಸಲು ಹೋಗಿ, ಪಕ್ಷಕ್ಕಿಂತ ನಾನೇ ದೊಡ್ಡವನು ಎಂದುಕೊಂಡರೆ ಅದು ನಿಮ್ಮ ಭ್ರಮೆ. ಇಂತಹ ಭ್ರಮೆ ಇಟ್ಟುಕೊಂಡು ಹೊರಹೋದವರು ಏನೇನು ಆಗಿದ್ದಾರೆ ಎಂಬುದು ನಿಮಗೂ ತಿಳಿದಿದೆ. ನೀವು ಎಷ್ಟೇ ದೊಡ್ಡವರಾಗಿರಿ, ಕಾರ್ಯಕರ್ತರನ್ನು ಕಡೆಗಣಿಸಿ ರಾಜಕೀಯ ನಿರ್ಧಾರಗಳನ್ನು ಕೈಗೊಳ್ಳಲು ಹೋಗಬೇಡಿ ಎಂದು ಸಚಿವರುಗಳಿಗೆ ಸಭೆಯಲ್ಲೇ ಪರೋಕ್ಷವಾಗಿ ಟಾಂಗ್ ಕೊಟ್ಟಿದ್ದಾರೆ. ಸಿದ್ದರಾಮಯ್ಯ ಹಾಗೂ ಶಿವಕುಮಾರ್ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ, ಅವರು ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದಾರೆ, ಇದನ್ನು ಸಹಿಸದ ಬಿಜೆಪಿ ಮತ್ತು ಜೆಡಿಎಸ್ ರಾಜಕೀಯವಾಗಿ ದಾಳಿ ಮಾಡುತ್ತಿವೆ ಎಂದರು.

ಜಾತಿ ಗಣತಿ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದ ಸುರ್ಜೇವಾಲ, ಇದು ಡಿ.ಕೆ.ಶಿವಕುಮಾರ್ ವಿರುದ್ಧವೂ ಅಲ್ಲ, ಎಚ್.ಕೆ.ಪಾಟೀಲ್ ವಿರುದ್ಧವೂ ಅಲ್ಲ, ಸಣ್ಣ ಸಣ್ಣ ವರ್ಗದವರಿಗೂ ಸರ್ಕಾರದ ಯೋಜನೆಗಳನ್ನು ತಲುಪಿಸುವ ಉದ್ದೇಶದಿಂದ ಸಮೀಕ್ಷೆ ನಡೆಸಲಾಗಿದೆ. ಆಯಕಟ್ಟಿನ ಜಾಗಗಳಲ್ಲಿ ಬ್ರಾಹ್ಮಣರೇ ಇದ್ದಾರೆ, ಉಳಿದವರಿಗೆ ಸರಿಯಾದ ಸ್ಥಾನಮಾನಗಳೇ ಇಲ್ಲದಂತಾಗಿದೆ, ಆರ್ಥಿಕ ದುರ್ಬಲರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಜಾತಿ ಗಣತಿ ಸಮೀಕ್ಷೆ ವರದಿ ಜಾರಿಗೆ ತರಲಾಗುತ್ತಿದೆ ಎಂದರು.

ಕುರ್ಚಿಯೇ ಖಾಲಿ ಇಲ್ಲದಿರುವಾಗ ಹೊಸ ಮುಖ್ಯಮಂತ್ರಿ ಎಲ್ಲಿ ಕೂರಿಸುತ್ತೀರಿ...

ಮಾಧ್ಯಮಗಳ ಮೇಲೆ ಹರಿಹಾಯ್ದ ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು: ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕತ್ವ ಬದಲಾವಣೆ ಪ್ರಸ್ತಾಪವೇ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಮುಖ್ಯಮಂತ್ರಿ ಬದಲಾವಣೆ ಆಗುತ್ತಾರೆ ಎಂಬ ಮಾಧ್ಯಮಗಳ ವರದಿಗೆ ಕಿಡಿಕಾರಿದ ಸಿದ್ದರಾಮಯ್ಯ, ಕುರ್ಚಿಯೇ ಖಾಲಿ ಇಲ್ಲದಿರುವಾಗ ಹೊಸ ಮುಖ್ಯಮಂತ್ರಿಯನ್ನು ಎಲ್ಲಿ ಕೂರಿಸುತ್ತೀರಿ ಎಂದು ಪ್ರಶ್ನಿಸಿದರು. ಪಕ್ಷ ಮತ್ತು ಆಡಳಿತದಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ನಾವು ಒಟ್ಟಾಗಿ ಹೋಗುತ್ತಿರುವುದನ್ನು ಸಹಿಸಲಾಗದೆ, ನೀವು ಇಂತಹ ಊಹಾಪೋಹಗಳನ್ನು ಹರಿಬಿಡುತ್ತಿದ್ದೀರಿ ಎಂದು ಸುದ್ದಿಗಾರರ ಮೇಲೆ ಹರಿಹಾಯ್ದರು. ಊಹಾಪೋಹಗಳನ್ನು ಹರಡುವ ಬದಲು ಸತ್ಯವನ್ನು ಹೇಳಿ, ನಿಮ್ಮ ಟಿಆರ್‌ಪಿಗಾಗಿ ನಾಯಕತ್ವ ಬದಲಾವಣೆ ವಿಚಾರ ಮುಂದಿಡುತ್ತಿದ್ದೀರಿ ಎಂದು ಟೀಕಿಸಿದರು. ಸರ್ಕಾರ ಯಾವುದೇ ತೀರ್ಮಾನ ಕೈಗೊಳ್ಳುವ ಮುನ್ನ ಪಕ್ಷವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತದೆ. ಆದ್ದರಿಂದಲೇ ನಾವು ವಿಧಾನಸಭಾ ಚುನಾವಣೆಯಲ್ಲಿ ಜನತೆಗೆ ನೀಡಿದ ಭರವಸೆಗಳನ್ನು ಅಲ್ಪಾವಧಿಯಲ್ಲೇ ಅನುಷ್ಠಾನಗೊಳಿಸಿದ್ದೇವೆ. ಇದು ಪ್ರತಿಪಕ್ಷ ಬಿಜೆಪಿಗೆ ಸಹಿಸಲಾಗುತ್ತಿಲ್ಲ. ಅವರ ಜೊತೆಗೆ ಮಾಧ್ಯಮದ ಒಂದು ವರ್ಗವೂ ಸೇರಿಕೊಂಡಿದೆ. ನಮ್ಮ ಪಕ್ಷದ ಉಸ್ತುವಾರಿ ಸುರ್ಜೇವಾಲ, ಪಕ್ಷ ಸಂಘಟನೆ ಮತ್ತು ಬೆಳಗಾವಿ ಸಮಾವೇಶಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಬಂದಿದ್ದಾರೆ. ಭಾರತೀಯ ಸಂವಿಧಾನ, ಮಹಾತ್ಮ ಗಾಂಧಿ ಹಾಗೂ ಡಾ.ಅಂಬೇಡ್ಕರ್ ಅವರನ್ನು ಬಿಜೆಪಿ ಮತ್ತು ಆರ್‌ಎಸ್‌ಎಸ್ ನಿರಂತರವಾಗಿ ಅಪಮಾನಗೊಳಿಸುತ್ತಿರುವುದಕ್ಕೆ ಪ್ರತಿಯಾಗಿ ಸಂವಿಧಾನ ರಕ್ಷಣೆಗಾಗಿ ಕಾಂಗ್ರೆಸ್ ರಾಷ್ಟ್ರಾದ್ಯಂತ ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ಸಭೆಗಳನ್ನು ನಡೆಸುತ್ತಿದೆ ಎಂದರು.

ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ನಡುವೆ ಯಾವ ಭಿನ್ನಾಭಿಪ್ರಾಯವಿಲ್ಲ: ಸುರ್ಜೇವಾಲ

ಬೆಂಗಳೂರು, ಜ.13(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಇಂದಿಲ್ಲಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರು ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ನಡುವೆ ಭಿನ್ನಾಭಿಪ್ರಾಯ ಇದೆ ಎಂಬ ಆರೋಪ ಮಾಡುತ್ತಿದ್ದಾರೆ, ಇದರಲ್ಲಿ ನೀವೂ ಸೇರಿಕೊಂಡಿದ್ದೀರಿ ಎಂದರು.

ಬಿಜೆಪಿ ರಾಜ್ಯ ಘಟಕದಲ್ಲಿ ಅನೇಕ ಬಣಗಳಿವೆ, ಆ ಬಣಗಳ ರಾಜಕೀಯವನ್ನು ಮುಚ್ಚಿಹಾಕಲು ಒಂದು ವರ್ಗ ಸರ್ಕಾರದ ಇರುದ್ಧ ಇಲ್ಲಸಲ್ಲದ ಆರೋಪ ಮತ್ತು ಊಹಾಪೋಹಗಳ ಹುಯಿಲೆಬ್ಬಿಸುತ್ತಿದೆ. ಕರ್ನಾಟಕ ಕಾಂಗ್ರೆಸ್‌ನಲ್ಲಿ ಯಾವುದೇ ಒಡಕಿಲ್ಲ, ಸರ್ಕಾರ ಮತ್ತು ಪಕ್ಷ ಒಂದಾಗಿ ಹೋಗುತ್ತಿರುವುದರಿಂದ ಮುಖ್ಯಮಂತ್ರಿ ಅವರು, ಉತ್ತಮ ಆಡಳಿತ ನೀಡಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು ಸಾಧ್ಯವಾಗಿದೆ. ಐದು ಗ್ಯಾರಂಟಿ ಯೋಜನೆಗಳು ಕರ್ನಾಟಕ ಜನರ ಮನ ಗೆದ್ದಿದೆ, ಇದು ಬಿಜೆಪಿಗೆ ಸಹಿಸಲಾಗುತ್ತಿಲ್ಲ, ಹೀಗಾಗಿ ಅವರೇ ಸೃಷ್ಟಿ ಮಾಡಿಕೊಂಡು ದಿನನಿತ್ಯ ಧಾರಾವಾಹಿ ಮಾದರಿಯಲ್ಲಿ ಕಥೆಗಳನ್ನು ಹೆಣೆಯುತ್ತಿದ್ದಾರೆ ಎಂದರು.

ನಾವೂ ತ್ಯಾಗ ಮಾಡಬೇಕು...!

ಸಿದ್ಧಾಂತವೂ ಇಲ್ಲ ಎಂದು ಹೇಳಿದ್ದಾರೆ. ಹೀಗೆ ತ್ಯಾಗಕ್ಕೆ ಸಿದ್ಧ ಎಂಬ ಸಂದೇಶದ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರೋಧಿ ಬಣಕ್ಕೂ ಸಂದೇಶವನ್ನು ರವಾನೆ ಮಾಡಿದ್ದಾರಾ ಎಂಬ ಹೊಸ ಚರ್ಚೆಯನ್ನು ಹುಟ್ಟುಹಾಕಿದ್ದಾರೆ.

ಇದಕ್ಕೂ ಮುನ್ನ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೂ ಮಾರ್ಮಿಕವಾಗಿ ಮಾತನಾಡಿದ್ದಾರೆ. ಪಕ್ಷವನ್ನು ಅಧಿಕಾರಕ್ಕೆ ತರೋದು ಗೊತ್ತಿದೆ. ನಾನು ಇರುತ್ತೇನೋ ಇಲ್ವೋ ಮುಖ್ಯವಲ್ಲ. ನಮ್ಮ ಪಕ್ಷ ಮುಂದೆಯೂ ಅಧಿಕಾರಕ್ಕೆ ಬಂದೇ ಬರಲಿದೆ. ನೀವು ನಮ್ಮ ಜೊತೆ ನಿಲ್ಲಿ. ನಾನು ಕಾಂಗ್ರೆಸ್ಸಿಗ. ಹೀಗೆ ಹೇಳುವ ಮೂಲಕ ಡಿಕೆಶಿ ಅಬ್ಬರಿಸಿದ್ದಾರೆ.

ಮತ್ತೊಂದೆಡೆ ಕಾರ್ಯಕರ್ತರ ಸಭೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಕೂಡಾ ತ್ಯಾಗದ ಮಾತನ್ನಾಡಿದ್ದರು. ಅವರು ಕೂಡಾ ಕಾಂಗ್ರೆಸ್ ನಾಯಕರ ಉದಾಹರಣೆಯನ್ನು ನೀಡಿ, ಕೆಲವರು ಸಚಿವ ಸ್ಥಾನ ತ್ಯಾಗ ಮಾಡಬೇಕಾಗಿ ಬರಬಹುದು ಎಂದು ಪರೋಕ್ಷವಾಗಿ ಸೂಚನೆ ನೀಡಿದ್ದರು. ಒಟ್ಟಾರೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರ ಮಾತುಗಳು ರಾಜಕೀಯ ವಲಯದಲ್ಲಿ ಕುತೂಹಲ ಕೆರಳಿಸಿವೆ.

ಇನ್ನು ಯಾವ ಡಿನ್ನರ್ ಮೀಟಿಂಗೂ ಇಲ್ಲ

ಶಾಸಕರಿಗೆ ಸೂಚನೆ ನೀಡಿದ್ದಾರೆ. ನೀವು ಏನೇ ಮಾತನಾಡಿದರೂ ಅದು ಪಕ್ಷಕ್ಕೆ ದೊಡ್ಡ ಹಾನಿಯಾಗುತ್ತದೆ. ಏನಿದ್ದರೂ ಬಿಜೆಪಿಯವರ ವಿರುದ್ಧ ಮಾತನಾಡಿ. ಅವರು ಆರೋಪ ಮಾಡುತ್ತಿರುತ್ತಾರೆ. ನೀವು ನಿಮ್ಮ ಪಾಡಿಗೆ ಸುಮ್ಮನೆ ಇರುತ್ತೀರಿ. ಪಕ್ಷದ ಬಗ್ಗೆ ಮಾತನಾಡುವುದಲ್ಲ. ಬಿಜೆಪಿಯವರ ಆರೋಪದ ವಿರುದ್ಧ ಮೊದಲು ಮಾತನಾಡಿ ಎಂದು ಹೇಳಿದರು.

ಸುರ್ಜೆವಾಲಾ ಅವರ ಮಾತಿಗೆ ಧ್ವನಿಗೂಡಿಸಿದ ಸಿಎಂ, ಎಲ್ಲವೂ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಅದರಂತೆ ಎಲ್ಲರೂ ನಡೆಯಬೇಕು ಎಂದರು. ಸಭೆಯಲ್ಲಿ ಅನುದಾನದ ವಿಚಾರ ಮತ್ತೆ ಪ್ರತಿಧ್ವನಿಸಿದ್ದು, ಹಲವು ಶಾಸಕರು ಅನುದಾನಕ್ಕೆ ಆಗ್ರಹಿಸಿದ್ದಾರೆ. ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಒದಗಿಸುವುದಾಗಿ ಸಿಎಂ ಭರವಸೆ ನೀಡಿದರು. ಬಜೆಟ್ ಮಂಡನೆಗೂ ಮೊದಲು ಮತ್ತೊಮ್ಮೆ ಶಾಸಕಾಂಗ ಸಭೆ ಕರೆಯುವುದಾಗಿಯೂ ಸಿಎಂ ಭರವಸೆ ನೀಡಿದರು. ಸರ್ಕಾರ ಸ್ಥಿರವಾಗಿದೆ, ಸಂಪನ್ಮೂಲ ಕ್ರೋಢೀಕರಣ ಆಗುತ್ತಿದೆ. ಅನುದಾನದ ವಿಚಾರದ ಬಗ್ಗೆ ಗಮನ ಇದೆ ಎಂದು ಸಿಎಂ ಸಿದ್ದರಾಮಯ್ಯ ಶಾಸಕರಿಗೆ ಅಭಯ ನೀಡಿದರು. ಈ ಸಭೆಯಲ್ಲಿ ಬೆಳಗಾವಿ ರಾಜಕಾರಣ ಸದ್ದು ಮಾಡಿದೆ. ಇಷ್ಟು ವರ್ಷ ಜಿಲ್ಲಾ ಉಸ್ತುವಾರಿ ಸಚಿವರು ಇದ್ದರೂ ಪಕ್ಷಕ್ಕೆ ಸ್ವಂತ ಕಚೇರಿ ನಿರ್ಮಾಣ ಮಾಡಿರಲಿಲ್ಲ. ನಾನು ಸಚಿವೆ ಆದ ಮೇಲೆ ಸ್ವಂತ ಕಟ್ಟಡ ನಿರ್ಮಾಣ ಮಾಡಿದೆ ಎಂದು ಪರೋಕ್ಷವಾಗಿ ಸತೀಶ್ ಜಾರಕಿಹೊಳಿಗೆ ಹೆಬ್ಬಾಳ್ಕರ್ ಟಾಂಗ್ ನೀಡಿದರು. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾತಿಗೆ ಸತೀಶ್ ಜಾರಕಿಹೊಳಿ ಅಸಮಾಧಾನ ಹೊರಹಾಕಿದ್ದು, ಜಾಗ ಕೊಟ್ಟಿದ್ದು ನಾವು, ನಂತರ ಪಕ್ಷದ ಕಚೇರಿ ನಿರ್ಮಾಣ ಆಗಿದೆ ಎಂದು ತಿರುಗೇಟು ನೀಡಿದರು. ಈ ಹಂತದಲ್ಲಿ ಮಧ್ಯ ಪ್ರವೇಶಿಸಿದ ಸಿಎಂ, ಡಿಸಿಎಂ ಸದ್ಯ ಪಕ್ಷದ ಕಚೇರಿ ಆಯ್ತಲ ಬಿಡಿ ಎಂದು ಇಬ್ಬರ ಮಾತಿಗೆ ಬ್ರೇಕ್ ಹಾಕಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗೃಹ ಕಚೇರಿ ಕೃಷ್ಣಾದಲ್ಲಿ

ಮೊದಲ 'ಮನೆಗೊಂದು ಗ್ರಂಥಾಲಯ' ಯೋಜನೆ ಉದ್ಘಾಟನೆ

ಬೆಂಗಳೂರು, ಜ.13(ಕೆಎಂಶಿ)–'ಮನೆಗೊಂದು ಗ್ರಂಥಾಲಯ' ಅಂಗವಾಗಿ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯೋಜನೆಯ ಮೊದಲ ಗ್ರಂಥಾಲಯ ಉದ್ಘಾಟಿಸಿ, ಕುಮಾರವ್ಯಾಸ ಭಾರತ ಕೃತಿಯ ಸಂಪುಟಗಳ ಲೋಕಾರ್ಪಣೆ ಮಾಡಿದರು.

ಹಿರಿಯ ಸಾಹಿತಿ ನಾಡೋಜ ಡಾ.ಹಂಪ ನಾಗರಾಜಯ್ಯ 'ಮನೆಗೊಂದು ಗ್ರಂಥಾಲಯ' ಯೋಜನೆಯ ಮೊದಲ ಗ್ರಂಥಾಲಯಕ್ಕೆ ಚಾಲನೆ ನೀಡಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಗ್ರಂಥಾಲಯ ಫಲಕ ಅನಾವರಣಗೊಳಿಸಿದರು. ಮನೆಗೊಂದು ಗ್ರಂಥಾಲಯ ಯೋಜನೆಯು ಕನ್ನಡ ಪುಸ್ತಕ ಪ್ರಾಧಿಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ರಾಜ್ಯಾದ್ಯಂತ ಒಂದು ಲಕ್ಷ ಮನೆಗಳಲ್ಲಿ ಗ್ರಂಥಾಲಯ ಸ್ಥಾಪನೆ ಗುರಿ ಹೊಂದಲಾಗಿದೆ.



ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ಹಿರಿಯ ಸಾಹಿತಿ ನಾಡೋಜ ಡಾ.ಹಂಪ ನಾಗರಾಜಯ್ಯ 'ಮನೆಗೊಂದು ಗ್ರಂಥಾಲಯ' ಯೋಜನೆಯ ಮೊದಲ ಗ್ರಂಥಾಲಯಕ್ಕೆ ಚಾಲನೆ ನೀಡಿದರು.

ಯುವಪೀಳಿಗೆಯಲ್ಲಿ ಪುಸ್ತಕಾಭಿರುಚಿ ಬೆಳೆಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ, ಅಲ್ಲದೆ, ಮರೆಯಾಗುತ್ತಿರುವ ಪುಸ್ತಕ ಸಂಸ್ಕೃತಿ ಉಳಿಸುವಲ್ಲಿ ಪ್ರತಿ ಮನೆಯಲ್ಲಿಯೂ ಒಂದು ಪುಟ್ಟ ಗ್ರಂಥಾಲಯ ಕಟ್ಟುವುದು ಈ ಯೋಜನೆಯ ಕನಸಾಗಿದೆ. ಮನೆಯಲ್ಲಿ ಗ್ರಂಥಾಲಯ ಸ್ಥಾಪಿಸುವ ಇಚ್ಛೆ ಉಳ್ಳವರು ಆ ಭಾಗದ ಸಾಹಿತಿ ಅಥವಾ ಬರಹಗಾರರನ್ನು ಸಂಪರ್ಕಿಸಿ ಮನೆಗೆ ಕರೆದೊಯ್ದು, ಕಾರ್ಯಕ್ರಮ ಆಯೋಜಿಸಿದರೆ, ಕನ್ನಡ ಪುಸ್ತಕ ಪ್ರಾಧಿಕಾರದ ಪರವಾಗಿ ಪ್ರಮಾಣಪತ್ರ ನೀಡಲಾಗುತ್ತದೆ. ಮನೆಯ ಒಡೆಯ 100 ಪುಸ್ತಕಗಳ ಮೂಲಕ ಗ್ರಂಥಾಲಯ ಆರಂಭಿಸಬೇಕು, ಪುಸ್ತಕಗಳ ಖರೀದಿ ಹಾಗೂ ಸುಸಜ್ಜಿತವಾಗಿಡುವ ಜವಾಬ್ದಾರಿ ಮನೆ ಮಾಲೀಕರದು. ತಾಲೂಕು, ಜಿಲ್ಲಾ ಮಟ್ಟದಲ್ಲಿ ಸಂಘ, ಸಂಸ್ಥೆಗಳಲ್ಲಿ ಗ್ರಂಥಾಲಯ ಸ್ಥಾಪನೆಗೆ ಗ್ರಂಥಾಲಯ ಜಾಗೃತ ಸಮಿತಿ, ಪ್ರೋತ್ಸಾಹ ನೀಡುವುದರ ಜೊತೆಗೆ ನಿಕಟ ಸಂಪರ್ಕ ಇಟ್ಟುಕೊಳ್ಳುವ ಜವಾಬ್ದಾರಿಯನ್ನೂ ಹೊಂದಿರುತ್ತದೆ.

ಕನ್ನಡ ಸಾಹಿತ್ಯ ಲೋಕದ ಅಜರಾಮರ ಕೃತಿ 'ಕುಮಾರವ್ಯಾಸ ಭಾರತ'ವನ್ನು ಓದುಗರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ಒದಗಿಸುವ ಭರವಸೆ ಹಿನ್ನೆಲೆಯಲ್ಲಿ ಎರಡು ಸಂಪುಟಗಳಿಗೆ 500 ರೂ. ನಿಗದಿಪಡಿಸಲಾಗಿದೆ ಎಂದು ಪುಸ್ತಕ ಪ್ರಾಧಿಕಾರ ತಿಳಿಸಿದೆ.

ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ಆಡಳಿತ ಮಂಡಳಿಯ ಚುನಾವಣೆ; ಕ್ಯಾತಮಾರನಹಳ್ಳಿಯಲ್ಲಿ ಮತಯಾಚನೆ



ಜನವರಿ 19ರಂದು ನಡೆಯಲಿರುವ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ಆಡಳಿತ ಮಂಡಳಿಯ ಚುನಾವಣೆ ಹಿನ್ನೆಲೆಯಲ್ಲಿ ಬ್ಯಾಂಕಿನ ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರಾದ ಕೆ.ಉಮಾಶಂಕರ್ ಕೆಂಪೀರೇಗೌಡರ ನೇತೃತ್ವದ ತಂಡವು ಕ್ಯಾತಮಾರನಹಳ್ಳಿಯಲ್ಲಿ ಷೇರುದಾರರಲ್ಲಿ ಮತಯಾಚಿಸಿತು. ಈ ವೇಳೆ ಸ್ಪರ್ಧಿಗಳಾದ ಪಿ.ರಾಜೇಶ್ವರಿ (ಮಹಿಳಾ ಮೀಸಲು), ಸವಿತಾ (ಮಹಿಳಾ ಮೀಸಲು), ಹೆಚ್.ಹರೀಶ್‌ಕುಮಾರ್ (ಸಾಮಾನ್ಯ), ವಕೀಲ ಪಡುವಾರಹಳ್ಳಿ ಎಂ.ರಾಮಕೃಷ್ಣ (ಎಸ್‌ಟಿ), ಸಿ.ರೇವಣ್ಣ, (ಬಿ.ಸಿ.ಎ), ಕೆ.ಗಿರೀಶ್ (ಪ.ಜಾತಿ), ಎಂ.ಕುಮಾರ್ (ಸಾಮಾನ್ಯ) ಇನ್ನಿತರರಿದ್ದಾರೆ.

ಗಲಾಟೆ ಇಲ್ಲದೇ ಚುನಾವಣೆ: ಮೋದಿಯನ್ನು ಹಾಡಿ ಹೊಗಳಿದ ಒಮರ್ ಅಬ್ದುಲ್ಲಾ



ನವದೆಹಲಿ: ಜಮ್ಮು ಮತ್ತು ಕಾಶ್ಮೀರದಲ್ಲಿ ಹಿಂಸಾಚಾರ ನಡೆಸುವವರಿಗೆ ಯಾವಾಗಲೂ ಸೋಲು ಎದುರಾಗುತ್ತದೆ ಮತ್ತು ಈ ಪ್ರದೇಶದಲ್ಲಿ ಪ್ರಜಾಪ್ರಭುತ್ವಕ್ಕೆ ಯಾವುದೇ ಹಾನಿ ಉಂಟುಮಾಡಲು ಅವರಿಗೆ ಅವಕಾಶ ನೀಡಲಾಗುವುದಿಲ್ಲ ಎಂದು ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ 6.5 ಕಿ.ಮೀ. ಝಡ್–ಮೋರ್ ಸುರಂಗ ಮಾರ್ಗವನ್ನು ಉದ್ಘಾಟಿಸಿದ ನಂತರ ಸೋನಾಮಾರ್ಗ್‌ನಲ್ಲಿ ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿದ ಅಬ್ದುಲ್ಲಾ, ಜಮ್ಮು–ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನವನ್ನು ಪುನಃ ಸ್ಥಾಪಿಸಬೇಕೆಂದು ಒತ್ತಾಯಿಸಿದರು.

ಮೂರನೇ ಅವಧಿಗೆ ಪ್ರಧಾನಿ ಮೋದಿ ಅವರು ಅಧಿಕಾರ ವಹಿಸಿಕೊಂಡ ನಂತರ ಶ್ರೀನಗರದಲ್ಲಿ ನಡೆದ ಅಂತರರಾಷ್ಟ್ರೀಯ ಯೋಗ ದಿನದಂದು ಭಾಗವಹಿಸಿದ್ದರು. ಆಗ ಜನರಿಗೆ ಚುನಾವಣೆಗಳು ನಡೆಯಲಿವೆ ಎಂದು ಭರವಸೆ ನೀಡಲಾಗಿತ್ತು. ನೀವು (ಪ್ರಧಾನಿ ಮೋದಿ) ನಿಮ್ಮ ಭರವಸೆ ಈಡೇರಿಸಿದ್ದೀರಿ. ಹೊಸ ಸರ್ಕಾರ ಆಯ್ಕೆಯಾಯಿತು. ಮುಖ್ಯಮಂತ್ರಿಯಾಗಿ, ನಾನು ಇಲ್ಲಿ ನಿಮ್ಮೊಂದಿಗೆ ಮಾತನಾಡುತ್ತಿದ್ದೇನೆ ಎಂದು ಅಬ್ದುಲ್ಲಾ ಹೇಳಿದ್ದಾರೆ.

ಜನರು ಚುನಾವಣೆಯಲ್ಲಿ ಉತ್ಸಾಹದಿಂದ ಭಾಗವಹಿಸಿದರು, ಮತ್ತು ಎಲ್ಲಿಯೂ ಯಾವುದೇ ರಿಗ್ಗಿಂಗ್ ಅಥವಾ ಅಧಿಕಾರ ದುರುಪಯೋಗದ ದೂರುಗಳು ಬಂದಿಲ್ಲ. ಇದಕ್ಕಾಗಿ ನಿಮಗೆ ಧನ್ಯವಾದ ತಿಳಿಸುತ್ತೇನೆ ಎಂದು ಅವರು ಹೇಳಿದರು.

ಹಿಂದೂ ಎನ್ನುವುದು ಅವಮಾನಕರ ಶಬ್ದ

ರಾಯಚೂರಿನ ಹಾಲುಮತ ಉತ್ಸವದಲ್ಲಿ ಚಿಂತಕ ಪ್ರೊ.ಭಗವಾನ್ ಅಭಿಪ್ರಾಯ

ರಾಯಚೂರು, ಜ.13(ಬಿಎಲ್‌ಯು)– ಹಿಂದೂ ಎನ್ನುವುದು ಅವಮಾನಕರ ಶಬ್ದ ಎಂದು ಪ್ರಗತಿಪರ ಚಿಂತಕ ಪ್ರೊ.ಕೆ.ಎಸ್.ಭಗವಾನ್ ಅಭಿಪ್ರಾಯಪಟ್ಟಿದ್ದಾರೆ.

ರಾಯಚೂರಿನ ದೇವದುರ್ಗದ ಕನಕ ಗುರುಪೀಠದಲ್ಲಿ ನಡೆಯುತ್ತಿರುವ ಹಾಲುಮತ ಉತ್ಸವದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಯಾರು ಹೀನನಾಗಿದ್ದಾನೊ, ಯಾರು ದೂಷಣೆಗೆ ಒಳಗಾಗಿರುತ್ತಾರೊ ಅವನೇ ಹಿಂದು ಎಂದು ಪ್ರತಿಪಾದಿಸಿದರು.

ಕಾಶ್ಮೀರದ ಶೈವ ಗ್ರಂಥದಲ್ಲಿ ಹಿಂದೂ ಎಂಬ ಪದಕ್ಕೆ ಇದೇ ರೀತಿಯ ವ್ಯಾಖ್ಯಾನವಿದೆ. 1030ನೇ ಇಸವಿಯಲ್ಲಿ ಪರ್ಷಿಯನ್ ಲೇಖಕ ಅಲ್ಬರೋನಿ ಭಾರತ ಕುರಿತಂತೆ ಬರೆಯುವ ಸಂದರ್ಭದಲ್ಲಿ ಸಿಂಧೂ ನದಿಯನ್ನು ಹಿಂದೂ ಎಂದು ಕರೆದರು. ತರುವಾಯ ಹಿಂದೂ ಹಿಂದೂಸ್ತಾನವಾಯಿತು. ಆದ'ರೆ ರಾಮಾಯಣ, ಮಹಾಭಾರತ, ವೇದ, ಪುರಾಣದಲ್ಲಿ ಹಿಂದೂ ಎಂಬ ಹೆಸರಿಲ್ಲ ಎಂದರು.



ಪ್ರೊ.ಭಗವಾನ್

ಚಾತುರ್ವರ್ಣದಲ್ಲಿ ಶೂದ್ರ ಎಂಬ ಶಬ್ದ ಕೂಡ ಮನಸ್ಮೃತಿ ಪ್ರಕಾರ ಅವಮಾನಕ್ಕೆ ಒಳಗಾಗಿದೆ. ಈ ಎಲ್ಲಾ ಕಾರಣಗಳಿಂದ ಹಿಂದೂ ಎಂಬ ಪದ ಅವಮಾನಕರ ಎಂಬಂತಾಗಿದೆ ಎಂದು ತಿಳಿಸಿದರು.

ಡಾ.ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಸಮಾನತೆ, ಸ್ವಾತಂತ್ರ್ಯ ಉಲ್ಲೇಖಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸಂವಿಧಾನವನ್ನು ಯಾರೂ ಬದಲಾವಣೆ ಮಾಡಬಾರದು. ಮತ್ತೆ ಮನುಸ್ಮೃತಿ ವಾಪಸು ತರಬಾರದು ಎಂದು ಸಲಹೆ ನೀಡಿದರು.

ಪ್ರಸ್ತುತ ಒಂದೊಂದು ಮತ ಒಂದೊಂದು ಸಮುದಾಯಕ್ಕೆ ಸೀಮಿತವಾಗಿದೆ. ಇದರಿಂದ ಜನರಲ್ಲಿ ಗೊಂದಲ ಹಾಗೂ ಸಂಕುಚಿತ ಭಾವನೆ ಮೂಡಿದೆ. ಈ ಹಿನ್ನೆಲೆಯಲ್ಲಿ ದೇಶ ಜಾತಿ ವ್ಯವಸ್ಥೆಯಿಂದ ಮುಕ್ತವಾಗಬೇಕು ಎಂದು ಪ್ರೊ.ಭಗವಾನ್ ಅಭಿಪ್ರಾಯಪಟ್ಟರು.

6ನೇ ತರಗತಿ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು,ಜ.13–ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ 2025–26ನೇ ಸಾಲಿನ ಹೆಚ್.ಡಿ.ಕೋಟೆ ತಾಲೂಕಿನ ಸೊಳ್ಳೆಪುರದಲ್ಲಿರುವ ಏಕಲವ್ಯ ಮಾದರಿ ವಸತಿ ಶಾಲೆಗೆ ಅರ್ಹ ವಿದ್ಯಾರ್ಥಿಗಳನ್ನು 6ನೇ ತರಗತಿ ಪ್ರವೇಶಾತಿಗೆ ಆಯ್ಕೆ ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿದೆ.


ಆಸಕ್ತ ವಿದ್ಯಾರ್ಥಿಗಳು ಜ.31 ರೊಳಗೆ ಅರ್ಜಿಯನ್ನು ಸಲ್ಲಿಸಬಹುದಾಗಿದ್ದು, ಅರ್ಜಿ ನಮೂನೆಯನ್ನು ಹೆಚ್.ಡಿ.ಕೋಟೆಯ ತಾಲೂಕಿನ ಸೊಳ್ಳೆಪುರದಲ್ಲಿರುವ ಏಕಲವ್ಯ ಮಾದರಿ ವಸತಿ ಶಾಲೆ, ಮೈಸೂರು ಜಿಲ್ಲೆಯ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯ ಯೋಜನಾ ಸಮನ್ವಯಾಧಿಕಾರಿಯ ಕಚೇರಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ತಾಲೂಕು ಕಚೇರಿಗಳಾದ ಮೈಸೂರು, ಹೆಚ್.ಡಿ.ಕೋಟೆ, ಹುಣಸೂರು, ನಂಜನಗೂಡು, ಟಿ.ನರಸೀಪುರ ಹಾಗೂ ಪಿರಿಯಾಪಟ್ಟಣ, ಕೆ.ಆರ್.ನಗರ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಪಡೆಯಬಹುದಾಗಿದೆ. ಪ್ರವೇಶಾತಿ ಪರೀಕ್ಷೆಯನ್ನು ಫೆ.28ರಂದು ನಡೆಸಲಾಗುವುದು. ಪ್ರವೇಶ ಪತ್ರವನ್ನು ಫೆ.17ರಂದು ಬಿಡುಗಡೆ ಮಾಡಲಾಗುವುದು. ಮಾಹಿತಿಗಾಗಿ ಪ್ರಾಂಶುಪಾಲರ ದೂ.ಸಂ:8486995104, ಕಚೇರಿ ಸಿಬ್ಬಂದಿ ದೂ.ಸಂ: 6360285926, 7206793200 ಸಂಪರ್ಕಿಸಬಹುದು.

ಸರ್ಕಾರಿ ಶಾಲೆಗಳಲ್ಲಿ ಸಂಗೀತ, ಚಿತ್ರಕಲೆ, ಹೊಲಿಗೆ, ತೋಟಗಾರಿಕೆ ತರಬೇತಿ

ಪೀಪಲ್ಸ್ ಪಾರ್ಕ್ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಜಿಲ್ಲಾ ಮಟ್ಟದ ಸಂಗೀತೋತ್ಸವ

ಮೈಸೂರು,ಜ.13–ಸರ್ಕಾರಿ ಶಾಲೆಗಳಲ್ಲಿ ಸಂಗೀತ, ಚಿತ್ರಕಲೆ, ಹೊಲಿಗೆ ಹಾಗೂ ತೋಟಗಾರಿಕೆ ತರಬೇತಿಯನ್ನು ನೀಡಲಾಗುತ್ತಿದೆ ಎಂದು ಡಿಡಿಪಿಐ ಎಸ್.ಟಿ.ಜವರೇಗೌಡ ಹೇಳಿದರು.

ಮೈಸೂರಿನ ಪೀಪಲ್ಸ್ ಪಾರ್ಕ್ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಸಂಗೀತೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಪಠ್ಯದ ಜೊತೆಗೆ ಸಹಪಠ್ಯ ಚಟುವಟಿಕೆಗಳು ಇರಬೇಕು. ಇದರಿಂದ ಮೌಲ್ಯ ಹಾಗೂ ವೃತ್ತಿ ಆಧಾರಿತ ಶಿಕ್ಷಣಕ್ಕೆ ದಾರಿಯಾಗುತ್ತದೆ ಎಂದು ಹೇಳಿದರು.



ಮೈಸೂರಿನ ಪೀಪಲ್ಸ್ ಪಾರ್ಕ್ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಸಂಗೀತೋತ್ಸವವನ್ನು ಡಿಡಿಪಿಐ ಎಸ್.ಟಿ.ಜವರೇಗೌಡ, ಡಯಟ್ ಪ್ರಾಂಶುಪಾಲ ನಾಗರಾಜಯ್ಯ ಉದ್ಘಾಟಿಸಿದರು.

ಸಂಗೀತ ಪ್ರಾಚೀನ ಕಲೆ. ರಾಜಮಹಾರಾಜರ ಕಾಲದಿಂದಲೂ ಪ್ರೋತ್ಸಾಹ ದೊರೆಯುತ್ತಿದೆ. ಸಂಗೀತ ಆಲಿಸುವುದರಿಂದ ಸಂತೋಷ, ಉಲ್ಲಾಸ, ಲವಲವಿಕೆ ಬರುತ್ತದೆ. ಆದ್ದರಿಂದ ಮಕ್ಕಳಲ್ಲಿ ಸಂಗೀತ ಅಭಿರುಚಿ ಬೆಳೆಸಿ, ಉತ್ತೇಜಿಸಬೇಕು ಎಂದು ಅವರು ಸಂಗೀತ ಶಿಕ್ಷಕರಿಗೆ ಸಲಹೆ ಮಾಡಿದರು. ಮಕ್ಕಳಲ್ಲಿರುವ ಪ್ರತಿಭೆ ಹೊರತರಲು ಇದರಿಂದ ಸಹಾಯವಾಗುತ್ತದೆ. ಸಂಗೀತದ ಮೂಲಕ ಪಾಠ ಕೂಡ ಕಲಿಯಬಹುದು ಎಂದರು.

ಸಂಗೀತಗೋಷ್ಠಿ ಉದ್ಘಾಟಿಸಿದ ಡಯಟ್ ಪ್ರಾಂಶುಪಾಲ ನಾಗರಾಜಯ್ಯ ಮಾತನಾಡಿ, ಮಕ್ಕಳಿಗೆ ಉತ್ತಮ ಸಂಸ್ಕಾರ ಕೊಡಬೇಕು. ಸಂಗೀತ ಆಲಿಸುವುದರಿಂದ ಏಕಾಗ್ರತೆ ಕೂಡ ಬರುತ್ತದೆ. ಸಂಗೀತ ನಮ್ಮ ಸಂಸ್ಕೃತಿಯ ಪ್ರತೀಕ. ಸಂಗೀತದಿಂದ ಶಾಂತಿ, ನೆಮ್ಮದಿ, ಆರೋಗ್ಯ ಭಾಗ್ಯ ಸಿಗುತ್ತದೆ ಎಂದರು.

ಮುಖ್ಯ ಅತಿಥಿಯಾಗಿದ್ದ ಸಂಗೀತ ವಿದುಷಿ ಡಾ.ಸುಕನ್ಯಾ ಪ್ರಭಾಕರ್ ಮಾತನಾಡಿ, ಸಂಗೀತವೊಂದು ಸಂಕೀರ್ಣ ಕಲೆ. ಇದು ಎಲ್ಲರಿಗೂ ಒಲಿಯುವುದಿಲ್ಲ. ಆದರೆ ಸಾಧಕರಿಗೆ ಖಂಡಿತಾ ಒಲಿಯುತ್ತದೆ. ಮಕ್ಕಳನ್ನು ಬೆನ್ನುತಟ್ಟಿ ಪ್ರೋತ್ಸಾಹಿಸುವ ಕೆಲಸ ಮಾಡಿದರೆ ಪ್ರತಿಭೆಗಳು ಅರಳುತ್ತವೆ ಎಂದರು.

ಆಕಾಶವಾಣಿ ಉದ್ಘೋಷಕಿ ಭಾರತಿ ಮಾತನಾಡಿ, ಪ್ರತಿಯೊಬ್ಬರೂ ಸಂಗೀತ ಆಲಿಸಬೇಕು. ಆ ಮೂಲಕ ನಮ್ಮ ಮನಸ್ಸನ್ನು ಉಲ್ಲಾಸವಾಗಿಡಬಹುದು ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿ, ಪ್ರತಿ ವರ್ಷ ಎಂ.ಬಿ.ನಾಗರಾಜು ಅವರ ನೇತೃತ್ವದಲ್ಲಿ ಸಂಗೀತೋತ್ಸವ ಏರ್ಪಡಿಸಿ, ಮಕ್ಕಳಲ್ಲಿರುವ ಪ್ರತಿಭೆ ಹೊರಬರಲು ವೇದಿಕೆ ಒದಗಿಸಲಾಗುತ್ತಿದೆ. ಮಕ್ಕಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಯಲ್ಲೂ ಭಾಗವಹಿಸಬೇಕು ಎಂದರು.

ಉತ್ತರ ವಲಯ ಬಿಇಒ ರೇವಣ್ಣ, ಪೀಪಲ್ಸ್ ಪಾರ್ಕ್ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಪಿ.ಎನ್.ಜಾನ್, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಚಿಕ್ಕೇಗೌಡ ಮುಖ್ಯ ಅತಿಥಿಗಳಾಗಿದ್ದರು. ಸಹಾಯಕ ನಿರ್ದೇಶಕ ಲಿಂಗರಾಜು, ಎಸ್‌ಡಿಎಂಸಿ ಅಧ್ಯಕ್ಷ ಫಯಾಜ್ ಖಾನ್ ಸಂಗೀತ ಶಿಕ್ಷಕ ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಭಾರತೀಯ ರಾಯಭಾರಿಯೊಂದಿಗೆ ಬಾಂಗ್ಲಾ ವಿದೇಶಾಂಗ ಕಾರ್ಯದರ್ಶಿ ಸಭೆ



ಢಾಕಾ: ಬಾಂಗ್ಲಾದೇಶದಲ್ಲಿರುವ ಭಾರತೀಯ ರಾಯಭಾರಿ ಪ್ರಣಯ್ ವರ್ಮಾ ಅವರೊಂದಿಗೆ ಬಾಂಗ್ಲಾದೇಶದ ವಿದೇಶಾಂಗ ಕಾರ್ಯದರ್ಶಿ ಜಾಶಿಮ್ ಉದ್ದೀನ್ ಸಭೆ ನಡೆಸಿದ್ದು, ಗಡಿಯಲ್ಲಿನ ಇತ್ತೀಚಿನ ಉದ್ವಿಗ್ನ ಸ್ಥಿತಿ ಕುರಿತು ಕಳವಳ ವ್ಯಕ್ತಪಡಿಸಿದ್ದಾರೆ.

ಬಾಂಗ್ಲಾದೇಶ–ಭಾರತ ಗಡಿಯಲ್ಲಿ ಬಿಎಸ್‌ಎಫ್‌ನ ಇತ್ತೀಚಿನ ಚಟುವಟಿಕೆಗಳ ಬಗ್ಗೆ ಭಾರತದ ಹೈಕಮಿಷನರ್ ಪ್ರಣಯ್ ವರ್ಮಾ ಅವರ ಮುಂದೆ ಬಾಂಗ್ಲಾದೇಶ ಸರ್ಕಾರದ ತೀವ್ರ ಕಳವಳವನ್ನು ಜಾಶಿಮ್ ಉದ್ದೀನ್ ವ್ಯಕ್ತಪಡಿಸಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಸಭೆ ಮುಗಿಸಿ ಹೊರಬಂದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಣಯ್ ವರ್ಮಾ, ಭದ್ರತೆಗಾಗಿ ಗಡಿಯಲ್ಲಿ ಬೇಲಿ ನಿರ್ಮಿಸುವ ಸಂಬಂಧ ಉಭಯ ರಾಷ್ಟ್ರಗಳ ನಡುವೆ ಒಪ್ಪಂದಗಳಾಗಿವೆ. ಗಡಿ ಕಾವಲು ಪಡೆಗಳಾದ ಬಿಎಸ್‌ಎಫ್ ಮತ್ತು ಬಿಜಿಬಿ (ಬಾರ್ಡರ್ ಸೆಕ್ಯುರಿಟಿ ಫೋರ್ಸ್ ಮತ್ತು ಬಾರ್ಡರ್ ಗಾರ್ಡ್ ಬಾಂಗ್ಲಾದೇಶ) ಈ ನಿಟ್ಟಿನಲ್ಲಿ ಮಾತುಕತೆ ನಡೆಸುತ್ತಿವೆ. ಗಡಿಯುದ್ದಕ್ಕೂ ಅಪರಾಧ ತಡೆಗಟ್ಟಲು ಇದು ಪರಸ್ಪರ ಸಹಕಾರಿ ವಿಧಾನವಾಗಿದೆ. ಈ ಒಪ್ಪಂದವನ್ನು ಕಾರ್ಯಗತಗೊಳಿಸುತ್ತೇವೆ. ಇದನ್ನು ಬಾಂಗ್ಲಾ ಕೂಡಾ ಅರ್ಥ ಮಾಡಿಕೊಳ್ಳುತ್ತದೆ ಎಂದು ನಾವು ನಿರೀಕ್ಷಿಸಿದ್ದೇವೆ ಎಂದು ಹೇಳಿದರು.

ಗಂಟಲಲ್ಲಿ ಪಿಸ್ತಾ ಸಿಪ್ಪೆ ಸಿಲುಕಿ 2 ವರ್ಷದ ಬಾಲಕನ ದಾರುಣ ಸಾವು



ಕಾಸರಗೋಡು: ಪಿಸ್ತಾದ ಸಿಪ್ಪೆ ಗಂಟಲಲ್ಲಿ ಸಿಲುಕಿ 2 ವರ್ಷದ ಮಗುವೊಂದು ಮೃತಪಟ್ಟ ಹೃದಯ ವಿದ್ರಾವಕ ಘಟನೆ ಕೇರಳದ ಕಾಸರಗೋಡು ಜಿಲ್ಲೆಯ ಕುಂಬಳೆ ಎಂಬಲ್ಲಿ ನಡೆದಿದೆ. ಮೃತಪಟ್ಟ ಮಗುವನ್ನು ಕುಂಬಳೆ ಭಾಸ್ಕರ ನಗರದ ನಿವಾಸಿ ಅನ್ವರ್–ಮೆಹರೂಫಾ ದಂಪತಿ ಪುತ್ರ ಅನಸ್ ಎಂದು ಗುರುತಿಸಲಾಗಿದೆ. ಪಿಸ್ತಾವನ್ನು ತಿನ್ನುತ್ತಿದ್ದಾಗ ಸಿಪ್ಪೆ ಗಂಟಲಲ್ಲಿ ಸಿಲುಕಿದ್ದು, ಮನೆಯವರು ಸಿಪ್ಪೆಯ ಒಂದು ತುಂಡನ್ನು ಹೊರ ತೆಗೆದಿದ್ದರು. ಬಳಿಕ ಬಾಲಕನನ್ನು ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ವೈದ್ಯರು ತಪಾಸಣೆ ನಡೆಸಿದಾಗ ಗಂಟಲಲ್ಲಿ ಯಾವುದೇ ವಸ್ತುಗಳು ಸಿಲುಕಿಲ್ಲ ಎಂದು ತಿಳಿಸಿದ್ದರಿಂದ ಮನೆಗೆ ಕರೆದುಕೊಂಡು ಬರಲಾಗಿತ್ತು ಎಂದು ತಿಳಿದುಬಂದಿದೆ. ಆದರೆ, ಭಾನುವಾರ ಬೆಳಿಗ್ಗೆ ಬಾಲಕನಿಗೆ ಉಸಿರಾಟದ ತೊಂದರೆ ಉಂಟಾಗಿದೆ. ಕೂಡಲೇ ಆಸ್ಪತ್ರೆಗೆ ಕೊಂಡೊಯ್ದರೂ ಜೀವ ಉಳಿಸಲಾಗಲಿಲ್ಲ. ಪಿಸ್ತಾದ ಸಿಪ್ಪೆ ಶ್ವಾಸಕೋಶದಲ್ಲಿ ಉಳಿದಿದ್ದರಿಂದಾಗಿ ಮಗು ಉಸಿರಾಟದ ಸಮಸ್ಯೆಗೆ ತುತ್ತಾಗಿ ಮೃತಪಟ್ಟಿರುವುದಾಗಿ ತಿಳಿದುಬಂದಿದೆ. ವಿದೇಶದಲ್ಲಿರುವ ಮಗುವಿನ ತಂದೆ ಅನ್ವರ್ ಕಳೆದ ವಾರವಷ್ಟೇ ರಜೆಯಲ್ಲಿ ಊರಿಗೆ ಬಂದಿದ್ದು, ರಜೆ ಮುಗಿದ ಹಿನ್ನೆಲೆಯಲ್ಲಿ ಕೆಲ ದಿನಗಳ ಹಿಂದೆಯಷ್ಟೇ ಮತ್ತೆ ವಿದೇಶಕ್ಕೆ ತೆರಳಿದ್ದರು.

ಶಾಲೆಯಲ್ಲೇ ಬಾಲಕಿಗೆ ಹೃದಯಾಘಾತ



ಅಹ್ಮದಾಬಾದ್: ಇತ್ತೀಚಿನ ದಿನಗಳಲ್ಲಿ ಪುಟ್ಟ ಮಕ್ಕಳೂ ಕೂಡ ಹೃದಯಾಘಾತಕ್ಕೆ ಬಲಿಯಾಗುತ್ತಿರುವ ಆತಂಕಕಾರಿ ಬೆಳವಣಿಗೆಗಳು ವರದಿಯಾಗುತ್ತಿದ್ದು, ಇದೀಗ ಈ ಪಟ್ಟಿಗೆ ಗುಜರಾತ್ ಮೂಲದ 8 ವರ್ಷದ ಬಾಲಕಿ ಕೂಡ ಸೇರ್ಪಡೆಯಾಗಿದ್ದಾಳೆ. ಗುಜರಾತ್‌ನ ಅಹಮದಾಬಾದ್‌ನ ಜೆಬಾರ್ ಶಾಲೆಯಲ್ಲಿ 3ನೇ ತರಗತಿಯ ವಿದ್ಯಾರ್ಥಿನಿ ಗಾರ್ಗಿ ರಣಪರಾ ಎಂಬ 8 ವರ್ಷದ ಪುಟ್ಟ ಬಾಲಕಿ ಹೃದಯ ಸ್ತಂಭನದಿಂದ ದುರಂತ ಸಾವಿಗೀಡಾಗಿದ್ದಾಳೆ. ಗಾರ್ಗಿ ತನ್ನ ತರಗತಿಗೆ ಹೋಗುವಾಗ ಹೃದಯಾಘಾತಕ್ಕೀಡಾಗಿ ಕುಸಿತು ಸಾವನ್ನಪ್ಪಿರುವ ವಿಡಿಯೋ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ಮೂಲಗಳ ಪ್ರಕಾರ ಬಾಲಕಿ ಗಾರ್ಗಿ ಶಾಲೆಗೆ ಹೋಗಿದ್ದಾಗ ದಿಢೀರ್ ಅನಾರೋಗ್ಯಕ್ಕೀಡಾಗಿದ್ದು, ಶಾಲೆಯ ಲಾಬಿಯಲ್ಲಿ ಸ್ವಲ್ಪ ಹೊತ್ತು ಕುರ್ಚಿಯ ಮೇಲೆ ಕುಳಿತಿದ್ದಳು. ಆದರೆ ಕೆಲವೇ ಕ್ಷಣಗಳ ನಂತರ ಆಕೆ ಕುಸಿದು ಬಿದ್ದಳು. ಆಕೆಯ ಸಹಪಾಠಿಗಳು ಆಕೆಯ ಆರೈಕೆ ಮಾಡಿ ಶಾಲಾ ಸಿಬ್ಬಂದಿಗೆ ವಿಷಯ ತಿಳಿಸಿದರೂ ಅಷ್ಟು ಹೊತ್ತಿಗಾಗಲೇ ಬಾಲಕಿ ಗಾರ್ಗಿ ಪ್ರಾಣಪಕ್ಷಿ ಹಾರಿಹೋಗಿತ್ತು. ಬಳಿಕ ಆಸ್ಪತ್ರೆಯಲ್ಲಿ ಆಕೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾಳೆ ಎಂದು ವೈದ್ಯರು ಮಾಹಿತಿ ನೀಡಿದ್ದಾರೆ. ಘಟನೆಗೆ ಮೊದಲು ಗಾರ್ಗಿಗೆ ಯಾವುದೇ ಆರೋಗ್ಯ ಸಮಸ್ಯೆಗಳು ಇರಲಿಲ್ಲ ಎಂದು ಪೋಷಕರು ಹೇಳಿದ್ದಾರೆ ಎಂದು ವರದಿಯಾಗಿದೆ.

ಆಕಸ್ಮಿಕ ಬೆಂಕಿಗೆ ಭತ್ತ, ಹುಲ್ಲು ಭಸ್ಮ



ಕೈಕಾಡು ಗ್ರಾಮದಲ್ಲಿ ಆಕಸ್ಮಿಕ ಬೆಂಕಿಗೆ ಭತ್ತ ಹಾಗೂ ಹುಲ್ಲು ಭಸ್ಮವಾಗಿರುವುದು.

ನಾಪೋಕ್ಲು: ಆಕಸ್ಮಿಕ ಬೆಂಕಿ ತಗುಲಿ ಭತ್ತ ಹಾಗೂ ಹುಲ್ಲು ಭಸ್ಮವಾಗಿರುವ ಘಟನೆ ಸಮೀಪದ ಕೈಕಾಡು ಗ್ರಾಮದಲ್ಲಿ ನಡೆದಿದೆ. ಭಾನುವಾರ ಸಂಜೆ ಗ್ರಾಮದ ನಿವೃತ್ತ ಮಾಜಿ ಸೈನಿಕ ಕುಲ್ಲಚೆಟ್ಟಿ ನಾಣಯ್ಯ (ತಮ್ಮಣಿ) ಅವರ ಮನೆಯಂಗಳದಲ್ಲಿ ಕಾರ್ಮಿಕರು ಯಂತ್ರದ ಸಹಾಯದಿಂದ ಭತ್ತ ಒಕ್ಕಲು ಮಾಡುತ್ತಿದ್ದರು. ಈ ವೇಳೆ ಆಕಸ್ಮಿಕವಾಗಿ ಬೆಂಕಿ ತಗುಲಿದೆ. ಪರಿಣಾಮ ಅಪಾರ ಪ್ರಮಾಣದ ಭತ್ತ ಮತ್ತು ಹುಲ್ಲು ಭಸ್ಮವಾಗಿದೆ.

ಜೊತೆಗೆ ಶೆಡ್‌ನಲ್ಲಿದ್ದ ಕಾರು ಸಹ ಬೆಂಕಿಯಿಂದ ಹಾನಿಗೊಳಗಾಗಿದೆ. ಸ್ಥಳೀಯರು ತಕ್ಷಣ ಬೆಂಕಿ ನಂದಿಸಿ, ಹೆಚ್ಚಿನ ಅನಾಹುತ ತಪ್ಪಿಸಿದರು.

ನಕಲಿ ಅಂಕಪಟ್ಟಿ ಸಲ್ಲಿಸಿ ನೌಕರಿ ಪಡೆದಿದ್ದವನಿಗೆ 7 ವರ್ಷ ಜೈಲು ಶಿಕ್ಷೆ



ಎಂ.ಬಿ.ಸಂದೇಶ

ಮಡಿಕೇರಿ, ಜ.13–ಅಂಚೆ ಇಲಾಖೆಯ ಬ್ರಾಂಚ್ ಪೋಸ್ಟ್‌ಮಾಸ್ಟರ್ ಹುದ್ದೆ ಪಡೆಯಲು ನಕಲಿ ಅಂಕಪಟ್ಟಿ ಸಲ್ಲಿಸಿ ಕೆಲಸ ಗಿಟ್ಟಿಸಿಕೊಂಡಿದ್ದ ವ್ಯಕ್ತಿಗೆ ಮಡಿಕೇರಿ ಸೀನಿಯರ್ ಸಿವಿಲ್ ಜಡ್ಜ್ ಮತ್ತು ಸಿಜೆಎಂ ನ್ಯಾಯಾಲಯ 7 ವರ್ಷ ಕಠಿಣ ಜೈಲು ಶಿಕ್ಷೆ ಮತ್ತು 1.25 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ಮಡಿಕೇರಿ ತಾಲೂಕಿನ ಕಾರೆಕಾಡು ನಿವಾಸಿ ಎಂ.ಬಿ.ಸಂದೇಶ (32) ಶಿಕ್ಷೆಗೆ ಗುರಿಯಾದವರು. ಈತ 2019ನೇ ಸಾಲಿನಲ್ಲಿ ಅಂಚೆ ಇಲಾಖೆಯ ಪೋಸ್ಟ್‌ಮಾಸ್ಟರ್ ಹುದ್ದೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದ. ದಾಖಲೆ ಪರಿಶೀಲನೆ ವೇಳೆ ನಕಲಿ ಅಂಕಪಟ್ಟಿ ಸಲ್ಲಿಸಿ ನೌಕರಿ ಪಡೆದಿದ್ದ. ನಂತರ ಈತ ಸಲ್ಲಿಸಿರುವುದು ನಕಲಿ ಅಂಕಪಟ್ಟಿ ಎಂದು ಪತ್ತೆಯಾಗಿತ್ತು. ಬಳಿಕ ಈತನ ವಿರುದ್ಧ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ಪ್ರಕರಣದ ತನಿಖಾಧಿಕಾರಿ ಶ್ರೀನಿವಾಸ್, ತನಿಖಾ ಸಹಾಯಕಿ ಹೆಚ್.ಸಿ.ದಿವ್ಯಾ ತನಿಖೆ ಪೂರ್ಣಗೊಳಿಸಿ 2022ರ ಡಿ.27ರಂದು ಆರೋಪಿ ಸಂದೇಶ ವಿರುದ್ಧ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಈ ಸಂಬಂಧ ವಿಚಾರಣೆ ನಡೆಸಿದ ನ್ಯಾಯಾಲಯ ಆರೋಪಿ ಸಂದೇಶ ನಕಲಿ ಅಂಕಪಟ್ಟಿ ಸಲ್ಲಿಸಿರುವುದು ಸಾಬೀತಾದ ಹಿನ್ನೆಲೆಯಲ್ಲಿ 7 ವರ್ಷ ಕಠಿಣ ಜೈಲು ಶಿಕ್ಷೆ ಮತ್ತು 1.25 ಲಕ್ಷ ರೂ. ದಂಡ ವಿಧಿಸಿ ನ್ಯಾಯಾಧೀಶೆ ಎನ್.ಬಿ.ಜಯಲಕ್ಷ್ಮಿ ತೀರ್ಪು ನೀಡಿದ್ದಾರೆ. ಸರ್ಕಾರಿ ಅಭಿಯೋಜಕ ಬಿ.ಎಸ್. ಸಂತೋಷ್ ವಾದ ಮಂಡಿಸಿದ್ದರು.

ಕೊಡವ ಸಮಾಜದ ವೆಬ್‌ಸೈಟ್ ಬಿಡುಗಡೆ

ವಿರಾಜಪೇಟೆಯಲ್ಲಿ ವೆಬ್‌ಸೈಟ್‌ಗೆ ಚಾಲನೆ ನೀಡಿದ ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಸಂತಸ

ವಿರಾಜಪೇಟೆ, ಜ.13–ಅಖಿಲ ಕೊಡವ ಸಮಾಜದ ವೆಬ್‌ಸೈಟ್ ಅನ್ನು ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಶಾಸಕರು, ಪ್ರಪಂಚ ಹಾಗೂ ಜೀವನಶೈಲಿ ಬದಲಾಗುತ್ತಿದ್ದಂತೆ ನಮ್ಮ ಕಾರ್ಯ ಶೈಲಿ ಬದಲಾಗಬೇಕು. ಇದಕ್ಕೆ ಅನುಗುಣವಾಗಿ ಅಖಿಲ ಕೊಡವ ಸಮಾಜ ವೆಬ್‌ಸೈಟ್ ಮುಖಾಂತರ ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿರುವುದು ಸಂತಸ ತಂದಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ ಮಾತನಾಡಿದರು. ಇದೇ ವೇಳೆ ಸಮಾಜದ ಉಪಾಧ್ಯಕ್ಷ ಅಜ್ಜಿಕುಟ್ಟೀರ ಸುಬ್ರಮಣಿ ಮಾದಯ್ಯ, ಕಾರ್ಯದರ್ಶಿ ಕೀರ್ತಿಯಂಡ ವಿಜಯ ಕುಮಾರ್, ಖಜಾಂಚಿ ಮಂಡೇಪಂಡ ಸುಗುಣ ಮುತ್ತಣ್ಣ, ಕಾನೂನು ಸಲಹೆಗಾರ ಬಲ್ಯಮಾಡ ಮಾದಪ್ಪ, ಜಂಟಿ ಕಾರ್ಯದರ್ಶಿ ಮೂವೇರ ರೇಖಾ ಪ್ರಕಾಶ್, ನಂದೇಟಿರ ರಾಜ ಮಾದಪ್ಪ, ಹಿರಿಯ ಸಾಹಿತಿ ಬಾಚರಣಿಯಂಡ ಪಿ.ಅಪ್ಪಣ್ಣ, ಪೊಮ್ಮಕ್ಕಡ ಪರಿಷತ್ ಅಧ್ಯಕ್ಷೆ ರಾಣು ಮಂದಣ್ಣ, ಬೆಂಗಳೂರು ಕೊಡವ ಸಮಾಜದ ಅಧ್ಯಕ್ಷ ಕರೋಟಿರ ಪೆಮ್ಮಯ್ಯ, ಅಮ್ಮತ್ತಿ ಕೊಡವ ಸಮಾಜದ ಅಧ್ಯಕ್ಷ ಐನಂಡ ಪ್ರಕಾಶ್, ವಿರಾಜಪೇಟೆ ಕಾರ್ಯದರ್ಶಿ ಮಾಳೇಟಿರ ಶ್ರೀನಿವಾಸ್, ಬೆಪ್ಪುನಾಡ್ ಅಧ್ಯಕ್ಷ ಅಮ್ಮುಣಿಚಂಡ ರಾಜ ನಂಜಪ್ಪ, ಪೊನ್ನಂಪೇಟೆ ಅಧ್ಯಕ್ಷ ಕಾಳಿಮಾಡ ಮೋಟಯ್ಯ, ಗೋಣಿಕೊಪ್ಪ ಅಧ್ಯಕ್ಷ ಅಜ್ಜಿಕುಟ್ಟೀರ ಶಾಂತು ಅಪ್ಪಯ್ಯ, ಕೊಡವಾಮೆರ ಕೊಂಡಾಟದ ಅಧ್ಯಕ್ಷ ಚಾಮೇರ ದಿನೇಶ್ ಬೆಳ್ಯಪ್ಪ, ಕೊಡವ ತಕ್ಕ್ ಎಳ್ತ್ ಕಾರಡ ಕೂಟದ ಅಧ್ಯಕ್ಷ ಚಟ್ಟಂಗಡ ರವಿ ಸುಬ್ಬಯ್ಯ, ದೇಶತಕ್ಕರಾದ ಪೋರೇರ ಬಿದ್ದಪ್ಪ ಪಾಂಡೀರ ಅಯ್ಯಣ್ಣ, ಮಾತಂಡ ಧೀರಜ್, ಮಾತಂಡ ಕಿರಣ್, ಮಾತಂಡ ಕಮಲ ಮೊಣ್ಣಪ್ಪ, ಬೊಳ್ಳೇರ ವಿನಯ್ ಅಪ್ಪಯ್ಯ, ಪದಾಧಿಕಾರಿಗಳು, ಸದಸ್ಯರು ಹಾಜರಿದ್ದರು.

ಈ ಸಂದರ್ಭ ಅಗಲಿದ ಸಮಾಜದ ಗಣ್ಯರಿಗೆ ಮೌನ ಪ್ರಾರ್ಥನೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.



ವಿರಾಜಪೇಟೆಯಲ್ಲಿ ಅಖಿಲ ಕೊಡವ ಸಮಾಜದ ವೆಬ್‌ಸೈಟ್ ಅನ್ನು ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಬಿಡುಗಡೆಗೊಳಿಸಿದರು.

ರಾಷ್ಟ್ರೀಯ ಯುವ ದಿನ, ಯುವ ಸಪ್ತಾಹ



ಮಡಿಕೇರಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಯುವ ದಿನಾಚರಣೆಯಲ್ಲಿ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿದರು.

ಮಡಿಕೇರಿ: ಸ್ವಾಮಿ ವಿವೇಕಾನಂದರಂತೆ ಉತ್ತಮ ವ್ಯಕ್ತಿತ್ವ ಬೆಳೆಸಿಕೊಳ್ಳುವತ್ತ ಯುವ ಜನತೆ ಗಮನಹರಿಸಬೇಕು ಎಂದು ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಬಿ.ಜಿ. ಅನಂತಶಯನ ಅಭಿಪ್ರಾಯಪಟ್ಟರು.

ನಗರದ ಸರ್ಕಾರಿ ಪದವಿಪೂರ್ವ ಕಾಲೇಜು ಸಭಾಂಗಣದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ, ಜಿಲ್ಲಾ ಯುವ ಒಕ್ಕೂಟ, ವಿರಾಜಪೇಟೆ ಹಾಗೂ ಸೋಮವಾರಪೇಟೆ ತಾಲೂಕು ಯುವ ಒಕ್ಕೂಟ, ಮಡಿಕೇರಿ ಸರ್ಕಾರಿ ಪದವಿಪೂರ್ವ ಕಾಲೇಜು ಸಂಯುಕ್ತಾಶ್ರಯದಲ್ಲಿ ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ನಡೆದ ರಾಷ್ಟ್ರೀಯ ಯುವ ದಿನ ಹಾಗೂ ಯುವ ಸಪ್ತಾಹ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸ್ವಾಮಿ ವಿವೇಕಾನಂದರಂತೆ ಜೀವನದಲ್ಲಿ ಉದ್ದೇಶ ಮತ್ತು ಗುರಿ ಹೊಂದಿರಬೇಕು. ಭಾರತ ಇಡೀ ವಿಶ್ವದಲ್ಲಿ ತಾಯಿ ಇದ್ದಂತೆ. ಆಧ್ಯಾತ್ಮಿಕತೆಯಲ್ಲಿ ಸ್ವಾಮಿ ವಿವೇಕಾನಂದರು ವಿಶ್ವ ಪರ್ಯಟನೆ ಮಾಡಿ ಅಮೇರಿಕಾದ ಚಿಕಾಗೋದಲ್ಲಿ ನಡೆದ ಸಮ್ಮೇಳನದಲ್ಲಿ ಸಹೋದರ, ಸಹೋದರಿಯರೆ ಎಂದು ಉಚ್ಚರಿಸಿ ಇಡೀ ವಿಶ್ವಕ್ಕೆ ಒಳ್ಳೆ ಸಂದೇಶ ನೀಡಿದ್ದಾರೆ ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ವಿ.ಟಿ. ವಿಸ್ಮಯಿ, ಸರ್ಕಾರಿ ಜೂನಿಯರ್ ಕಾಲೇಜಿನ ಪ್ರಾಂಶುಪಾಲ ವಿಜಯ್ ಮಾತನಾಡಿದರು. ಇದೇ ವೇಳೆ ಚಿತ್ರಕಲೆ ಹಾಗೂ ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಹಿರಿಯ ಉಪನ್ಯಾಸಕ ಚಿದಾನಂದ, ಮಡಿಕೇರಿ ಯುವ ಒಕ್ಕೂಟದ ಜಿಲ್ಲಾಧ್ಯಕ್ಷ ಪಿ.ಪಿ.ಸುಕುಮಾರ್, ತಾಲೂಕು ಅಧ್ಯಕ್ಷ ಬಾಳಾಡಿ ದಿಲೀಪ್ ಕುಮಾರ್, ಸದಸ್ಯರಾದ ಸಾಬಾ ಸುಬ್ರಮಣಿ, ನವೀನ್ ದೇರಳ ಇದ್ದರು.

ಮೃತ್ಯುಂಜಯ ದೇವಸ್ಥಾನ ವ್ಯಾಪ್ತಿ ನಿಷೇಧಾಜ್ಞೆ ಮುಂದುವರಿಕೆ

ಮಡಿಕೇರಿ: ಕಟ್ಟೆಮಾಡು ಶ್ರೀ ಮಹಾ ಮೃತ್ಯುಂಜಯ ದೇವಸ್ಥಾನ ವಾರ್ಷಿಕೋತ್ಸವ ವೇಳೆ ವಸ್ತ್ರಸಂಹಿತೆ ಸಂಬಂಧ ಉಂಟಾದ ವಿವಾದ ಹಿನ್ನೆಲೆಯಲ್ಲಿ ದೇವಸ್ಥಾನ ವ್ಯಾಪ್ತಿ ಜಾರಿಗೊಳಿಸಿದ್ದ ನಿಷೇಧಾಜ್ಞೆಯನ್ನು ಫೆ.11ರ ಬೆಳಗ್ಗೆ 10 ಗಂಟೆವರೆಗೆ ಮುಂದುವರೆಸಲಾಗಿದೆ.

ದೇವಾಲಯ ವ್ಯಾಪ್ತಿಯ 200 ಮೀಟರ್ ಅಂತರದಲ್ಲಿ ನಿಷೇಧಾಜ್ಞೆ ವಿಧಿಸಿ ಉಪವಿಭಾಗಾಧಿಕಾರಿ ವಿನಾಯಕ್ ನರ್ವಾಡೆ ಆದೇಶಿಸಿದ್ದಾರೆ. ಈ ಅವಧಿಯಲ್ಲಿ 5ಕ್ಕಿಂತ ಹೆಚ್ಚು ಜನ ಗುಂಪು ಸೇರುವುದು, ಪ್ರತಿಭಟನೆ, ಮೆರವಣಿಗೆ, ರ್ಯಾಲಿ, ಜಾಥಾ, ಪ್ರಚೋದನಾತ್ಮಕ ಘೋಷಣೆ ಕೂಗದಂತೆ ಆದೇಶಿಸಲಾಗಿದೆ.

ಮಳ್ಳೂರಲ್ಲಿ ವನ್ಯಪ್ರಾಣಿ ದಾಳಿಗೆ ಕರು ಬಲಿ

ಸುಂಟಿಕೊಪ್ಪ: ವನ್ಯಪ್ರಾಣಿ ದಾಳಿಗೆ ಸಿಲುಕಿ 4 ತಿಂಗಳ ಹೆಣ್ಣು ಕರುವೊಂದು ಬಲಿಯಾಗಿರುವ ಘಟನೆ ಮಳ್ಳೂರು ಗ್ರಾಮದಲ್ಲಿ ಸೋಮವಾರ ನಡೆದಿದೆ.

ಸೋಮವಾರ ಬೆಳಗ್ಗೆ ಗ್ರಾಮದ ನಿವಾಸಿ ತೇಜಕುಮಾರ್ ಅವರು 4 ತಿಂಗಳ ಕರುವನ್ನು ಮೇಯಲು ಹಾರಂಗಿ ಹಿನ್ನೀರಿನ ಕಾಫಿ ಕಣದ ಪಕ್ಕದಲ್ಲಿ ಕಟ್ಟಿ ಹಾಕಿದ್ದರು. ಈ ವೇಳೆ ವನ್ಯಪ್ರಾಣಿಯೊಂದು ದಾಳಿ ನಡೆಸಿದ್ದು, ಕರುವಿನ ಅರ್ಧ ಭಾಗವನ್ನು ತಿಂದು ಹಾಕಿದೆ. ಸ್ಥಳಕ್ಕೆ ಆನೆಕಾಡು ವಲಯ ಅರಣ್ಯಾಧಿಕಾರಿಗಳ ತಂಡ ಭೇಟಿ ನೀಡಿ, ಪರಿಶೀಲನೆ ನಡೆಸಿತು.

ಶ್ರೀರಂಗಪಟ್ಟಣ ಗೋಸಾಯಿ ಘಾಟ್, ಸಂಗಮ್‌ನಲ್ಲಿ ಪ್ರವಾಸಿಗರಿಂದ ಸುಲಿಗೆ

ನಕಲಿ ಬಿಲ್ ಮೂಲಕ ದುಪ್ಪಟ್ಟು ಪಾರ್ಕಿಂಗ್ ಶುಲ್ಕ ವಸೂಲಿ

ಜಾಣ ಕುರುಡು ಪ್ರದರ್ಶಿಸುತ್ತಿರುವ ಅಧಿಕಾರಿ ವರ್ಗ

ಶ್ರೀರಂಗಪಟ್ಟಣ, ಜ.13(ವಿನಯ್ ಕಾರೇಕುರ)– ಐತಿಹಾಸಿಕ ನಗರಿ ಶ್ರೀರಂಗಪಟ್ಟಣದ ಗಂಜಾಂನ ದೊಡ್ಡಗೋಸಾಯಿಘಾಟ್ ಹಾಗೂ ಸಂಗಮ್ ಪ್ರವಾಸಿತಾಣಗಳಿಗೆ ಬರುವ ಪ್ರವಾಸಿಗರಿಂದ ಪಾರ್ಕಿಂಗ್ ಶುಲ್ಕವಾಗಿ ದುಪ್ಪಟ್ಟು ಹಣ ವಸೂಲಿ ಮಾಡಲಾಗುತ್ತಿದ್ದು, ಅಧಿಕಾರಿಗಳು ಜಾಣ ಕುರುಡು ಪ್ರದರ್ಶನ ಮಾಡುತ್ತಿರುವುದು ಬೆಳಕಿಗೆ ಬಂದಿದೆ.

ಸಂಗಮ್ ಹಾಗೂ ದೊಡ್ಡ ಗೋಸಾಯಿಘಾಟ್‌ಗೆ ಬರುವ ಪ್ರವಾಸಿಗರ ವಾಹನಗಳಿಂದ ಪಾರ್ಕಿಂಗ್ ಶುಲ್ಕ ಪಡೆಯಲು ಪುರಸಭೆಯಿಂದ ಟೆಂಡರ್ ಪಡೆದಿರುವ ಗುತ್ತಿಗೆದಾರರು ಬಸ್ಸು ಒಂದಕ್ಕೆ 100 ರೂ. ಕಾರು, ಜೀಪು ಒಂದಕ್ಕೆ 50 ರೂ. ಮಿನಿ ಬಸ್, ಟೆಂಪೋ ಒಂದಕ್ಕೆ 80 ರೂ. ಸ್ಕೂಟರ್ ಒಂದಕ್ಕೆ 10 ರೂ. ಟಾಟಾ ಸುಮೊ, ಮೆಟಡೋರ್, ಕ್ವಾಲಿಸ್ ಒಂದಕ್ಕೆ 60 ರೂ. ದರ ನಿಗದಿ ಮಾಡಿ ಟೆಂಡರ್ ನೀಡಲಾಗಿದೆ.

ಜೊತೆಗೆ ಪ್ರಸ್ತುತ ಮುಜರಾಯಿ ಇಲಾಖೆ ವ್ಯಾಪ್ತಿಗೆ ಬರುವ ಡೊಡ್ಡ ಗೋಸಾಯಿ ಘಾಟ್ ಪಾರ್ಕಿಂಗ್ ಬಸ್ 80 ರೂ. ಮಿನಿ ಬಸ್, ಟೆಂಪೋ 50 ರೂ. ಟಾಟಾ ಸುಮೊ, ಮೆಟಡೋರ್, ಕ್ವಾಲೀಸ್ 30 ರೂ. ಕಾರು, ಜೀಪ್ 20 ರೂ. ಸ್ಕೂಟರ್ 10 ರೂ. ದರ ನಿಗದಿಪಡಿಸಿ ಟೆಂಡರ್ ನೀಡಿದೆ. ಆದರೆ ಗುತ್ತಿಗೆದಾರರು ಮುಜರಾಯಿ ಇಲಾಖೆ, ಶ್ರೀರಂಗಪಟ್ಟಣ ಗೋಸಾಯಿ ಘಾಟ್ ಹಾಗೂ ಟೌನ್ ಮುನ್ಸಿಪಲ್ ಕೌನ್ಸಿಲ್ ಎಂದು ನಕಲಿ ಬಿಲ್ ಸೃಷ್ಟಿಸಿ ರಾಜಾರೋಷವಾಗಿ ಕಾರ್ ವೊಂದಕ್ಕೆ 80 ರೂ. ಹಾಗೂ ಬಸ್ ಪಾರ್ಕಿಂಗ್‌ಗೆ 200 ರೂ. ದುಪ್ಪಟ್ಟು ಹಣ ಪಡೆಯುತ್ತಿರುವುದು ಕಂಡು ಬಂದಿದೆ.

ಸಂಗಮ್ ಸೇರಿದಂತೆ ದೊಡ್ಡ ಗೋಸಾಯಿಘಾಟ್‌ಗೆ ಹೊರ ರಾಜ್ಯ ಹಾಗೂ ದೇಶ ವಿದೇಶಗಳಿಂದ ನಿತ್ಯ ಸಾವಿರಾರು ಪ್ರವಾಸಿಗರು ತಮ್ಮ ವಾಹನಗಳಲ್ಲಿ ಆಗಮಿಸುತ್ತಿದ್ದು, ಪಾರ್ಕಿಂಗ್ ಟೆಂಡರ್ ಪಡೆದಿರುವ ಗುತ್ತಿಗೆದಾರರು ನಿಗದಿತ ದರಕ್ಕಿಂತ ಅಧಿಕ ಹಣ ವಸೂಲಿ ಮಾಡುತ್ತಿದ್ದಾರೆ. ಹಲವು ಬಾರಿ ಪ್ರವಾಸಿಗರು ಮೌಖಿಕವಾಗಿ ಪುರಸಭೆ ಹಾಗೂ ಮುಜರಾಯಿ ಇಲಾಖೆಗೆ ಮಾಹಿತಿ ನೀಡಿದ್ದರೂ ಅಧಿಕಾರಿಗಳು ಗುತ್ತಿಗೆ ದಾರರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೆ ಜಾಣ ಮೌನವಹಿಸಿದ್ದಾರೆ. ಇದರಿಂದ ಪ್ರವಾಸಿಗರು ಪಾರ್ಕಿಂಗ್ ದಂಧೆ ವಿರುದ್ಧ ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಟೆಂಡರ್‌ದಾರರು ಯಾವುದೇ ದರಪಟ್ಟಿಗಳ ನಾಮಫಲಕಗಳನ್ನು ಹಾಕದೆ ದುಪ್ಪಟ್ಟು ಹಣ ವಸೂಲಿ ಮಾಡುತ್ತಿದ್ದರೂ, ಟೆಂಡರ್ ನೀಡಿರುವ ಪುರಸಭೆ ಹಾಗೂ ಮುಜರಾಯಿ ಇಲಾಖೆ ವಿರುದ್ಧ ಸಾಕಷ್ಟು ಅನುಮಾನಗಳು ವ್ಯಕ್ತವಾಗುತ್ತಿವೆ.

ನಿಯಮ ಉಲ್ಲಂಘನೆ: ಹರಾಜು ಬಿಡ್ಡುದಾರರು ತಮ್ಮ ಸ್ವಂತ ಖರ್ಚಿನಲ್ಲಿ ದರ ಸೂಚನೆ ಫಲಕವನ್ನು ಬರೆಯಿಸಿ, ಅಧಿಕಾರಿಗಳು ಸೂಚಿಸಿರುವ ಸ್ಥಳದಲ್ಲಿ ಅಳವಡಿಸುವುದು ಹಾಗೂ ದರದಂತೆ ಟಿಕೆಟ್‌ಗಳನ್ನು ಮುದ್ರಣ ಮಾಡಿಕೊಂಡು ಜೊತೆಗೆ ದೇವಾಲಯ ಹಾಗೂ ಪುರಸಭೆ ಮೊಹರನ್ನು ಹಾಕಿಸಿಕೊಂಡು ನಂತರವೇ ಉಪಯೋಗಿಸತಕ್ಕದ್ದು. ದರಕ್ಕಿಂತ ಹೆಚ್ಚಿನ ಹಣವನ್ನು ವಸೂಲಿ ಮಾಡುವುದು ಕಂಡು ಬಂದಲ್ಲಿ, ಮೊದಲ ಪ್ರಕರಣಕ್ಕೆ 5 ಸಾವಿರ, ಎರಡನೇ ಪ್ರಕರಣಕ್ಕೆ 10 ಸಾವಿರ ಜೊತೆಗೆ ಮರುಕಳಿಸಿದ್ದಲ್ಲಿ ಗುತ್ತಿಗೆ ಹರಾಜು ಹಕ್ಕು ರದ್ದುಪಡಿಸಿ, ಪಾವತಿಸಿರುವ ಪೂರ್ಣ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ತಿಳಿಸಿದ್ದರೂ ಸಹ ಗುತ್ತಿಗೆದಾರರು ಈ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ದುಪ್ಪಟ್ಟು ವಸೂಲಿ ಮಾಡುತ್ತಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಪುರಸಭೆ ಮುಖ್ಯಾಧಿಕಾರಿ ಎಂ.ರಾಜಣ್ಣ, ಪುರಸಭೆಯಿಂದ ಪಾರ್ಕಿಂಗ್ ಟೆಂಡರ್ ಪಡೆದಿರುವ ಗುತ್ತಿಗೆದಾರರು ಪ್ರವಾಸಿಗರಿಂದ ದುಪ್ಪಟ್ಟು ಹಣ ಪಡೆಯುತ್ತಿರುವುದು ಹಾಗೂ ದರಪಟ್ಟಿ ಬೋರ್ಡ್ ಅಳವಡಿಸಿಲ್ಲದಿರುವುದು ನಮ್ಮ ಗಮನಕ್ಕೆ ಬಂದಿದೆ. ಕೂಡಲೇ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು.

ಶ್ರೀ ನಿಮಿಷಾಂಬ ದೇವಾಲಯದ ಇಒ ಕೃಷ್ಣ ಮಾತನಾಡಿ, ದೊಡ್ಡ ಗೋಸಾಯಿಘಾಟ್‌ಗೆ ಬರುವ ಪ್ರವಾಸಿಗರಿಂದ ಪಾರ್ಕಿಂಗ್ ಹಣ ವಸೂಲಿ ಮಾಡುತ್ತಿರುವ ಗುತ್ತಿಗೆದಾರನಿಗೆ ಈಗಾಗಲೇ ನಾಲ್ಕೈದು ಬಾರಿ ನೋಟಿಸ್ ನೀಡಲಾಗಿದೆ. ಯಾರಾದರೂ ಲಿಖಿತ ರೂಪದಲ್ಲಿ ದೂರು ನೀಡಿದ್ದಲ್ಲಿ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.



ಪಾರ್ಕಿಂಗ್ ಟೆಂಡರ್‌ದಾರರು ಸೃಷ್ಟಿಸಿರುವ ನಕಲಿ ಬಿಲ್



ದೊಡ್ಡಗೋಸಾಯಿಘಾಟ್

ಚಿಕ್ಕದೇವಮ್ಮ ದೇವಸ್ಥಾನದಲ್ಲಿ ಮಂಡಲ ಪೂಜೆ

ಚಿನಕುರಳಿ, ಜ.13– ಎರೇಗೌಡನಹಳ್ಳಿಯಲ್ಲಿ ನೂತನವಾಗಿ ನಿರ್ಮಿಸಿರುವ ಚಿಕ್ಕದೇವಮ್ಮ ದೇವಸ್ಥಾನದ 48ನೇ ದಿನದ ಮಂಡಲ ಪೂಜಾ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಯೋಗರಾಜ್, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ದೇವಾಲಯಕ್ಕೆ ಹತ್ತು ಲಕ್ಷ ರೂ. ಮಂಜೂರು ಮಾಡಿಸಿದಲ್ಲದೆ ವೈಯಕ್ತಿಕವಾಗಿ ಒಂದು ಲಕ್ಷ ರೂ. ನೀಡಿದ್ದರು. ಒಟ್ಟು 50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ಚಿಕ್ಕದೇವಮ್ಮ ದೇವಸ್ಥಾನ ಉದ್ಘಾಟನೆಯಾಗಿ ಇಂದಿಗೆ 48 ದಿನಗಳಾಗಿದೆ. ಚಿಕ್ಕದೇವಮ್ಮ ದೇವಸ್ಥಾನ ಟ್ರಸ್ಟ್, ದಾನಿಗಳು, ಗ್ರಾಮಸ್ಥರ ಸಹಕಾರದಿಂದಾಗಿ ಈ ದೇವಾಲಯವನ್ನು ನಿರ್ಮಿಸಲಾಗಿದೆ. ಇಂದು ಮಂಡಲ ಪೂಜಾ ಕಾರ್ಯಕ್ರಮ ಸಾಂಗವಾಗಿ ನಡೆದಿದೆ. ಇದರ ಅಂಗವಾಗಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ದೇವಾಲಯದಲ್ಲಿ ಹೋಮ, ಹವನ, ಪೂಜಾ ಕಾರ್ಯಕ್ರಮ ನಡೆಸಿ ಅನ್ನಸಂತರ್ಪಣೆ ವ್ಯವಸ್ಥೆ ಮಾಡಿದ್ದಾರೆ. ಜನತೆಗೆ ನೆಮ್ಮದಿ ಮತ್ತು ಶಾಂತಿ ಲಭಿಸಬೇಕು. ರೈತರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುವಂತಾಗಬೇಕು ಎಂದರು.

ಚಿನಕುರಳಿ ಡೇರಿ ಅಧ್ಯಕ್ಷ ಸಿ.ಶಿವಕುಮಾರ್ ಮಾತನಾಡಿ, ನಮ್ಮ ಚಿಕ್ಕಪ್ಪನವರಾದ ಸಿ.ಎಸ್.ಪುಟ್ಟರಾಜು ಅವರು ಕ್ಷೇತ್ರದ ಬಹುತೇಕ ಗ್ರಾಮಗಳಿಗೆ ಅನುಕೂಲವಾಗುವಂತಹ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಅದರೊಂದಿಗೆ ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳಲ್ಲೂ ಕೂಡ ತಮ್ಮನ್ನು ತಾವು ತೊಡಗಿಸಿಕೊಂಡು ಜನತೆಗೆ ಅನುಕೂಲವಾಗುವಂತಹ ಸಾಂಸ್ಕೃತಿಕ, ಕ್ರೀಡಾ ಕಾರ್ಯಕ್ರಮಗಳನ್ನೂ ನಡೆಸಿ ಅನುಕೂಲ ಕಲ್ಪಿಸಿದ್ದಾರೆ. ಗ್ರಾಮದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಚಿಕ್ಕದೇವಮ್ಮ ದೇವಸ್ಥಾನದಲ್ಲಿ ಇಂದು ಮಂಡಲ ಪೂಜಾ ಕಾರ್ಯಕ್ರಮ ನಡೆಯುತ್ತಿರುವುದು ಸಂತಸ ತಂದಿದೆ ಎಂದರು.

ಇದೇ ಸಂದರ್ಭದಲ್ಲಿ ಯಾಜಮಾನರಾದ ಕೆಂಪೇಗೌಡ, ಶಿವಮ್ಮ ದೇವೇಗೌಡ, ಚಿಕ್ಕಮ್ಮಕೆಂಪೇಗೌಡ (ಸ್ಕೂಲ್ ಮಾಸ್ಟರ್ ಕುಟುಂಬ), ಭಾಗ್ಯಮ್ಮ ಜವರೇಗೌಡ, ವೈ.ವಿ. ಮುಕುಂದ, ಗಜೇಂದ್ರ, ಗೋವಿಂದರಾಜು, ಗೃಹನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಜಿ.ಇ.ರವಿಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಕೆ.ಯೋಗರಾಜು, ಗ್ರಾಪಂ ಸದಸ್ಯ ಸಿ.ಎ. ಲೋಕೇಶ್ ಹಾಗೂ ಕೆ.ಬಲರಾಮು, ಪುಟ್ಟೇ ಗೌಡ, ಪ್ರಭಾಕರ್, ಕುಮಾರ್, ಪುಟ್ಟಬಸವೇಗೌಡ, ವಡ್ಡರಹಳ್ಳಿ ಚಿಕ್ಕಮಂಚೇಗೌಡ, ಕೆ.ವರದರಾಜು, ಕೆ.ವೆಂಕಟೇಶ್, ವನರಾಜು, ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಯಾಜಮಾನರು ಹಾಜರಿದ್ದರು.



ಎರೇಗೌಡನಹಳ್ಳಿ ಚಿಕ್ಕದೇವಮ್ಮ ದೇವಿಯ 48ನೇ ದಿನದ ಮಹಾಮಂಡಲ ಪೂಜೆಯ ಸಂದರ್ಭದಲ್ಲಿ ಡೈರಿ ಅಧ್ಯಕ್ಷ ಸಿ.ಶಿವಕುಮಾರ್‌ರನ್ನು ಟ್ರಸ್ಟ್ ವತಿಯಿಂದ ಸನ್ಮಾನಿಸಿದರು.

ಜ.20 ರಂದು ನಗರಸಭೆ ಆಯವ್ಯಯದ ಬಗ್ಗೆ ಪೂರ್ವಭಾವಿ ಸಭೆ

ಮಂಡ್ಯ, ಜ.13– ಮಂಡ್ಯ ನಗರಸಭೆಯ 2025–26ನೇ ಸಾಲಿನ ಆಯವ್ಯಯ (ಬಜೆಟ್)ದ ಬಗ್ಗೆ ಪೂರ್ವಭಾವಿಯಾಗಿ ಚರ್ಚಿಸಲು ಜ.20 ರಂದು ಬೆಳಗ್ಗೆ 11 ಗಂಟೆಗೆ ನಗರಸಭೆ ಅಧ್ಯಕ್ಷ ಎಂ.ವಿ.ಪ್ರಕಾಶ್ ಅಧ್ಯಕ್ಷತೆಯಲ್ಲಿ ಮಂಡ್ಯ ನಗರಸಭಾ ಕಾರ್ಯಾಲಯದ ಅಮೃತ ಭವನ ಸಭಾಂಗಣದಲ್ಲಿ ಸಭೆ ಆಯೋಜಿಸಲಾಗಿದೆ. ಈ ಸಭೆಗೆ ಆಗಮಿಸಿ ತಮ್ಮ ಸೂಕ್ತ ಸಲಹೆಗಳನ್ನು ನೀಡಲು ಮಂಡ್ಯ ನಗರಸಭೆ ಚುನಾಯಿತ ಪ್ರತಿನಿಧಿಗಳು, ಮಾಜಿ ಅಧ್ಯಕ್ಷರು, ಮಾಜಿ ಉಪಾಧ್ಯಕ್ಷರು, ಮಾಜಿ ಸದಸ್ಯರು, ನಗರದ ನೋಂದಾಯಿತ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಸಂಘಟನೆಗಳ ಪ್ರತಿನಿಧಿಗಳು, ಹಿರಿಯ ನಾಗರಿಕರು, ಸಮಾಜ ಸೇವಕರು ಮತ್ತು ಗಣ್ಯರು ಹಾಗೂ ಎಲ್ಲಾ ಆಸಕ್ತ ನಾಗರಿಕರು ಗೌರವಪೂರ್ವಕವಾಗಿ ಸಭೆಗೆ ಪಾಲ್ಗೊಳ್ಳಬಹುದು ಎಂದು ಮಂಡ್ಯ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಲೆ ಬಿಸಿ ನಡುವೆಯೂ ಸಂಕ್ರಾಂತಿ ಆಚರಣೆಗೆ ಸಿದ್ಧತೆ



ಚಾ.ನಗರದಲ್ಲಿ ಮಹಿಳೆಯರು ಎಳ್ಳು-ಬೆಲ್ಲ, ಬಾಳೆ ಹಣ್ಣು ಖರೀದಿಸಿದರು.

ಚಾಮರಾಜನಗರ, ಜ.13–ಸುಗ್ಗಿ ಹಬ್ಬ ಮಕರ ಸಂಕ್ರಾಂತಿ ಸಂಭ್ರಮ ಜಿಲ್ಲಾದ್ಯಂತ ಕಳೆಗಟ್ಟಿದ್ದು, ದರ ಏರಿಕೆ ನಡುವೆ ಜನರು ಸಂಕ್ರಾಂತಿ ಆಚರಣೆಗೆ ಸಿದ್ಧಗೊಂಡಿದ್ದಾರೆ.

ಹಿಂದೂಗಳ ಪವಿತ್ರ ಹಬ್ಬ ಮಕರ ಸಂಕ್ರಾಂತಿಯಂದು ಸೂರ್ಯ ತನ್ನ ಪಥ ಬದಲಿಸುವ ಈ ದಿನವನ್ನು ದೇಶಾದ್ಯಂತ ವಿವಿಧ ಹೆಸರು, ಆಚರಣೆ, ಸಂಪ್ರದಾಯಗಳಲ್ಲಿ ಆಚರಿಸಲಾಗುತ್ತದೆ. ಭಾನುವಾರ ಅಗತ್ಯ ವಸ್ತುಗಳ ಖರೀದಿಯಲ್ಲಿ ಜಿಲ್ಲೆಯ ಜನರು ಉತ್ಸಾಹದಿಂದ ತೊಡಗಿದ್ದರು.

ನಗರದ ಚಿಕ್ಕ ಅಂಗಡಿ, ದೊಡ್ಡ ಅಂಗಡಿ ಬೀದಿಯಲ್ಲಿ ಎಳ್ಳು, ಬೆಲ್ಲ, ಕಬ್ಬಿನ ಜಲ್ಲೆ, ಸಕ್ಕರೆ ಅಚ್ಚು ಮಾರಾಟ ಜೋರಾಗಿತ್ತು. ಮಾರುಕಟ್ಟೆಯಲ್ಲಿ ವಸ್ತುಗಳ ಬೆಲೆ ಹೆಚ್ಚಳವಾಗಿದ್ದು, ಸಕ್ಕರೆ ಅಚ್ಚು, ಎಳ್ಳು, ಕಡಲೆ ಹಾಗೂ ಬೆಲ್ಲದ ಧಾರಣೆ ಕಳೆದ ವರ್ಷದಷ್ಟೇ ಇದ್ದರೂ ವ್ಯಾಪಾರ ಮಾತ್ರ ಬಹುಪಾಲು ಕಡಿಮೆಯಾಗಿದೆ ಎಂದು ವ್ಯಾಪಾರಿ ಬಸವಣ್ಣ ಬೇಸರ ವ್ಯಕ್ತಪಡಿಸಿದರು.

ಮಾರುಕಟ್ಟೆಯಲ್ಲಿ ಒಂದು ಕೆಜಿ ಸಕ್ಕರೆ ಅಚ್ಚಿಗೆ 100 ರಿಂದ 150 ರೂ. ಒಂದು ಕೆಜಿ ಎಳ್ಳಿಗೆ 180 ರಿಂದ 240 ರೂ., ಕಡಲೆ ಕೆಜಿಗೆ 140 ರೂ., ಎಳ್ಳು-ಬೆಲ್ಲ ಮಿಶ್ರಣದ ಕೆಜಿ ಪ್ಯಾಕೆಟ್‌ಗೆ 150 ರಿಂದ 200 ರೂ., ಪೆಪ್ಪರ್‌ಮೆಂಟ್‌ಗೆ 100 ರೂ., ಅಚ್ಚುಬೆಲ್ಲ 5 ರಿಂದ 10 ರೂ., ಕಬ್ಬಿನ ಒಂದು ಜಲ್ಲೆಗೆ 30 ರಿಂದ 40 ರೂ.ವರೆಗೆ ಮಾರಾಟವಾದವು. ಜಿಲ್ಲೆಯಲ್ಲಿ ಹೂವು ಬೆಳೆಯುವ ರೈತರು ಹೊರ ಜಿಲ್ಲೆ ಹಾಗೂ ರಾಜ್ಯದಲ್ಲಿ ಮಾರಾಟ ಮಾಡುವುದರಿಂದ ಹಬ್ಬದ ವೇಳೆ ಬೆಲೆ ಏರಿಕೆಯಾಗಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಚೆಂಡು ಹೂವು 20 ರೂ., ಕಾಕಡ 80 ರೂ., ಕನಕಾಂಬರ 100 ರೂ., ಗುಲಾಬಿ ಒಂದಕ್ಕೆ 10 ರಿಂದ 20 ರೂ. ಹಾಗೂ ಹೂವಿನ ಹಾರ 50 ರಿಂದ 300 ರೂ., ಏಲಕ್ಕಿ ಬಾಳೆ ಕೆಜಿಗೆ 60 ರಿಂದ 80 ರೂ., ಪಚ್ಚಬಾಳೆ 30 ರಿಂದ 40 ರೂ.ವರೆಗೆ ಮಾರಾಟ ಮಾಡಲಾಗುತ್ತಿದೆ ವ್ಯಾಪಾರಿ ಮಂಜು ತಿಳಿಸಿದರು.

ಬೆಂಬಲ ಬೆಲೆಗೆ ಒತ್ತಾಯಿಸಿ ರೈತರ ಪ್ರತಿಭಟನೆ

ಚಾಮರಾಜನಗರ, ಜ.13–ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತ್ರಿ ಹಾಗೂ ರೈತ ಮುಖಂಡ ಜಗಜಿತ್ ಸಿಂಗ್ ದಲೆವಾಲ ಉಪವಾಸ ಸತ್ಯಾಗ್ರಹ ಬೆಂಬಲಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಕಳ್ಳಿ ಮಹದೇವಸ್ವಾಮಿ ನೇತೃತ್ವದಲ್ಲಿ ಚಾಮರಾಜೇಶ್ವರ ಉದ್ಯಾನದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಪ್ರಧಾನಿ, ಕೇಂದ್ರ ಕೃಷಿ ಸಚಿವರ ಪ್ರತಿಕೃತಿ ಹಿಡಿದು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ನಂತರ ಅಲ್ಲಿಂದ ಮೆರವಣಿಗೆ ನಡೆಸುತ್ತಿದ್ದಾಗ ಪೊಲೀಸರು ಪ್ರತಿಕೃತಿಗಳನ್ನು ವಶಕ್ಕೆ ಪಡೆದರು. ನಂತರ ಪ್ರತಿಭಟನಾಕಾರರು ಭುವನೇಶ್ವರಿ ವೃತ್ತದಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆದು ಪೊಲೀಸರು ಹಾಗೂ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ದೆಹಲಿ ಹೋರಾಟ ಬೆಂಬಲಿಸಿ ಕೇಂದ್ರ ಸರ್ಕಾರದ ಗಮನ ಸೆಳೆಯಲು ಪ್ರಧಾನಿ ಹಾಗೂ ಕೃಷಿ ಸಚಿವರ ಪ್ರತಿಕೃತಿ ದಹನ ಚಳವಳಿ ಹಮ್ಮಿಕೊಳ್ಳಲಾಗಿದ್ದು, ಅದೇ ರೀತಿ ಜಿಲ್ಲೆಯಲ್ಲಿ ಪ್ರತಿಭಟನೆ ನಡೆಸಲಾಗುತ್ತಿತ್ತು. ಆದರೆ, ಪೊಲೀಸರು ಪ್ರತಿಕೃತಿಗಳನ್ನು ವಶಕ್ಕೆ ಪಡೆಯುವ ಮೂಲಕ ಪ್ರತಿಭಟನೆ ಹತ್ತಿಕ್ಕುವ ಕೆಲಸ ಮಾಡಿದ್ದಾರೆ ಎಂದು ಕಿಡಿಕಾರಿದರು.

ರೈತರ ಹಕ್ಕುಗಳಾಗಿ ದೆಹಲಿಯಲ್ಲಿ ರೈತ ಮುಖಂಡ ಜಗಜಿತ್ ಸಿಂಗ್ ದಲೆವಾಲ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರೂ ಕೇಂದ್ರ ಸರ್ಕಾರ ನಿರ್ಲಕ್ಷ್ಯ ವಹಿಸಿದೆ. ಕರ್ನಾಟಕ ಸಂಸದರು ಯಾವುದೇ ಧ್ವನಿ ಎತ್ತುತ್ತಿಲ್ಲ. ಜಗಜಿತ್ ಸಿಂಗ್ ದಲೆವಾಲ ಅವರಿಗೆ ತೊಂದರೆಯಾದರೆ ಕೇಂದ್ರ ಸರ್ಕಾರವೇ ಹೊಣೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯಾಧ್ಯಕ್ಷ ಉಡಿಗಾಲ ರೇವಣ್ಣ, ಉಪಾಧ್ಯಕ್ಷ ಪಟೇಲ್ ಶಿವಮೂರ್ತಿ, ತಾಲೂಕು ಅಧ್ಯಕ್ಷ ಸತೀಶ್, ಪ್ರಧಾನ ಕಾರ್ಯದರ್ಶಿ ಉಡಿಗಾಲ ಸುಂದರಪ್ಪ, ಅರಿಶಿನ ಬೆಳೆಗಾರರ ಸಂಘದ ಸಂಚಾಲಕ ಗುಂಡ್ಲುಪೇಟೆ ನಾಗಾರ್ಜುನ್, ತಾಲೂಕು ಉಪಾಧ್ಯಕ್ಷ ಹೆಗ್ಗೋಠಾರ ಶಿವಸ್ವಾಮಿ, ಕೋಣನೂರು ನಾಗೇಂದ್ರ, ಬಾಲು, ವೀರನಪುರ ಘಟಕದ ಅಧ್ಯಕ್ಷ ಗುರುಸ್ವಾಮಿ, ಯರಿಯೂರು ಮಹೇಶ್, ಇಂದುವಾಡಿ ಮಾದೇಶ್, ಬಲರಾಮು, ಉಗನೇದಹುಂಡಿ ಶಿವಣ್ಣ ಇತರರಿದ್ದರು.



ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡುವಂತೆ ಒತ್ತಾಯಿಸಿ ರೈತರು ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿದರು.

ಬೇಗೂರಿನಲ್ಲಿ ಜಾನುವಾರುಗಳ ರಕ್ಷಣೆ...



ಗುಂಡ್ಲುಪೇಟೆ ತಾಲೂಕಿನ ಬೇಗೂರು–ಸೋಮಳ್ಳಿ ರಸ್ತೆಯಲ್ಲಿ ಅಕ್ರಮವಾಗಿ ಕಸಾಯಿ ಖಾನೆಗೆ ಸಾಗಿಸುತ್ತಿದ್ದ 6 ಜಾನುವಾರುಗಳನ್ನು ಬೇಗೂರು ಠಾಣೆ ಪೊಲೀಸರು ರಕ್ಷಿಸಿ, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಆಲೂರಿನಲ್ಲಿ ಮಂಟೇಸ್ವಾಮಿ ಕಂಡಾಯ ಮೆರವಣಿಗೆ

ಆಲೂರು, ಜ.13–ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದಲ್ಲಿ ಶ್ರೀಮಂಟೇಸ್ವಾಮಿ ಕಂಡಾಯೋತ್ಸವ ವಿಜೃಂಭಣೆಯಿಂದ ನೆರವೇರಿತು.

ಗ್ರಾಮದ ವೀರಶೈವ ಸಮಾಜದ ನಿಲಗಾರರು (ದೇವರ ಗುಡ್ಡರು) ವತಿಯಿಂದ ನಡೆದ ಪೂಜಾ ಕಾರ್ಯಕ್ರಮದಲ್ಲಿ ಅರ್ಕೇಶ್ವರ ದೇವಲಯದಲ್ಲಿ 5 ಕಂಡಾಯಗಳಿಗೆ ಪೂಜೆ ಸಲ್ಲಿಸಿ, ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಲಾಯಿತು. ಗ್ರಾಮದ ರಸ್ತೆಗಳನ್ನು ತಳಿರು ತೋರಣಗಳಿಂದ ಶೃಂಗರಿಸಲಾಗಿತ್ತು. ಇದೇ ವೇಳೆ ಬಸವಭವನದಲ್ಲಿ ಪ್ರಸಾದ ವಿನಿಯೋಗ ನಡೆಯಿತು. ಕಾರ್ಯಕ್ರಮದಲ್ಲಿ ವೀರಶೈವ ಸಮಾಜದ ಮುಖಂಡರು, ನಿಲಗಾರರು ಬಸವೇಶ್ವರ ಸಂಘದ ಯುವಕರು, ಗ್ರಾಮಸ್ಥರು ಹಾಜರಿದ್ದರು.



ಆಲೂರು ಗ್ರಾಮದಲ್ಲಿ ಮಂಟೇಸ್ವಾಮಿ ಕಂಡಾಯೋತ್ಸವ ನಡೆಯಿತು.

ಹುಲಿ ದಾಳಿಯಿಂದ ಹಸುವಿಗೆ ಗಾಯ

ಬೇಗೂರು, ಜ.13–ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ಕುರುಬರಹುಂಡಿ ಗ್ರಾಮದಲ್ಲಿ ಹುಲಿ ದಾಳಿ ನಡೆಸಿ ಹಸುವನ್ನು ಗಾಯಗೊಳಿಸಿದೆ. ಗ್ರಾಮದ ಕೆ.ಪಿ.ಗುರುಸ್ವಾಮಪ್ಪ ಅವರಿಗೆ ಸೇರಿದ ಹಸು ಹುಲಿ ದಾಳಿಗೆ ಗಾಯ ಗೊಂಡಿದೆ. ಗುರುಸ್ವಾಮಪ್ಪ ಎಂದಿನಂತೆ ತಮ್ಮ ಹಸುವನ್ನು ಜಮೀನಿನಲ್ಲಿ ಮೇಯಲು ಬಿಟ್ಟಿದ್ದರು. ಈ ವೇಳೆ ಹಸುವಿನ ಮೇಲೆ ಹುಲಿ ಏಕಾಏಕಿ ದಾಳಿ ನಡೆಸಿದೆ. ಹಸುವಿನ ಕಿರುಚಾಟ ಕೇಳಿದ ಅಕ್ಕಪಕ್ಕದ ಜಮೀನಿನವರು ಮತ್ತು ಕೂಲಿ ಕಾರ್ಮಿಕರು ಓಡಿ ಹೋಗಿ ನೋಡಿ, ಕಿರಿಚಿಕೊಂಡಿದ್ದಾರೆ. ಇದರಿಂದ ಹುಲಿ ಪರಾರಿಯಾಗಿದೆ.





ಮೈಸೂರು ರಂಗಾಯಣದಲ್ಲಿ ಇಂದಿನಿಂದ ಬಹುರೂಪಿ ನಾಟಕೋತ್ಸವ

ಸಂಕ್ರಾಂತಿಯಲ್ಲಿ ಎಳ್ಳು, ಬೆಲ್ಲ ತಿಂದು ನಾಟಕ ನೋಡಿ ಆನಂದಿಸಿ...

- ಬಹುರೂಪಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ; ಅಂಕ ಸರಿಯಲು ಕ್ಷಣಗಣನೆ
- ಪ್ರವೇಶ ದ್ವಾರದಲ್ಲಿ ರಂಗ ಮಂಟಪದ ವಿವಿಧ ಕಲಾ ಪ್ರಾಕಾರಗಳ ಅನಾವರಣ



ತಾಯಿ ಮಮತೆಯನ್ನು ಬಿಂಬಿಸುವ ಅತ್ಯಾಕರ್ಷಕ ಚಿತ್ರಕಲೆಯನ್ನು ಕಾಣಬಹುದು.



ಬಹುರೂಪಿ ರಾಷ್ಟ್ರೀಯ ನಾಟಕೋತ್ಸವಕ್ಕಾಗಿ ಸಿಂಗಾರಗೊಂಡಿರುವ ಮೈಸೂರಿನ ರಂಗಾಯಣದ ಪ್ರವೇಶ ದ್ವಾರ



ಬಹುರೂಪಿ ವೇಳೆ ಪ್ರದರ್ಶನಗೊಳ್ಳಲು ಕಲಾವಿದರ ಕುಂಚದಲ್ಲಿ ರೂಪ ಪಡೆಯುತ್ತಿರುವ ಚಿತ್ರಕಲೆಗಳು

ಮೈಸೂರು, ಜ.13(ಬಿಎಲ್‌ಯು)–ರಂಗ ಹಬ್ಬದ ರಸದೌತಣ



ವನ್ನು ಉಣಬಡಿಸುವ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ನಾಳೆ (ಜ.14) ಯಿಂದ ಆರಂಭವಾಗಲಿದೆ. ಇದಕ್ಕಾಗಿ ಮೈಸೂರಿನ ರಂಗ ಚಟುವಟಿಕೆಯ ತಾಣ ರಂಗಾಯಣದಲ್ಲಿ ಸಿದ್ಧತೆಗಳು ಬಹುತೇಕ ಪೂರ್ಣಗೊಂಡಿವೆ.

ಸುಗ್ಗಿ ಹಬ್ಬ ಸಂಕ್ರಾಂತಿ ದಿನವಾದ ಮಂಗಳವಾರ ಎಳ್ಳು ಬೆಲ್ಲ ತಿಂದು, ನಂತರ ರಂಗಹಬ್ಬವನ್ನು ಕಣ್ತುಂಬಿಕೊಳ್ಳಲು ರಂಗಾಯಣದಲ್ಲಿ ರಂಗ ವೇದಿಕೆ ಸಿದ್ಧಪಡಿಸಲಾಗಿದೆ. ನಾಳೆಯಿಂದ ಆರಂಭವಾಗುವ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಆರು ದಿನಗಳ ಕಾಲ ನಡೆಯಲಿದ್ದು, ಮಾತೃ ಭಾಷೆ ಕನ್ನಡ ಮಾತ್ರವಲ್ಲದೆ ಹಲವು ಭಾಷೆ ನಾಟಕಗಳು ಪ್ರದರ್ಶನಗೊಳ್ಳಲಿವೆ. ರಂಗಾಯಣದ ವನರಂಗದಲ್ಲಿ ನಾಳೆ ಸಂಜೆ 5 ಗಂಟೆಗೆ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧ್ಯುಕ್ತ ಚಾಲನೆ ನೀಡುವರು. ಹಿರಿಯ ರಂಗಕರ್ಮಿ ಅತುಲ್ ಕುಲಕರ್ಣಿ ರಂಗೋತ್ಸವ ಉದ್ಘಾಟಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪುಸ್ತಕ, ಕರಕುಶಲ ಮೇಳ ಉದ್ಘಾಟನೆ ಮಾಡಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್ ತಂಗಡಗಿ ರಂಗ ಸಂಚಿಕೆ ಬಿಡುಗಡೆ ಮಾಡಲಿದ್ದು, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಿತ್ರಕಲಾ ಪ್ರದರ್ಶನ ಉದ್ಘಾಟನೆ ಮಾಡಲಿದ್ದಾರೆ. ಶಾಸಕ ಕೆ.ಹರೀಶ್ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಬಹುರೂಪಿ ರಾಷ್ಟ್ರೀಯ ನಾಟಕೋತ್ಸವವನ್ನು ಅದ್ದೂರಿಯಿಂದ ಆಚರಿಸಲು ರಂಗಾಯಣದಲ್ಲಿ ಸಿದ್ಧತೆಗಳು ಬಹುತೇಕ ಪೂರ್ಣಗೊಂಡಿವೆ. ರಂಗಾಯಣದ ಪ್ರವೇಶ ದ್ವಾರದಲ್ಲಿ ಅತ್ಯಾಕರ್ಷಕ ರಂಗ ಮಂಟಪ ನಿರ್ಮಾಣ ಮಾಡಲಾಗಿದೆ. 'ಬಿಡುಗಡೆ: ಸಾಮಾಜಿಕ ನ್ಯಾಯ– ಚಳವಳಿಗಳು ಮತ್ತು ರಂಗಭೂಮಿ' ಆಶಯ ಶೀರ್ಷಿಕೆಯಲ್ಲಿ ಬಹುರೂಪಿ ನಾಟಕೋತ್ಸವ ಆಚರಣೆಗೊಳ್ಳುತ್ತಿದೆ. ಬಹುರೂಪಿ ನಾಟಕೋತ್ಸವದ ಆಶಯ ಶೀರ್ಷಿಕೆ ಅನ್ವಯವಾಗುವಂತೆ ರಂಗಾಯಣದ ತುಂಬೆಲ್ಲಾ ಸಾಮಾಜಿಕ ಹಾಗೂ ಸಮಾನತೆ ಸಾರುವ ಸಾಧಕರ ಘೋಷವಾಕ್ಯ ಬರೆಯಲಾಗಿದೆ. ಈ ಮೂಲಕ ಸಾಮಾಜಿಕ ಚಳುವಳಿಯ ಮಹತ್ವ ತಿಳಿಸಲಾಗಿದೆ.

ಪ್ರತಿ ದಿನ ನಾಟಕ ಪ್ರದರ್ಶನಗೊಳ್ಳುವ ವನರಂಗ, ಭೂಮಿಗೀತ, ಕಿರು ರಂಗಮಂದಿರ, ಕಲಾಮಂದಿರ, ರಂಗ ಚಾವಡಿಯಲ್ಲಿ ಸಿದ್ಧತೆಯನ್ನು ಪೂರ್ಣಗೊಳಿಸಲಾಗಿದೆ. ವನರಂಗ ವೇದಿಕೆ ಹಿಂದೆ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಬ್ಯಾನರ್ ಪ್ರದರ್ಶಿಸಲಾಗಿದೆ. ತಾಯಿ ಮಗುವನ್ನು ಮುದ್ದಾಡುವ ಮಾತೃ ಮಮತೆಯ ಚಿತ್ರಕಲೆ ಹಾಗೂ ಮನುಷ್ಯನ ಹೆಜ್ಜೆ ಬಿಂಬಿಸುವ ಪಾದದ ಚಿತ್ರಕಲೆ ಅತ್ಯಾಕರ್ಷಕವಾಗಿದೆ. ನಾಳೆ ಬಹುರೂಪಿ ನಾಟಕೋತ್ಸವಕ್ಕೆ ಬರುವ ಪ್ರತಿಯೊಬ್ಬ ಕಲಾಸಕ್ತರ ಕಣ್ಮನ ಸೆಳೆಯಲಿದೆ.

ಕಲಾವಿದರ ಕುಂಚದಲ್ಲಿ ಮೂಡಿರುವ ಹಲವು ಚಿತ್ರಗಳು ಕಣ್ಮನ ಸೆಳೆಯಲಿವೆ. ಕಲೆ, ಚಿತ್ರ ಕಲೆ, ರಂಗ ಚಟುವಟಿಕೆಯನ್ನು ಬಿಂಬಿಸುವ ವಿವಿಧ ಬಗೆಯ ಕಲಾ ಪ್ರಾಕಾರಗಳು ರಂಗಾಯಣದಲ್ಲಿ ಅನಾವರಣಗೊಳ್ಳಲಿದೆ. ಯಕ್ಷಗಾನ ಗೊಂಬೆಯಾಟದ ಗೊಂಬೆಗಳನ್ನು ರಂಗಾಯಣದಲ್ಲಿ ಪ್ರದರ್ಶಿಸಲಾಗಿದೆ. ರಂಗಾಯಣ ಪ್ರವೇಶಿಸಿ ಒಂದೊಂದು ಹೆಜ್ಜೆ ಇಡುತ್ತಿದ್ದಂತೆ ರಂಗಭೂಮಿ ಹಾಗೂ ಚಿತ್ರಕಲೆಯ ಹಲವು ಪ್ರಾಕಾರಗಳು ಕಣ್ತೆರೆದುಕೊಳ್ಳುತ್ತದೆ. ಒಟ್ಟು 22 ನಾಟಕಗಳು ಪ್ರದರ್ಶನಗೊಳ್ಳಲಿವೆ. ತೆಲಂಗಾಣ, ಮುಂಬೈ, ಪಾಂಡಿಚೇರಿ, ಮಧ್ಯಪ್ರದೇಶ, ಕೇರಳ, ಅಸ್ಸಾಂ ಸೇರಿದಂತೆ 7 ರಾಜ್ಯಗಳ ನಾಟಕಗಳು ಪ್ರದರ್ಶನವಾಗಲಿವೆ. ಇದರಲ್ಲಿ ಕನ್ನಡದ 13 ನಾಟಕ, ಇಂಗ್ಲಿಷ್ ಭಾಷೆಯ 2 ನಾಟಕ ರಂಗ ವೇದಿಕೆಯಲ್ಲಿ ಮೂಡಿ ಬರಲಿದೆ. ನಾಟಕಕ್ಕೆ 100 ರೂ.ದರ ನಿಗದಿ ಮಾಡಲಾಗಿದೆ. ಖಾದಿ ಬಟ್ಟೆ, ಗಿರಿಜನರ ಉತ್ಪನ್ನ ಹಾಗೂ ಕರಕುಶಲ ಮೇಳ ಆಯೋಜಿಸಲಾಗಿದ್ದು, ಇದಕ್ಕಾಗಿ ಕಲಾಮಂದಿರದ ಆವರಣದಲ್ಲಿ ಸ್ಟಾಲ್‌ಗಳನ್ನು ತೆರೆಯಲಾಗಿದೆ.

ಆಧುನಿಕ ಮನೋರಂಜನೆ ಮೆಟ್ಟಿ ನಿಂತ ರಂಗಭೂಮಿ

ಟಿವಿ, ಮೊಬೈಲ್, ಸಾಮಾಜಿಕ ಜಾಲತಾಣ ಸೇರಿದಂತೆ ಆಧುನಿಕತೆಯ ಭರಾಟೆಯಲ್ಲಿ ದೇಸಿ ಕಲೆಗಳು ಮರೆಯಾಗುತ್ತಿವೆ. ಆದರೆ ರಂಗಭೂಮಿ ಹಾಗೂ ಚಿತ್ರಕಲೆ ಮಾತ್ರ ದಿನ ಕಳೆದಂತೆ ತನ್ನ ಮಹತ್ವ ಹೆಚ್ಚಿಸಿಕೊಳ್ಳುತ್ತಿದೆಯೇ ಹೊರತು ಕ್ಷೀಣಿಸುತ್ತಿಲ್ಲ. ಇದಕ್ಕೆ ರಂಗ ಚಟುವಟಿಕೆಯ ತಾಣ ಮೈಸೂರಿನ ರಂಗಾಯಣವೇ ಸ್ಪಷ್ಟ ನಿದರ್ಶನ.

ಟಿವಿ, ಮೊಬೈಲ್ ಕಾಲಿಟ್ಟ ನಂತರ ಜನರು ರಂಗ ವೇದಿಕೆ ಬಗ್ಗೆ ಆಸಕ್ತಿ ಕಳೆದುಕೊಂಡಿದ್ದರು. ನಾಟಕ, ಚಿತ್ರಕಲೆ ಸೇರಿದಂತೆ ದೇಶಿ ಪ್ರಾಕಾರಗಳು ನಶಿಸಿ ಹೋಯಿತು ಎಂದು ಆತಂಕವಿತ್ತು. ಆದರೆ ರಂಗ ಪರದೆಯಲ್ಲಿ ಒಳ್ಳೆಯ ನಾಟಕಗಳು ಪ್ರದರ್ಶನಗೊಂಡರೆ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ. ಬಹುರೂಪಿ ನಾಟಕೋತ್ಸವದಲ್ಲಿ ಬಹಳಷ್ಟು ನಾಟಕಗಳ ಟಿಕೆಟ್ ಹಾಟ್ ಕೇಕ್‌ನಂತೆ ಮಾರಾಟವಾಗುತ್ತವೆ. ಈ ವೇಳೆ ಥಿಯೇಟರ್ ಹೌಸ್‌ಫುಲ್ ಎಂಬ ಫಲಕವನ್ನು ಹಾಕಲಾಗಿರುತ್ತದೆ. ಈ ಮೂಲಕ ನಾಟಕಗಳ ಬಗ್ಗೆ ಜನರಿಗಿರುವ ಒಲವು ತಿಳಿಯುತ್ತದೆ.

ಮೊದಲ ಬಾರಿಗೆ ಮಕ್ಕಳ ಬಹುರೂಪಿ



ಪ್ರಕಾಶ್ ರೈ

ರಂಗಾಯಣದಲ್ಲಿ ಇದೇ ಮೊದಲ ಬಾರಿಗೆ ಮಕ್ಕಳ ಬಹುರೂಪಿ ಏರ್ಪಡಿಸಲಾಗಿದೆ. ಜ.15 ರಂದು ಸಂಜೆ 6 ಗಂಟೆಗೆ ಬಹುಭಾಷಾ ನಟ ಪ್ರಕಾಶ್ ರೈ ಅವರು ಮಕ್ಕಳ ಬಹುರೂಪಿಗೆ ಚಾಲನೆ ನೀಡಲಿದ್ದಾರೆ. ರಂಗ ಚಟುವಟಿಕೆ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಮೂಡಿಸಿ ಭವಿಷ್ಯದ ಪ್ರಖ್ಯಾತ ರಂಗ ಕಲಾವಿದರನ್ನಾಗಿ ಮಾಡಲು ಮಕ್ಕಳ ಬಹುರೂಪಿ ಆಯೋಜಿಸಲಾಗಿದೆ. ಮಕ್ಕಳ ಬಹುರೂಪಿಯಲ್ಲಿ ಪ್ರದರ್ಶನಗೊಳ್ಳುವ ನಾಟಕಗಳ ಫ್ಲೆಕ್ಸ್‌ಗಳನ್ನು ಅಳವಡಿಸಿ ಪ್ರಚಾರ ನೀಡಲಾಗಿದೆ. ಮಕ್ಕಳ ಬಹುರೂಪಿ ನಾಟಕಕ್ಕೆ 50 ರೂಪಾಯಿ ಪ್ರವೇಶ ದರ ನಿಗದಿ ಮಾಡಲಾಗಿದೆ.

ತಿರುಪತಿ ತಿಮ್ಮಪ್ಪನ ಕ್ಷೇತ್ರದಲ್ಲಿ ಮತ್ತೊಂದು ಅವಘಡ

ಲಡ್ಡು ಕೌಂಟರ್‌ಗಳಲ್ಲಿ ಬೆಂಕಿ; ಹೆದರಿ ಓಡಿದ ಭಕ್ತರು



ತಿರುಪತಿ: ತಿರುಮಲ ಲಡ್ಡು ಕೌಂಟರ್‌ಗಳಲ್ಲಿ ಬೆಂಕಿ ಅವಘಡ ಸಂಭವಿಸಿದೆ. ಇದರಿಂದ ಭಕ್ತರು ಭಯಭೀತರಾಗಿ ಓಡಿಹೋದರು. ನಂತರ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಬೆಂಕಿಯನ್ನು ನಿಯಂತ್ರಣಕ್ಕೆ ತಂದರು. ಈ ಅಪಘಾತದಲ್ಲಿ ಯಾವುದೇ ಹಾನಿ ಸಂಭವಿಸಿಲ್ಲ ಎಂದು ವರದಿಯಾಗಿದೆ.

ಲಡ್ಡು ಕೌಂಟರ್‌ಗಳ ಕೌಂಟರ್ ಸಂಖ್ಯೆ 47ರಲ್ಲಿ ಈ ಅಪಘಾತ ಸಂಭವಿಸಿದೆ. ಕೌಂಟರ್‌ನಲ್ಲಿರುವ ಕಂಪ್ಯೂಟರ್ ಯುಪಿಎಸ್‌ನಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಅಪಘಾತ ಸಂಭವಿಸಿದೆ ಎಂದು ಸಿಬ್ಬಂದಿ ಹೇಳುತ್ತಾರೆ. ಮತ್ತೊಂದೆಡೆ, ತಿರುಮಲದ ಲಡ್ಡು ಕೌಂಟರ್‌ಗಳಲ್ಲಿ ಭಕ್ತರ ನಿರಂತರ ದಟ್ಟಣೆ ಇರುವುದು ಸಹಜ. ಇತ್ತೀಚಿನ ತಿರುಪತಿ ಕಾಲ್ತುಳಿತ ಘಟನೆಯ ನಂತರ, ಭಗವಂತನನ್ನು ಭೇಟಿ ಮಾಡುವ ಭಕ್ತರ ಸಂಖ್ಯೆಯಲ್ಲಿ ಬದಲಾವಣೆ ಕಂಡುಬಂದಿದೆ. ಈ ಅನುಕ್ರಮದಲ್ಲಿ, ಲಡ್ಡು ಕೌಂಟರ್‌ಗಳಲ್ಲಿ ಬೆಂಕಿ ಕಾಣಿಸಿಕೊಂಡು, ಗದ್ದಲ ಉಂಟಾಯಿತು ಮತ್ತು ಅಲ್ಲಿದ್ದ ಭಕ್ತರು ಸ್ವಲ್ಪ ಹೊತ್ತು ಭಯಭೀತರಾದರು.

ವೇದಿಕೆಯಲ್ಲೇ ಸಿಎಂ ಸಿದ್ದರಾಮಯ್ಯರಿಂದ ಜಿಲ್ಲಾಧಿಕಾರಿಗೆ ಮುಜುಗರ!

ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ಪ್ರತಿಕ್ರಿಯೆ



ಮೈಸೂರು, ಜ.13– ಕಾರ್ಯಕ್ರಮವೊಂದರ ವೇದಿಕೆಯ ಮುಂದಿನ ಸಾಲಿನಲ್ಲಿ ಕುಳಿತಿದ್ದ ಜಿಲ್ಲಾಧಿಕಾರಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಎಬ್ಬಿಸಿ, ಹಿಂದಕ್ಕೆ ಕಳುಹಿಸಿದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಭಾರಿ ವೈರಲ್ ಆಗುತ್ತಿದೆ.

ವಿಜಯನಗರ ಜಿಲ್ಲೆಯ ಬಂಡಿಹಳ್ಳಿಯ ಎಸ್.ಎಸ್ ಫಾರಂ ಹೌಸ್‌ನಲ್ಲಿ ಭಾನುವಾರ ನಡೆದ ಸರ್ವಧರ್ಮಗಳ ಸಾಮೂಹಿಕ ವಿವಾಹ ಸಮಾರಂಭದ ವೇದಿಕೆಯಲ್ಲಿ ಈ ಪ್ರಸಂಗ ನಡೆದಿದ್ದು, ಐಎಎಸ್ ಅಧಿಕಾರಿ ಮುಜುಗರಕ್ಕೀಡಾದರೆ ಉಳಿದವರು ನಗುಬೀರಿ ಸುಮ್ಮನಾಗಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ವೇದಿಕೆ ಬದಿಯಲ್ಲಿದ್ದ ಪೋಡಿಯಂ ಬಳಿ ಬಂದು ಭಾಷಣ ಆರಂಭಿಸಿದರು. ಎಂದಿನಂತೆ ಮಾತಿನ ಮಧ್ಯೆ ಸುತ್ತ–ಮುತ್ತ ಇದ್ದವರತ್ತ ನೋಡುವಾಗ ಮುಂದಿನ ಸಾಲಿನಲ್ಲಿ ಸ್ವಾಮೀಜಿ ಪಕ್ಕದಲ್ಲಿ ಕುಳಿತಿದ್ದ ವಿಜಯನಗರ ಜಿಲ್ಲಾಧಿಕಾರಿ ದಿವಾಕರ್ ಕಣ್ಣಿಗೆ ಬಿದ್ದಿದ್ದಾರೆ. ತಕ್ಷಣ ಸಿಎಂ, ನೀನು ಯಾರು? ಎಂದು ಪ್ರಶ್ನಿಸಿದ್ದಾರೆ. ಎದ್ದುನಿಂತ ದಿವಾಕರ್, ನಾನು ಡಿಸಿ ಸರ್ ಎಂದು 2–3 ಬಾರಿ ಹೇಳಿದ್ದಾರೆ. ಮಾತು ಮುಂದುವರೆಸಿದ ಸಿಎಂ, ನೀನ್ಯಾಕೆ ಇಲ್ಲಿ ಕೂತಿದ್ದೀಯಾ, ಅಲ್ಲಿ ಹೋಗು ಎಂದು ಹಿಂದಿನ ಸಾಲಿನತ್ತ ಕೈ ತೋರಿಸಿದ್ದಾರೆ. ಅಲ್ಲದೆ 'ಸ್ವಾಮೀಜಿ ಪಕ್ಕದಲ್ಲೇ ಕೂತ್ಕೊಂಡಿದ್ದೀಯಾ' ಎಂದು ಗದರಿದ್ದಾರೆ. ಈ ವೇಳೆ ಸಭಿಕರಲ್ಲಿ ಕೆಲವರು 'ಹೌದು ಹುಲಿಯಾ...' ಎಂದು ಕೂಗಿದ್ದಾರೆ.

ಈ ವಿಡಿಯೋ ಇದೀಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ. ಸ್ವಾಮೀಜಿ ಪಕ್ಕದಲ್ಲಿ ಕುಳಿತು ಅಶಿಸ್ತು ತೋರಿಸಿದ ಡಿಸಿಗೆ ಸಿದ್ದರಾಮಯ್ಯನವರು ಸರಿಯಾಗಿ ಕ್ಲಾಸ್ ತೆಗೆದುಕೊಂಡಿದ್ದಾರೆ ಎಂದು ಕೆಲವರು ಪ್ರತಿಕ್ರಿಯಿಸಿದರೆ, ಮತ್ತಷ್ಟು ಮಂದಿ ಸಿಎಂ ನಡೆಗೆ ಬೇಸರ ವ್ಯಕ್ತಪಡಿಸಿದ್ದಾರೆ. ಪಕ್ಕದಲ್ಲಿ ಕುಳಿತ ಮಾತ್ರಕ್ಕೆ ಸ್ವಾಮೀಜಿಗೆ ಅಗೌರವ ತೋರಿದಂತಾಗುವುದಿಲ್ಲ. ಅದರ ಬಗ್ಗೆ ಅಸಮಾಧಾನವಿದ್ದರೆ ಸೂಕ್ಷ್ಮವಾಗಿ ಡಿಸಿಗೆ ತಿಳಿಸಿದ್ದರೆ ಅವರೇ ಹಿಂದೆ ಹೋಗುತ್ತಿದ್ದರು. ಆದರೆ ಬಹಿರಂಗವಾಗಿ ಅದರಲ್ಲೂ ಮೈಕ್‌ನಲ್ಲಿ ಐಎಎಸ್ ಅಧಿಕಾರಿಯನ್ನು ಗದರಿಸಿದ್ದು ಸರಿ ಎನಿಸುವುದಿಲ್ಲ ಎಂಬ ಪ್ರತಿಕ್ರಿಯೆಗಳೂ ವ್ಯಕ್ತವಾಗಿವೆ.

ನಿನ್ನೆ ನಡೆದ ಸಾಮೂಹಿಕ ವಿವಾಹದಲ್ಲಿ 17 ಹಿಂದೂ ಹಾಗೂ 11 ಮುಸ್ಲಿಂ ಸಮುದಾಯದ ಜೋಡಿ ವೈವಾಹಿಕ ಜೀವನಕ್ಕೆ ಕಾಲಿಟ್ಟವು. ಸಿಎಂ ಸಿದ್ದರಾಮಯ್ಯ ನವ ವಧು–ವರರಿಗೆ ಅಕ್ಷತೆ ಹಾಕಿ ಆಶೀರ್ವದಿಸಿದರು.

ಬಹುರೂಪಿ ನಾಟಕೋತ್ಸವಕ್ಕೆ ಮುನ್ನುಡಿ

ಜನಪದ ಉತ್ಸವಕ್ಕೆ ಮೊರದಿಂದ ಮಡಿಕೆಗೆ ಧಾನ್ಯ ಸುರಿದು ಜನಪದರ ಶೈಲಿಯಲ್ಲೇ ಚಾಲನೆ

ಜ.19ರವರೆಗೆ ವಿವಿಧ ಜನಪದ ಕಲಾ ಪ್ರಾಕಾರಗಳ ಪ್ರದರ್ಶನ





ರಂಗಾಯಣದ ಕಿಂದರಿಜೋಗಿ ಆವರಣದಲ್ಲಿ ಮೊರದಿಂದ ಧಾನ್ಯವನ್ನು ಮಡಿಕೆಗೆ ಸುರಿಯುವ ಮೂಲಕ ಬಹುರೂಪಿ ಜನಪದ ಉತ್ಸವಕ್ಕೆ ಜಾನಪದ ಕಲಾವಿದೆ ಸವಿತಾ ಚೀರುಕುನ್ನಯ್ಯ ಸೋಮವಾರ ಚಾಲನೆ ನೀಡಿದರು. ಮತ್ತೊಂದು ಚಿತ್ರದಲ್ಲಿ ಮಂಗಳೂರು ಯಕ್ಷಮಿತ್ರ ಬಳಗವು ಯಕ್ಷಗಾನ ಪ್ರದರ್ಶನ ನೀಡಿದ್ದನ್ನು ಕಾಣಬಹುದು.

ಮೈಸೂರು,ಜ.13(ಪಿಎಂ)– ಹೂಗಳಿಂದ ಶೃಂಗಾರಗೊಂಡ ಮಣ್ಣಿನ ಮಡಿಕೆಯೊಳಗೆ ಭತ್ತದ ಧಾನ್ಯವನ್ನು ಮೊರದಿಂದ ಸುರಿದು, ಹೊಂಬಾಳೆ ಗೊಂಚಲುಗಳಿಂದ ಅಲಂಕೃತಗೊಳಿಸುವ ಮೂಲಕ ಸಮೃದ್ಧಿಯ ಸಂಕೇತದೊಂದಿಗೆ ಜನಪದರ ಶೈಲಿಯಲ್ಲಿಯೇ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ–2025ರ ಮುನ್ನುಡಿಯಾಗಿ ಜನಪದ ಉತ್ಸವಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ಮೈಸೂರಿನ ರಂಗಾಯಣ ಆವರಣದ ಕಿಂದರಿಜೋಗಿ ಅಂಗಳದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಜಾನಪದ ಕಲಾವಿದೆ (ಪೂಜಾ ಕುಣಿತ ಕಲಾವಿದರು) ಸವಿತಾ ಚೀರುಕುನ್ನಯ್ಯ, ಹೀಗೆ ಮೊರದಿಂದ ಧಾನ್ಯವನ್ನು ಮಡಿಕೆಗೆ ತುಂಬಿ ವಿಶೇಷ ರೀತಿಯಲ್ಲಿ ಜನಪದ ಉತ್ಸವಕ್ಕೆ ಚಾಲನೆ ನೀಡಿದರು. ಜ.19ರವರೆಗೆ ಪ್ರತಿದಿನ ಸಂಜೆ 5.30ಕ್ಕೆ ಇದೇ ಕಿಂದರಿಜೋಗಿ ಆವರಣದಲ್ಲಿ ವಿವಿಧ ಜನಪದ ಕಲಾ ಪ್ರಾಕಾರಗಳ ಪ್ರದರ್ಶನ ನಡೆಯಲಿದೆ.

ಉದ್ಘಾಟನೆ ಬಳಿಕ ಮಾತನಾಡಿದ ಸವಿತಾ ಚೀರುಕುನ್ನಯ್ಯ, ನಾಡಿನ ಜನಪದ ಕಲೆಗಳು ಉಳಿದು ಬೆಳೆಯಬೇಕಾದರೆ, ಜಾನಪದ ಕಲಾವಿದರ ಶ್ರೇಯೋಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಸರ್ಕಾರ ನೀಡಬೇಕು. ಜಾನಪದ ಕಲಾವಿದರು ಕಲಾ ಪ್ರದರ್ಶನಕ್ಕಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಪ್ರಯಾಣಿಸಬೇಕಾಗುತ್ತದೆ. ನೂರಾರು ಇಲ್ಲವೇ ಸಾವಿರಾರು ಕಿ.ಮೀ. ಪ್ರಯಾಣ ಮಾಡುತ್ತೇವೆ. ಇಂತಹ ಸನ್ನಿವೇಶದಲ್ಲಿ ಯಾವುದೇ ಅನಾಹುತ ಆದಲ್ಲಿ ನಮ್ಮ ಕಲಾವಿದರಿಗೆ ಸರ್ಕಾರ ನೆರವು ನೀಡಬೇಕು ಎಂದು ಕೋರಿದರು. ಜಾನಪದ ಕಲಾವಿದರಿಗಾಗಿ ಯಾವುದೇ ನಿಧಿ ಸಹ ಇಲ್ಲ. ಜಾನಪದ ಕಲೆಗಳು ಶಾಶ್ವತ ಉಳಿಯಬೇಕಾದರೆ ಸರ್ಕಾರಗಳು ಜಾನಪದ ಕಲಾವಿದರ ಸಂಕಷ್ಟದ ಸನ್ನಿವೇಶದಲ್ಲಿ ಸಹಾಯ ಮಾಡಬೇಕು. ನಮ್ಮ ಕಲಾವಿದರನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಳೆಸುತ್ತಿದೆ. ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಹೋಗಲು ಇಲಾಖೆ ಸೇತುವೆಯಾಗಿ ನಿಂತಿದೆ ಎಂದರು.

ಇದೇ ಸ್ಥಳದಲ್ಲಿ ಕಳೆದ ಬಹುರೂಪಿಯ ಜನಪದ ಉತ್ಸವದಲ್ಲಿ ಪೂಜಾ ಕುಣಿತ ಪ್ರದರ್ಶನ ನೀಡಿದ್ದೆ. ಈ ಬಾರಿ ಜನಪದ ಉತ್ಸವ ಉದ್ಘಾಟನೆಗೆ ಅವಕಾಶ ದೊರೆತಿರುವುದು ನನ್ನ ಪೂರ್ವಜನ್ಮದ ಪುಣ್ಯ ಎಂದೇ ಭಾವಿಸಿದ್ದೇನೆ. ಪೂಜಾ ಕುಣಿತ ಗಂಡುಕಲೆ. ಇದನ್ನು ನಾನು ಒಬ್ಬ ಹೆಣ್ಣುಮಗಳಾಗಿ ಕಲಿತು ಮುನ್ನಡೆಸಿಕೊಂಡು ಹೋಗುತ್ತಿದ್ದು, ಇದಕ್ಕೆ ನನಗೆ ಹೆಮ್ಮೆಯಿದೆ. ಮೂಲತಃ ನಾನು ಹಳ್ಳಿಗಾಡಿನ (ಮಂಡ್ಯ ಜಿಲ್ಲೆ) ಹೆಣ್ಣು ಮಗಳು. ನನ್ನ ತಂದೆ ಸಹ ಪೂಜಾ ಕುಣಿತ ಕಲಾವಿದರು. ನನ್ನ ಕುಟುಂಬ ಜಾನಪದ ಕಲೆಯೊಂದಿಗೆ ಅವಿನಾಭಾವ ಸಂಬಂಧ ಹೊಂದಿದೆ ಎಂದು ಅಭಿಮಾನ ವ್ಯಕ್ತಪಡಿಸಿದರು.

ಜಾನಪದ ಕಲೆಯಿಂದಲೇ ನಮ್ಮ ಕುಟುಂಬದ ಬದುಕು ರೂಪುಗೊಂಡಿದೆ. ರಾಜ್ಯದಲ್ಲಿ ಮಾತ್ರವಲ್ಲದೇ ದೇಶ–ವಿದೇಶದಲ್ಲೂ ಪೂಜಾ ಕುಣಿತ ಪ್ರದರ್ಶನ ನೀಡಿದ್ದೇನೆ. ಇದಕ್ಕೆ ನನಗೆ ಹೆಮ್ಮೆ ಇದೆ. ಸೂಕ್ತ ಪ್ರೋತ್ಸಾಹ ಇಲ್ಲದ ಕಾರಣ ಜನಪದ ಕಲೆಗಳು ನಶಿಸುತ್ತಿವೆ ಎಂದು ಕೆಲವರು ಹೇಳುತ್ತಾರೆ. ಆದರೆ ಇದು ಸಂಪೂರ್ಣ ಸತ್ಯವಲ್ಲ. ನಮ್ಮ ರಾಜ್ಯದಲ್ಲಿ ಜಾನಪದ ಕಲೆಗಳು ಸಮೃದ್ಧಿಯಾಗಿದ್ದು, ಸಾಕಷ್ಟು ಕಲಾವಿದರೂ ಇದ್ದಾರೆ. ಜಾನಪದ ಕಲೆಗಳಿಗೆ ಮಾಧ್ಯಮಗಳು ಹೆಚ್ಚು ಪ್ರಚಾರ ನೀಡಬೇಕು. ಇದರಿಂದ ಜಾನಪದ ಕಲೆ ಮತ್ತು ಕಲಾವಿದರು ಉಳಿದು ಬೆಳೆಯಲು ಸಾಧ್ಯ ಎಂದು ಕೋರಿದರು.

ರಾಜಾತಿಥ್ಯವಿಲ್ಲದೆ ಬೆಳೆದ ಜನಪದ: ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ರಂಗ ಸಮಾಜದ ಸದಸ್ಯ ಮಹಾಂತೇಶ್ ಗಜೇಂದ್ರಗಡ ಮಾತನಾಡಿ, ಜನಪದ ಕಲೆ ಹೃದಯದಿಂದ ಹೃದಯ ಮುಟ್ಟುವ ಮೂಲಕ ಬೆಳೆದುಬಂದಿರುವ ಕಲೆ. ಇದಕ್ಕೆ ರೂಪುರೇಷೆ ಕೊಟ್ಟವರು ಯಾರೂ ಇಲ್ಲ. ನಮ್ಮ ಪೂರ್ವಜರ ಬದುಕಿನ ಸಂಭ್ರಮವೇ ಜನಪದ ಕಲಾ ಪ್ರಾಕಾರಗಳಾಗಿವೆ. ಜಾನಪದ ಕಲಾ ಪ್ರಾಕಾರಗಳು ಯಾವುದೇ ರಾಜಾತಿಥ್ಯವಿಲ್ಲದೇ, ರಾಜಕೀಯ ಸೋಂಕಿಲ್ಲದೇ ರೂಪುಗೊಂಡವು. ಜನಪದ ಅಲಿಖಿತ ಸಾಹಿತ್ಯವು ಎಲ್ಲಾ ಸಾಹಿತ್ಯಗಳ ತಾಯಿಬೇರು ಎಂದು ಹೇಳಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಡಾ.ತಲ್ಲೂರು ಶಿವರಾಮ ಶೆಟ್ಟಿ ಮಾತನಾಡಿ, ಜನಪದ ಮತ್ತು ಯಕ್ಷಗಾನ ನಡುವೆ ನಿಕಟ ಸಂಬಂಧವಿದೆ. ಯಕ್ಷಗಾನ ಸಮಾಜಕ್ಕೆ ರಾಮಾಯಣ ಮತ್ತು ಮಹಾಭಾರತವನ್ನು ಪರಿಚಯಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ. ನಾಟಕ ಮತ್ತು ಯಕ್ಷಗಾನ ಸಮಾಜದಲ್ಲಿ ಸಂಸ್ಕಾರ ಮತ್ತು ಸಂಸ್ಕೃತಿ ಬಿತ್ತುವಲ್ಲಿ ಪ್ರಮುಖ ಪಾತ್ರ ವಹಿಸಲಿದ್ದು, ಹೀಗಾಗಿ ಮುಂದಿನ ಪೀಳಿಗೆಗೆ ಇವು ಉಳಿದು ಬೆಳೆಯಬೇಕು ಎಂದು ತಿಳಿಸಿದರು.

ಬಳಿಕ ಮಂಗಳೂರು ಯಕ್ಷಮಿತ್ರ ಬಳಗದ ಕಲಾವಿದರು 'ನರಕಾಸುರ ವಧೆ' ಯಕ್ಷಗಾನ ಪ್ರಸಂಗ ಪ್ರದರ್ಶಿಸಿದರು. ರಂಗ ಸಮಾಜದ ಸದಸ್ಯ ಸುರೇಶ್ ಬಾಬು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ರಂಗಾಯಣ ಉಪನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಜನಪದ ಉತ್ಸವ ಸಂಚಾಲಕಿ ಗೀತಾ ಮೋಂಟಡ್ಕ ಮತ್ತಿತರರು ಹಾಜರಿದ್ದರು.

ಮುಂದಿನ ವರ್ಷ ಬೆಳ್ಳಿಹಬ್ಬದ ಬಹುರೂಪಿ; ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು



ಮೈಸೂರು,ಜ.13(ಪಿಎಂ)– ಮೈಸೂರು ರಂಗಾಯಣ 35 ವರ್ಷಗಳನ್ನು ಪೂರೈಸಿದ್ದು, ಈ ಬಾರಿ 24ನೇ ವರ್ಷದ ಬಹುರೂಪಿ ನಡೆಯುತ್ತಿದೆ. ಮುಂದಿನ ವರ್ಷ ಬಹುರೂಪಿ ಬೆಳ್ಳಿಹಬ್ಬದೊಂದಿಗೆ ನಡೆಯಲಿದೆ ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ತಿಳಿಸಿದರು. ಆಶಯ ನುಡಿಗಳನ್ನಾಡಿದ ಅವರು, 'ಬಿಡುಗಡೆ, ಸಾಮಾಜಿಕ ನ್ಯಾಯ–ಚಳವಳಿಗಳು ಮತ್ತು ರಂಗಭೂಮಿ' ಈ ಬಾರಿ ಬಹುರೂಪಿ ಆಶಯ. ಮಕ್ಕಳ ಬಹುರೂಪಿ ಸೇರ್ಪಡೆ ಮಾಡಿರುವುದು ಈ ಬಾರಿಯ ವಿಶೇಷ. ಮಕ್ಕಳು ಸಮಾಜದ ಮುಖ್ಯ ಅಂಗ. ಆದರೆ ಸಮಾಜ ಇದನ್ನು ಮರೆತು ಅವರ ಕೈಗಳಿಗೆ ಮೊಬೈಲ್ ಕೊಟ್ಟು ಜವಾಬ್ದಾರಿ ಮರೆಯುತ್ತಿದೆ. ಈ ಸನ್ನಿವೇಶದಲ್ಲಿ ಮಕ್ಕಳಲ್ಲಿ ಅರಿವು ಮೂಡಿಸುವ ದೊಡ್ಡ ಜವಾಬ್ದಾರಿ ಅರಿಯಬೇಕಿದೆ. ಹಾಗಾಗಿ ಈ ಯೋಜನೆ ಸೇರ್ಪಡೆ ಮಾಡಲಾಗಿದೆ ಎಂದರು.

ಬಹುರೂಪಿ ನಾಟಕೋತ್ಸವದ ಎಲ್ಲಾ ನಾಟಕಗಳಲ್ಲಿ ಬಿಡುಗಡೆ ಎಂಬುದು ಮುಖ್ಯ ಅಭಿವ್ಯಕ್ತಿಯಾಗಿ ಹೊರಹೊಮ್ಮಲಿದೆ. ಎಲ್ಲಾ ಶತಮಾನಗಳಲ್ಲೂ ಶೋಷಣೆಯ ಮಾದರಿಗಳು ಮರು ವಿನ್ಯಾಸ ಹೊಂದುತ್ತಾ ಬಿಡುಗಡೆಯ ಹೋರಾಟ ನಿರಂತರ ಎನ್ನುವಂತೆ ಆಗಿದೆ. ಗೊತ್ತಿದ್ದೂ ಮನುಷ್ಯ ವಿಸ್ಮೃತಿಗೆ ಇಳಿಯುತ್ತಿರುವ ಈ ಕಾಲಘಟ್ಟದಲ್ಲಿ ಕಿಚ್ಚು ಇಲ್ಲದೆ, ಬಿಡುಗಡೆಯ ಚಿಂತನೆಯೇ ಹುಟ್ಟುವುದಿಲ್ಲ. ಭಾರತಾದ್ಯಂತ ಸುಮಾರು 800 ಕಲಾವಿದರು ಇಲ್ಲಿ ತಮ್ಮ ಕಲಾಭಿವ್ಯಕ್ತಿ ಮೂಲಕ ನಮ್ಮೊಳಗೆ ಅಥವಾ ಸಮುದಾಯದೊಳಗೆ ಪ್ರಶ್ನೆ ರೂಪಿಸುವ ಮೂಲಕ ವಿಸ್ಮೃತಿಯಿಂದ ಬಿಡುಗಡೆಗೊಳಿಸುವ ಕೆಲಸವನ್ನು ಮಾಡಲಿದ್ದಾರೆ ಎಂದು ತಿಳಿಸಿದರು.

ಮೂಗೂರಲ್ಲಿ ವಿಜೃಂಭಣೆಯ ಬಂಡಿ ಜಾತ್ರೆ ಆರಂಭ



ಅಮ್ಮನವರ ಉತ್ಸವ ಮೂರ್ತಿ ಮೆರವಣಿಗೆ ನಡೆಯಿತು.

ಮೂಗೂರು, ಜ.13– ಐದು ದಿನಗಳ ಕಾಲ ನಡೆಯುವ ಪ್ರಸಿದ್ಧ ಶ್ರೀತ್ರಿಪುರ ಸುಂದರಿ ಅಮ್ಮನವರ ಮೂಗೂರು ಬಂಡಿ ಜಾತ್ರೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಆರಂಭಗೊಂಡಿತು.

ಮೂಗೂರು ಬಂಡಿ ಅಂಗವಾಗಿ ಅಮ್ಮನವರ ದೇವಾಲಯದಲ್ಲಿ ಮುಂಜಾಣೆಯಿಂದಲೇ ಧಾರ್ಮಿಕ ಪೂಜಾ ಕೈಂಕರ್ಯಗಳು ವಿಧಿವತ್ತಾಗಿ ನಡೆದು ಮಧ್ಯಾಹ್ನ 12 ಗಂಟೆಗೆ ಅಮ್ಮನವರ ಉತ್ಸವಮೂರ್ತಿಯನ್ನು ದೇಗುಲದಲ್ಲಿ ಪ್ರದಕ್ಷಿಣೆ ಹಾಕಿ ನಂತರ ರುದ್ರಾಕ್ಷಿ ಮಂಟಪದಲ್ಲಿ ಪ್ರತಿಷ್ಠಾಪಿಸಲಾಯಿತು. ಬಳಿಕ ಹರಕೆ ಹೊತ್ತ ಭಕ್ತರು ಬಂಡಿಗೆ ಈಡುಗಾಯಿ ಹೊಡೆದು ನಂತರ ರುದ್ರಾಕ್ಷಿ ಮಂಟಪದ ಉತ್ಸವದೊಂದಿಗೆ ಬಂಡಿ ಮಂಟಪಕ್ಕೆ ತಲುಪುತ್ತಿದ್ದಂತೆ ದಾರಿಯುದ್ದಕ್ಕೂ ಪೂಜಾ ಬಂಡಿಗೆ ಭಕ್ತರು ಹೂ ಚೆಲ್ಲಿ ಸಂಭ್ರಮಿಸಿದರು. ಅಮ್ಮನವರಿಗೆ ಬಂಡಿ ಮಂಟಪದಲ್ಲಿ ಪೂಜೆ ಸಲ್ಲಿಸಿ, ಭಕ್ತರ ಸಿಳ್ಳೆ ಚಪ್ಪಾಳೆ ಝೇಂಕಾರದೊಂದಿಗೆ ಮೊದಲ ಬಂಡಿ ಓಟಕ್ಕೆ ಚಾಲನೆ ನೀಡಲಾಯಿತು. ಬಂಡಿ ಓಟದ ವೀಕ್ಷಣೆಗಾಗಿ ಬಂಡಿ ಬೀದಿಯಲ್ಲಿ ನೆರೆದಿದ್ದ ಜನಸ್ತೋಮ ಓಟದ ರೋಚಕ ಕ್ಷಣಗಳನ್ನು ಕಣ್ತುಂಬಿಕೊಂಡರು.

ಅನ್ನಸಂತರ್ಪಣೆ: ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಹೊನ್ನಲಗೆರೆ ಗ್ರಾಪಂ ವ್ಯಾಪ್ತಿಯ ಬ್ಯಾಡರಹಳ್ಳಿ ಗ್ರಾಮಸ್ಥರು, ಶ್ರೀತ್ರಿಪುರ ಸುಂದರಿ ಅಮ್ಮನವರ ಸೇವಾ ಸಮಿತಿಯಿಂದ ಮುಖ್ಯರಸ್ತೆಯಿಂದ ದೇಗುಲದ ರಾಜಗೋಪುರ ಸೇರಿದಂತೆ ವಿದ್ಯುತ್ ದೀಪಾಲಂಕಾರ ಹಾಗೂ ಜಾತ್ರೆಗೆ ಆಗಮಿಸುವ ಭಕ್ತರಿಗೆ ಅನ್ನಸಂತರ್ಪಣೆ ಹಮ್ಮಿಕೊಂಡಿದ್ದಾರೆ. ಅಲ್ಲದೇ ಪ್ರತಿವರ್ಷದಂತೆ ಈ ಬಾರಿಯೂ 5 ದಿನಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮವನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಆಯೋಜಿಸಿದ್ದಾರೆ.

ಚುಂಚನಕಟ್ಟೆಯಲ್ಲಿ ಅದ್ಧೂರಿ ಸೀತಾ ಕಲ್ಯಾಣ



ಚುಂಚನಕಟ್ಟೆಯಲ್ಲಿ ಸೀತಾಕಲ್ಯಾಣ ನಡೆಯಿತು.

ಸಾಲಿಗ್ರಾಮ, ಜ.13– ತಾಲೂಕಿನ ಚುಂಚನಕಟ್ಟೆಯಲ್ಲಿ ಜ.15ರಂದು ನಡೆಯುವ ಬ್ರಹ್ಮ ರಥೋತ್ಸವದ ಅಂಗವಾಗಿ ಇಲ್ಲಿನ ಶ್ರೀರಾಮ ದೇವಾಲಯದಲ್ಲಿ ಭಾನುವಾರ ರಾತ್ರಿ ಸೀತಾ ಕಲ್ಯಾಣ ಅದ್ಧೂರಿಯಾಗಿ ನೆರವೇರಿತು.

ರಾತ್ರಿ 8 ಗಂಟೆಗೆ ಶ್ರೀರಾಮನನ್ನು ಪಲ್ಲಕ್ಕಿಯಲ್ಲಿ ದೇವಾಲಯ ಪ್ರದಕ್ಷಿಣೆ ಹಾಕಿಸುವ ಮೂಲಕ ಕಾಶಿಯಾತ್ರೆ ಮುಗಿಸಿ ಮಂಟಪಕ್ಕೆ ಕರೆ ತರಲಾಯಿತು. ನಂತರ ಹೆಣ್ಣಿನ ಕಡೆಯವರಿಂದ ವರನನ್ನು ಮನೆ ತುಂಬಿಸಿ ಮಂಟಪದಲ್ಲಿ ಕೂರಿಸಲಾಯಿತು. ವಧು–ವರರ ಪರವಾಗಿ ಶಾಸಕ ಡಿ.ರವಿ ಶಂಕರ್ ಪತ್ನಿ ಸುನೀತಾ, ದೊಡ್ಡಸ್ವಾಮಿ ಗೌಡ ವನಜಾಕ್ಷಮ್ಮ, ತಹಸೀಲ್ದಾರ್ ನರಗುಂದ ಎಸ್.ಎನ್, ಪತ್ನಿ ಸುಮಾ ಎಸ್, ನೇತ್ರ ತಜ್ಞ ಶ್ರೀನಿವಾಸ್ ಕುಟುಂಬ ಹಾಜರಿದ್ದು ಮದುವೆ ಶಾಸ್ತ್ರಗಳನ್ನು ಚಾಚೂ ತಪ್ಪದೇ ನೆರವೇರಿಸಿದರು. 9.50ರ ವೇಳೆಗೆ ಸೀತಾ ಮಾತೆಗೆ ಮಾಂಗಲ್ಯ ಧಾರಣೆ ಮಾಡಿಸಲಾಯಿತು. ಈ ಸಂದರ್ಭ ನೆರೆದಿದ್ದ ಸಾವಿರಾರು ಮಂದಿ ಜೈ ಶ್ರೀರಾಮ್, ಜೈ ಸೀತಾರಾಂ ಘೋಷಣೆ ಕೂಗಿದರು.

ಕಲ್ಯಾಣೋತ್ಸವದಲ್ಲಿ ಭಾಗವಹಿಸಿ ಮಂತ್ರಾಕ್ಷತೆ ಪಡೆದರೆ ಮದುವೆಯಾಗದವರಿಗೆ, ಮಕ್ಕಳಾಗದವರಿಗೆ ಶುಭಫಲ ದೊರೆಯುತ್ತದೆ ಎಂಬ ನಂಬಿಕೆ ಬಹಳ ಹಿಂದಿನಿಂದಲೂ ಇದ್ದು, ಭಾಗವಹಿಸಿದ್ದ ನೂರಾರು ಯುವಕ ಯುವತಿಯರು ಸಂದರ್ಭಕ್ಕೆ ಸಾಕ್ಷೀಕರಿಸಿದರು. ಕಲ್ಯಾಣೋತ್ಸವದ ವೇದಘೋಷಗಳನ್ನು ಆಗಮ ಪಂಡಿತರಾದ ಪ್ರೊ.ವೆಂಕಟೇಶಮೂರ್ತಿ ಮತ್ತು ವೇಣುಗೋಪಾಲ ನೇತೃತ್ವದ ತಂಡ ನೆರವೇರಿಸಿತು. ಭಕ್ತರಿಗೆ ಗುತ್ತಿಗೆದಾರರಾದ ಸಿ.ಬಿ.ಲೋಕೇಶ ಹಾಗೂ ದೇವಾಲಯದ ವತಿಯಿಂದ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ದೇವಾಲಯದ ಒಳಾವರಣ ಕಲ್ಯಾಣೋತ್ಸವ ನಡೆಸಲು ತುಂಬಾ ಕಿರಿದಾಗಿದ್ದ ಕಾರಣ ಇದೇ ಮೊದಲ ಬಾರಿಗೆ ಕಲ್ಯಾಣೋತ್ಸವವನ್ನು ದೇವಾಲಯದ ಮುಂಭಾಗ ಭವ್ಯ ಮಂಟಪದಲ್ಲಿ ನಡೆಸಿದ್ದು, ನೆರೆದಿದ್ದ ಭಕ್ತರ ಪ್ರಶಂಸೆಗೆ ಪಾತ್ರವಾಯಿತು.

ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಸದಸ್ಯೆ ವೀಣಾ ಕೀರ್ತಿ, ತಾಲೂಕು ಕಾಂಗ್ರೆಸ್ ಅಧ್ಯಕ್ಷ ಉದಯ್ ಶಂಕರ್, ಗ್ರಾಪಂ ಸದಸ್ಯ ಗೋವಿಂದೇಗೌಡ, ಮಾಜಿ ಸದಸ್ಯ ಮಧು, ಕುಮಾರ್, ಮುಖಂಡರಾದ ಡೈರಿ ಮಾಧು, ಹೆಬ್ಬಾಳ್ ಸ್ವಾಮಿ, ಚಿಕ್ಕಕೊಪ್ಪಲು ಗಿರೀಶ್, ಶಿರಸ್ತೇದಾರ್ ಸತೀಶ್, ಉಪ ತಹಸೀಲ್ದಾರ್ ಶರತ್ ಕುಮಾರ್, ಡಿಸಿ ಕಚೇರಿ ಮುಜರಾಯಿ ತಹಸೀಲ್ದಾರ್ ವಿದ್ಯುಲತಾ, ದೇವಾಲಯದ ಪಾರುಪತ್ತೇದಾರ ಯತಿರಾಜ್, ಪರಿಚಾರಕ ವಾಸುದೇವನ್, ನಾರಾಯಣ ಅಯ್ಯಂಗಾರ್, ಚುಂಚನಕಟ್ಟೆ ಠಾಣೆ ದಫೇದಾರ್ ದೊಡ್ಡಸ್ವಾಮಿಗೌಡ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಶ್ರೀವೈದ್ಯನಾಥೇಶ್ವರಸ್ವಾಮಿ, ಸಮೂಹ ದೇವಾಲಯದ

ವ್ಯವಸ್ಥಾಪನಾ ಸಮಿತಿಗೆ ಬೆಟ್ಟಳ್ಳಿ ನಾಗರಾಜು ಅಧ್ಯಕ್ಷ



ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾಗಿ ಬೆಟ್ಟಳ್ಳಿ ಎಂ.ನಾಗರಾಜು ಆಯ್ಕೆಯಾದರು.

ತಿ.ನರಸೀಪುರ, ಜ.13– ತಾಲೂಕಿನ ತಲಕಾಡು ಶ್ರೀವೈದ್ಯನಾಥೇಶ್ವರಸ್ವಾಮಿ ಹಾಗೂ ಸಮೂಹ ದೇವಾಲಯದ ವ್ಯವಸ್ಥಾಪನಾ ಸಮಿತಿ ನೂತನ ಅಧ್ಯಕ್ಷರಾಗಿ ಬೆಟ್ಟಳ್ಳಿ ಎಂ.ನಾಗರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮುಡುಕುತೊರೆ ಶ್ರೀಮಲ್ಲಿಕಾರ್ಜುನಸ್ವಾಮಿ ದೇವಾಲಯದ ಬೆಟ್ಟದ ತಪ್ಪಲಿನಲ್ಲಿರುವ ಅತಿಥಿ ಗೃಹದಲ್ಲಿ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರ ಆಯ್ಕೆ ಸಂಬಂಧ ನಡೆದ ವಿಶೇಷ ಚುನಾವಣೆ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಂ.ನಾಗರಾಜು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ವೆಂಕಟೇಶ್ ಪ್ರಸಾದ್ ಅವಿರೋಧ ಆಯ್ಕೆ ಪ್ರಕಟಿಸಿದರು.

ಜ.3ರಂದು ನಡೆದ ರಾಜ್ಯ ಧಾರ್ಮಿಕ ಪರಿಷತ್ ಸಭೆಯ ನಿರ್ಣಯದಂತೆ ಶ್ರೀವೈದ್ಯನಾಥೇಶ್ವರಸ್ವಾಮಿ ಹಾಗೂ ಸಮೂಹ ದೇವಾಲಯಕ್ಕೆ ವ್ಯವಸ್ಥಾಪನಾ ಸಮಿತಿ ಸದಸ್ಯರನ್ನಾಗಿ 9 ಮಂದಿಯನ್ನು ಜ.9 ರಂದು ಆಯ್ಕೆ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಸೋಮವಾರ ಮುಡುಕುತೊರೆ ಅತಿಥಿ ಗೃಹದಲ್ಲಿ ಅಧ್ಯಕ್ಷರ ಆಯ್ಕೆ ಸಂಬಂಧ ಚುನಾವಣೆ ಪ್ರಕ್ರಿಯೆ ನಡೆಯಿತು.

ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಅರ್ಚಕರು, ಪ್ರಧಾನ ಅರ್ಚಕರು ಸೇರಿದಂತೆ ಎನ್.ಕೋಕಿಲಾ, ಕೆ.ನಾಗಮ್ಮ ಟಿ.ಎಂ.ವಿಜಯಕುಮಾರ್, ಆರ್.ಮಾದೇಶ್ ಸಿ.ಶಾಂತಕುಮಾರ್, ಟಿ.ಎನ್.ಲೋಕೇಶ್, ಟಿ.ಎಸ್.ಗೋವಿಂದರಾಜು ಚುನಾವಣೆ ಸಭೆಗೆ ಹಾಜರಾಗಿ ನೂತನ ಅಧ್ಯಕ್ಷರ ಆಯ್ಕೆಗೆ ಸಮ್ಮತಿ ಸೂಚಿಸಿದರು.

ನೂತನ ಅಧ್ಯಕ್ಷ ಬೆಟ್ಟಳ್ಳಿ ಎಂ.ನಾಗರಾಜು ತಮ್ಮ ಆಯ್ಕೆಗೆ ಕಾರಣರಾದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್, ಪಕ್ಷದ ಕಾರ್ಯಕರ್ತರು ಹಾಗೂ ಅರ್ಚಕರಿಗೆ ಅಭಿನಂದನೆ ಸಲ್ಲಿಸಿ ಮಾತನಾಡಿ, ನೂತನವಾಗಿ ಅಧ್ಯಕ್ಷನಾದ ನನಗೆ ದೇವಸ್ಥಾನಗಳ ಅಭಿವೃದ್ಧಿ ಹಾಗೂ ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಉದ್ಘಾಟನೆ, ಭಕ್ತರಿಗೆ ಮೂಲ ಸೌಲಭ್ಯ ಕಲ್ಪಿಸಿಕೊಡುವ ಮಹದಾಸೆ ಇದೆ. ಸಮರ್ಪಕ ರಸ್ತೆ, ಕುಡಿಯುವ ನೀರು, ಶೌಚಾಲಯ, ಆಸ್ಪತ್ರೆ ಸೌಲಭ್ಯ ದೊರಕಿಸಿಕೊಡುವ ಮೂಲ ಉದ್ದೇಶ ನನ್ನದಾಗಿದೆ. ಈಗಾಗಲೇ ಸಚಿವರು ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಅನುದಾನ ಬಿಡುಗಡೆ ಮಾಡಿಕೊಟ್ಟಿದ್ದಾರೆ. ಬಸ್ ನಿಲ್ದಾಣ, ಆಸ್ಪತ್ರೆ ನಿರ್ಮಾಣಕ್ಕೆ ನಿವೇಶನ ನೀಡಿದ್ದಾರೆ. ನೂತನ ವ್ಯವಸ್ಥಾಪನಾ ಸಮಿತಿ ಎಲ್ಲಾ ಸದಸ್ಯರು ಕ್ಷೇತ್ರದ ದೇವ ಸ್ಥಾನ ಹಾಗೂ ಮೂಲ ಸೌಕರ್ಯಕ್ಕೆ ಮತ್ತಷ್ಟು ಹೆಚ್ಚಿನ ಅನುದಾನಕ್ಕೆ ಬೇಡಿಕೆ ಇಡುವ ಜೊತೆಗೆ ತ್ವರಿತಗತಿಯಲ್ಲಿ ಕಾಮಗಾರಿಗಳನ್ನು ಮುಗಿಸಿ ಭಕ್ತರಿಗೆ ಅನುಕೂಲ ಕಲ್ಪಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ ಎಂದರು.

ಪ್ರಧಾನ ಅರ್ಚಕ ಆನಂದ್ ದೀಕ್ಷಿತ್ ಮಾತನಾಡಿ, ತಲಕಾಡಿನಲ್ಲಿ ಸರ್ಕಾರಿ ಬಸ್ ನಿಲ್ದಾಣ ನಿರ್ಮಾಣದ ಜೊತೆಗೆ ಬಸ್ ಡಿಪೋ ನಿರ್ಮಿಸಲು ಸಚಿವರಿಗೆ ಮನವಿ ಸಲ್ಲಿಸಿ, ಇದಕ್ಕೆ ಬೇಕಾದ ಸಹಕಾರವನ್ನು ಅರ್ಚಕರಾದ ನಾವು ಸಹ ನೀಡುತ್ತೇವೆ ಎಂದರೆ, ಮೊದಲಿಗೆ ನಿರ್ಮಾಣ ಹಂತದಲ್ಲಿರುವ ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಕಾಮಗಾರಿ ತ್ವರಿತವಾಗಿ ಮುಗಿಸಿ ಭಕ್ತರಿಗೆ ಅನುಕೂಲ ಕಲ್ಪಿಸಿಕೊಡುವಂತೆ ಮತ್ತೊಬ್ಬ ಅರ್ಚಕ ಎಂ.ಪಿ.ಜಗದೀಶ್‌ಮೂರ್ತಿ ಮನವಿ ಮಾಡಿದರು.

ಈ ವೇಳೆ ಅರ್ಚಕರಾದ ವಿಶ್ವನಾಥ್, ಡಿ.ರಮೇಶ್, ಕುಮಾರಸ್ವಾಮಿ, ಮಹೇಶ್, ಮಹೇಶ್ ಮೂರ್ತಿ ಸೇರಿದಂತೆ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ಎಲ್ಲರೂ ಮಾನಸಿಕ, ದೈಹಿಕ ಆರೋಗ್ಯ ಕಾಪಾಡಿಕೊಳ್ಳಿ: ದರ್ಶನ್

ದೇಹದಾರ್ಢ್ಯ ಸ್ಪರ್ಧೆ: ನಂಜುಂಡಸ್ವಾಮಿ ಮಿಸ್ಟರ್ ನಂಜನಗೂಡು



ನಂಜುಂಡಸ್ವಾಮಿಗೆ ಬಹುಮಾನ ವಿತರಿಸಲಾಯಿತು.

ನಂಜನಗೂಡು, ಜ.13– ದೇಶವನ್ನು ಆರೋಗ್ಯಕರ, ಸ್ವಾಸ್ಥ್ಯ ಸಮಾಜವನ್ನಾಗಿ ನಿರ್ಮಿಸುವ ಸಲುವಾಗಿ ಎಲ್ಲರೂ ಮಾನಸಿಕ, ದೈಹಿಕ ಆರೋಗ್ಯ ಕಾಪಾಡಿಕೊಳ್ಳುವ ಜೊತೆಗೆ ಉತ್ತಮ ಆಹಾರ ಪದ್ಧತಿ ರೂಢಿಸಿಕೊಳ್ಳಬೇಕು ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಮೃತ್ಯುಂಜಯ ಜಿಮ್ ಫಿಟ್ನೆಸ್ ವತಿಯಿಂದ ಆಯೋಜಿಸಿದ್ದ ಮಿಸ್ಟರ್ ನಂಜನಗೂಡು ತಾಲೂಕು ಮಟ್ಟದ ದೇಹದಾರ್ಢ್ಯ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ದೈಹಿಕ ಕಸರತ್ತಿನ ಕ್ರೀಡೆಗಳು ವ್ಯಕ್ತಿಯ ಜೀವನದಲ್ಲಿ ಶಿಸ್ತು ಮೂಡಿಸುವ ಜೊತೆಗೆ ಉತ್ತಮ ಆಹಾರ ಪದ್ಧತಿ ರೂಢಿಸಿಕೊಳ್ಳಲು, ಅಲ್ಲದೇ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಸಹಾಯಕಾರಿಯಾಗಿದೆ. ಆದ್ದರಿಂದ ಎಲ್ಲರೂ ಪ್ರತಿದಿನ ಒಂದು ಗಂಟೆ ದೈಹಿಕ ಕಸರತ್ತಿನ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಬಾಡಿ ಬಿಲ್ಡಿಂಗ್ ದೇಹವನ್ನು ಸದೃಢವಾಗಿಟ್ಟುಕೊಳ್ಳಲು ಸಹಕಾರಿಯಾದ ಕ್ರೀಡೆ. ಕ್ರೀಡೆಗೆ ಹೆಸರಾದ ನಂಜನಗೂಡಿನಲ್ಲಿ ದೇಹದಾರ್ಢ್ಯ ಸ್ಪರ್ಧೆಯನ್ನು ಆಯೋಜಕರು ವ್ಯವಸ್ಥಿತವಾಗಿ ಆಯೋಜಿಸುವ ಮೂಲಕ ಸ್ಥಳೀಯ ಪ್ರತಿಭೆಗಳಿಗೆ ಅವಕಾಶ ಕಲ್ಪಿಸಿರುವುದು ಉತ್ತಮ ಬೆಳವಣಿಗೆಯಾಗಿದೆ. ಮುಂದಿನ ದಿನಗಳಲ್ಲಿ ಜಿಲ್ಲಾಮಟ್ಟದ ದೇಹದಾರ್ಢ್ಯ ಸ್ಪರ್ಧೆ ಆಯೋಜಿಸಲು ನಾನು ಸಹಕಾರ ನೀಡುತ್ತೇನೆ. ಸ್ಪರ್ಧೆಯಲ್ಲಿ ಭಾಗವಹಿಸಿರುವ ಸ್ಪರ್ಧಿಗಳು ಜಿಮ್‌ನಲ್ಲಿ ಸಮಯ ಕಳೆದು ಶ್ರಮಪಟ್ಟು ಅದ್ಭುತ ಪ್ರದರ್ಶನ ನೀಡುವ ಮೂಲಕ ಸಭಿಕರನ್ನು ರಂಜಿಸಿದ್ದಾರೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮೊದಲ ಬಹುಮಾನ ಪಡೆದ ನಂಜುಂಡಸ್ವಾಮಿ ಅವರಿಗೆ 10 ಸಾವಿರ ನಗದು ಬಹುಮಾನ ಮತ್ತು 'ಮಿಸ್ಟರ್ ನಂಜನಗೂಡು' ಟೈಟಲ್ ನೀಡಿ ಗೌರವಿಸಲಾಯಿತು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಕೆಪಿಸಿಸಿ ಕಾರ್ಯದರ್ಶಿ ಎಸ್.ಸಿ.ಬಸವರಾಜು, ಕೆಪಿಸಿಸಿ ಸದಸ್ಯ ಅಕ್ಬರ್ ಅಲಿ, ವಿಶ್ವಕರ್ಮ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್, ನಗರಸಭಾ ಸದಸ್ಯ ಗಾಯತ್ರಿ ಮೋಹನ್, ಮುಖಂಡರಾದ ಅಭಿನಂದನ್ ಪಟೇಲ್, ದೇಹದಾರ್ಢ್ಯ ಸ್ಪರ್ಧೆ ಆಯೋಜಕರಾದ ಪುನೀತ್, ಸುಧಾಕರ್, ರಘು, ಜಯಂತ್, ಮಂಜುನಾಥ್ ಸೇರಿದಂತೆ ಹಲವರು ಇದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ



ಜಯಪುರದ ಸರ್ಕಾರಿ ಪ್ರಾಥಮಿಕ ಶಾಲಾವರಣದಲ್ಲಿ ಮೈಸೂರು ಜೆಎಸ್‌ಎಸ್ ಆಯುರ್ವೇದ ಕಾಲೇಜು, ರೋಟರಿ ಮತ್ತು ಜಿಪಂ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು. ಶಿಬಿರದಲ್ಲಿ 250 ಮಂದಿ ತಪಾಸಣೆಗೆ ಒಳಪಟ್ಟರು. ಈ ವೇಳೆ ಜಯಪುರ ಗ್ರಾಪಂ ಅಧ್ಯಕ್ಷ ಎಂ.ಮಾದೇವಮ್ಮ, ಪಿಡಿಒ ಬಸವಣ್ಣ, ಮುಖಂಡರಾದ ಬಸವಣ್ಣ, ನಾಗರಾಜು, ಮೈಸೂರು ಜೆಪಿ ರೋಟರಿ ಕ್ಲಬ್ ಅಧ್ಯಕ್ಷ ಕೃಷ್ಣ ಅರಸ್, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ.ಶಶಿಬಿಂದು, ವೈದ್ಯರಾದ ಡಾ.ಮಾನಸ, ಡಾ.ವಿಶಾಲ್ ಎಸ್.ಕುಮಾರ್, ಡಾ.ಆದಿತ್ಯ ಡಾ.ನೇತ್ರಾ, ಡಾ.ಛಾಯಾ, ಡಾ.ಲಕ್ಷ್ಮಿ, ಡಾ.ವಿದ್ಯಾಶ್ರೀ ಮತ್ತು ಸಿಬ್ಬಂದಿ ಹಾಜರಿದ್ದರು.

ಸಂಭ್ರಮದ ಶ್ರೀಚಿಕ್ಕದೇವಮ್ಮನವರ ಜಾತ್ರಾ ಮಹೋತ್ಸವ



ಕುಂದೂರಲ್ಲಿ ಶ್ರೀಚಿಕ್ಕದೇವಮ್ಮನವರ ಜಾತ್ರಾ ಮಹೋತ್ಸವ ನಡೆಯಿತು.

ಸರಗೂರು, ಜ.13– ತಾಲೂಕಿನ ಕುಂದೂರು ಗ್ರಾಮದಲ್ಲಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಶ್ರೀಚಿಕ್ಕದೇವಮ್ಮನವರ ಜಾತ್ರಾ ಮಹೋತ್ಸವ ಸೋಮವಾರ ವಿಜೃಂಭಣೆಯಿಂದ ನೆರವೇರಿತು.

ಜಾತ್ರೆ ಹಿನ್ನೆಲೆಯಲ್ಲಿ ದೇವಾಲಯವನ್ನು ತಳಿರು ತೋರಣ, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಭಾನುವಾರ ರಾತ್ರಿ ಚಿಕ್ಕದೇವಮ್ಮನವರ ಉತ್ಸವ ಮೂರ್ತಿಯನ್ನು ಬೆಟ್ಟದಿಂದ ತಂದು ಕುಂದೂರು ಗ್ರಾಮದಲ್ಲಿ ಮೆರವಣಿಗೆ ನಡೆಸಿದ ಬಳಿಕ ಜಾತ್ರಾಮಾಳದಲ್ಲಿ ಇರಿಸಲಾಗಿತ್ತು. ಸೋಮವಾರ ಮುಂಜಾನೆ ರಕ್ತ ಬೀಜಾಸುರನ ಸಂಹಾರ ಮಾಡಿದ ನಂತರ ವಿವಿಧ ಧಾರ್ಮಿಕ ಕಾರ್ಯಗಳು ನಡೆದವು. ಇದೇ ವೇಳೆ ಭಕ್ತರು ಹರಕೆ ತೀರಿಸಿ, ವಿಶೇಷ ಪೂಜೆ ಸಲ್ಲಿಸಿದರು.

ತಹಸೀಲ್ದಾರ್ ಮೋಹನಕುಮಾರಿ ಮುಂಜಾಗ್ರತಾ ಕ್ರಮವಾಗಿ ಭಕ್ತರಿಗೆ ಎಲ್ಲಾ ರೀತಿಯ ಮೂಲಸೌಕರ್ಯ ಕಲ್ಪಿಸಿದ್ದರು. ಜಾತ್ರೆಯಲ್ಲಿ ತಿಂಡಿ ತಿನಿಸು, ದಿನಬಳಕೆ ವಸ್ತುಗಳು, ಮಕ್ಕಳ ಆಟಿಕೆ ಸೇರಿದಂತೆ ಇನ್ನಿತರ ಅಂಗಡಿ ಮುಂಗಟ್ಟುಗಳನ್ನು ತೆರೆಯಲಾಗಿತ್ತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಸರಗೂರು ಠಾಣೆ ಎಸ್‌ಐ ನಂದೀಶ್ ಕುಮಾರ್ ಹಾಗೂ ಸಿಬ್ಬಂದಿ ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.

ಇದೇ ವೇಳೆ ದೇವಾಲಯದ ಇಒ ರಘು, ಪಾರುಪತ್ತೇದಾರ ಮಹದೇವಸ್ವಾಮಿ, ತಾಲೂಕು ಆರೋಗ್ಯಾಧಿಕಾರಿ ಟಿ.ರವಿಕುಮಾರ್, ಕಲ್ಲಂಬಾಳು ಗ್ರಾಪಂ ಅಧ್ಯಕ್ಷೆ ಭಾಗ್ಯ, ಉಪಾಧ್ಯಕ್ಷೆ ಮಂಜುಳ ಶಿವಮೂರ್ತಿ, ಸದಸ್ಯ ಮಹೇಶ್, ಚೆನ್ನಸ್ವಾಮಿ, ಕುಂದೂರು ಯಜಮಾನ ಪುಟ್ಟ ಮಹದೇವಗೌಡ, ದಡದಹಳ್ಳಿ ಯಜಮಾನ ಮುದ್ದೇಗೌಡ, ಮುಖಂಡರಾದ ಸಿ.ಕೆ.ಗಿರೀಶ, ಸಿದ್ದರಾಜು, ದೇವಸ್ಥಾನದ ಗುತ್ತಿಗೆದಾರ ಮೂರ್ತಿ, ಶಿವಾರ್ಚಕರು ಭಾಗವಹಿಸಿದ್ದರು.

ಹೆಚ್.ಡಿ.ಕೋಟೆ: ಆಸ್ಪತ್ರೆಗೆ ಜಿಲ್ಲಾ ಆರೋಗ್ಯಾಧಿಕಾರಿ ಭೇಟಿ, ಪರಿಶೀಲನೆ



ಸಾರ್ವಜನಿಕ ಆಸ್ಪತ್ರೆಗೆ ಜಿಲ್ಲಾ ಆರೋಗ್ಯಾಧಿಕಾರಿ ಭೇಟಿ ನೀಡಿ ಪರಿಶೀಲಿಸಿದರು.

ಹೆಚ್.ಡಿ.ಕೋಟೆ, ಜ.13– ಪಟ್ಟಣದ ಸಾರ್ವಜನಿಕ ಆಸ್ಪತ್ರೆ, ತಾಯಿ ಮಕ್ಕಳ ಆಸ್ಪತ್ರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಆಸ್ಪತ್ರೆಗೆ ಭೇಟಿ ನೀಡಿದ ಅವರು ಆಸ್ಪತ್ರೆ ಸ್ವಚ್ಛತೆ, ವೈದ್ಯಾಧಿಕಾರಿ ಮತ್ತು ಸಿಬ್ಬಂದಿಗಳ ಬಯೋಮೆಟ್ರಿಕ್ ಹಾಜರಾತಿ, ಹೆರಿಗೆ ಕೊಠಡಿ, ಪ್ರಯೋಗ ಶಾಲೆ, ಪ್ರಸಕ್ತ ಸಾಲಿನಲ್ಲಿ ಹೆರಿಗೆ ಆಗಿರುವ ಬಗ್ಗೆ ದಾಖಲಾತಿ, ಆಂಬುಲೆನ್ಸ್ ಸೇವೆಯನ್ನು ಪರಿಶೀಲಿಸಿದರು.

ಈ ವೇಳೆ ಮಾತನಾಡಿದ ಅವರು ತಾಲೂಕಿನಲ್ಲಿ ಹೆಚ್ಚಿನ ಜನಸಂಖ್ಯೆ ಇದ್ದು, ಹೆಚ್ಚು ಹಾಡಿಗಳನ್ನು ಹೊಂದಿದೆ. ಹೀಗಾಗಿ ಜನರಿಗೆ ಹೆಚ್ಚಿನ ಸೇವೆ ನೀಡಬೇಕು. ಅಲ್ಲದೇ 15 ದಿನಗಳ ಒಳಗೆ ಆಗುವ ಹೆರಿಗೆ ಪ್ರಮಾಣ, ಇಡಿಡಿ ಲಿಸ್ಟ್‌ಗಳ ಮ್ಯಾಪಿಂಗ್ ಮಾಡಬೇಕು. ಹೆಚ್‌ಆರ್‌ಪಿ ಲಿಸ್ಟ್ ನೀಡಬೇಕು. ಆಸ್ಪತ್ರೆಯನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಎಲ್ಲಾ ರಾಷ್ಟ್ರೀಯ ಕಾರ್ಯಕ್ರಮಗಳ ಪ್ರಗತಿ ಸಾಧಿಸಬೇಕು. ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಸಮಯಕ್ಕೆ ಸರಿಯಾಗಿ ಕರ್ತವ್ಯಕ್ಕೆ ಹಾಜರಾಗಿ ಬಯೋಮೆಟ್ರಿಕ್ ಹಾಜರಾತಿಯನ್ನು ಕಡ್ಡಾಯವಾಗಿ ಹಾಕಬೇಕು. ಮುಂದಿನ ದಿನಗಳಲ್ಲಿ ಯಾವುದೇ ದೂರು ಬಾರದ ಹಾಗೆ ನೋಡಿಕೊಳ್ಳಬೇಕು ಎಂದರು.

ಈ ವೇಳೆ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಶ್ರೀನಿವಾಸ್, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಪೂರ್ಣಿಮಾ ಮತ್ತು ಸಿಬ್ಬಂದಿ ವರ್ಗ ಇನ್ನಿತರರಿದ್ದರು.

ಆರೋಹಣ ಸೆಂಟ್ರಲ್ ಶಾಲೆಗೆ ಸಿಬಿಎಸ್‌ಸಿ ಮಾನ್ಯತೆ

ಶಾಲೆ ಅಧ್ಯಕ್ಷ ವೈ.ಹೆಚ್.ಹನುಮಂತೇಗೌಡ ಮಾಹಿತಿ



ಸುದ್ದಿಗೋಷ್ಠಿಯಲ್ಲಿ ಶಾಲೆ ಅಧ್ಯಕ್ಷ ವೈ.ಎಚ್.ಹನುಮಂತೇಗೌಡ ಮಾತನಾಡಿದರು.

ತಿ.ನರಸೀಪುರ, ಜ.13– ಗ್ರಾಮೀಣ ಬಡ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಬೇಕೆಂಬ ಉದ್ದೇಶದೊಂದಿಗೆ ಆರಂಭಗೊಂಡಿರುವ ಆರೋಹಣ ಸೆಂಟ್ರಲ್ ಶಾಲೆಗೆ ಸಿಬಿಎಸ್‌ಸಿ ಮಾನ್ಯತೆ ದೊರಕಿದೆ ಎಂದು ಶಾಲೆ ಅಧ್ಯಕ್ಷ ವೈ.ಹೆಚ್.ಹನುಮಂತೇಗೌಡ ತಿಳಿಸಿದರು.

ತಾಲೂಕಿನ ಕುಳ್ಳನಕೊಪ್ಪಲು ಗ್ರಾಮದ ಗೇಟ್ ಬಳಿಯ ಆರೋಹಣ ಸೆಂಟ್ರಲ್ ಸ್ಕೂಲ್ ಆವರಣದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಬೇಕೆಂಬ ಉದ್ದೇಶದೊಂದಿಗೆ ಕಳೆದ 5 ವರ್ಷಗಳ ಹಿಂದೆ ಆರಂಭವಾದ ಶಾಲೆಗೆ ಸಿಬಿಎಸ್‌ಸಿ ಮಾನ್ಯತೆ ದೊರಕಿದ್ದು, ಮುಂಬರುವ ಶೈಕ್ಷಣಿಕ ವರ್ಷದಿಂದ ಕೇಂದ್ರದ ಪಠ್ಯಕ್ರಮ ಅಳವಡಿಸಿಕೊಳ್ಳುವ ಮೂಲಕ ಮಕ್ಕಳಿಗೆ ಅನುಕೂಲ ಕಲ್ಪಿಸಲಾಗುವುದು. ಗ್ರಾಮೀಣ ಭಾಗದ ಪೋಷಕರು ದೊರಕಿರುವ ಅವಕಾಶ ಸದ್ಬಳಕೆ ಮಾಡಿಕೊಳ್ಳುವ ಮೂಲಕ ಮಕ್ಕಳ ವಿದ್ಯಾಭ್ಯಾಸವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುವ ಜೊತೆಗೆ ಸಂಸ್ಥೆ ಏಳಿಗೆಗೆ ಉತ್ತೇಜನ ನೀಡುವಂತೆ ಮನವಿ ಮಾಡಿದರು.

ಸಂಸ್ಥೆ ಗೌರವ ಕಾರ್ಯದರ್ಶಿ ಬಿ.ಎಸ್.ಯೋಗೇಂದ್ರ ಮಾತನಾಡಿ, ಆರೋಹಣ ಸೆಂಟ್ರಲ್ ಸ್ಕೂಲ್ ಹಲವಾರು ವಿಶೇಷತೆಗಳೊಂದಿಗೆ ಉತ್ತಮ ಸಾಧನೆಯತ್ತ ದಾಪುಗಾಲು ಹಾಕುತ್ತಿದೆ. ಗ್ರಾಮೀಣ ಮಕ್ಕಳಿಗೆ ಅತ್ಯುತ್ತಮ, ಗುಣಮಟ್ಟದ ಶಿಕ್ಷಣ ಕೊಡಬೇಕೆಂಬ ಮಹದಾಸೆಯಿಂದ ಹಾಗೂ ವಿದ್ಯಾರ್ಥಿಗಳಲ್ಲಿರುವ ಸಾಮರ್ಥ್ಯ ಸರಿಯಾದ ರೀತಿ ಸದ್ಬಳಕೆ ಮಾಡಿ ಕೊಳ್ಳಬೇಕೆಂಬ ಉದ್ದೇಶದೊಂದಿಗೆ ಶಾಲೆ ಸ್ಥಾಪಿತವಾಗಿ ಅದರಲ್ಲಿ ತನ್ನ ಗುರಿ ಮುಟ್ಟಿದೆ ಎಂಬ ಅಭಿಪ್ರಾಯ ನಮ್ಮದಾಗಿದೆ. ಇತ್ತೀಚೆಗೆ ಎನ್‌ಇಪಿಯ ಸಂಪೂರ್ಣ ಮಾಹಿತಿ, ಗುಣಾತ್ಮಕ ವಿಷಯಗಳನ್ನು ನಮ್ಮ ವಿದ್ಯಾರ್ಥಿಗಳಿಗೆ ನೀಡಬೇಕೆಂಬುದು ಹಾಗೂ ಈ ಹಂತದಲ್ಲಿ ಸರ್ವ ಸನ್ನದ್ಧವಾದ ಮೂಲ ಸೌಕರ್ಯಗಳನ್ನು ಜೊತೆಗೆ ನೀಡಬೇಕೆಂಬುದು ನಮ್ಮ ಪ್ರಮುಖ ಗುರಿಯಾಗಿದೆ ಎಂದರು.

ಮೊದಲ ಸಿಬಿಎಸ್‌ಸಿ ಶಾಲೆ ನಮ್ಮದೆ: ಬನ್ನೂರು ಹಾಗೂ ಸೋಸಲೆ ಹೋಬಳಿಯಲ್ಲಿ ಮೊದಲ ಸಿಬಿಎಸ್‌ಸಿ ಮಾನ್ಯತೆ ನಮ್ಮ ಆರೋಹಣ ಸೆಂಟ್ರಲ್ ಸ್ಕೂಲ್‌ಗೆ ದೊರಕಿದೆ ಎಂಬ ಹೆಮ್ಮೆ ನಮಗಿದೆ. ತಿ.ನರಸೀಪುರದಲ್ಲಿ ಕೆಲವು ಶಾಲೆಗಳಿಗೆ ಮಾನ್ಯತೆ ದೊರಕಿದೆ. ಅದನ್ನು ಬಿಟ್ಟರೆ ನಮ್ಮ ಶಾಲೆಗೆ ಮಾತ್ರವೇ ಮಾನ್ಯತೆ ದೊರಕಿದ್ದು, ಪೋಷಕರು ಇದರ ಸದುಪಯೋಗಕ್ಕೆ ಮುಂದಾಗಬೇಕೆಂದು ಮನವಿ ಮಾಡಿದರು.

ಕ್ಯಾಪಿಟೇಷನ್ ಶುಲ್ಕ, ಡೊನೇಷನ್ ಇಲ್ಲ: ಗ್ರಾಮೀಣ ಪ್ರದೇಶದ ಪೋಷಕರ ಆರ್ಥಿಕ ಪರಿಸ್ಥಿಗೆ ಅನುಗುಣವಾಗಿ ಸಿಬಿಎಸ್‌ಸಿ ಶಾಲೆಯಾದರೂ ಕೂಡ ಮೂಲ ಸೌಕರ್ಯಕ್ಕಷ್ಟೇ ಶುಲ್ಕ ಪಡೆಯುತ್ತಿದ್ದೇವೆ. ಯಾವುದೇ ಕ್ಯಾಪಿಟೇಶನ್ ಶುಲ್ಕ ಡೊನೇಷನ್ ಪಡೆಯುತ್ತಿಲ್ಲ ಎಂದರು.

ಶಾಲೆ ಖಜಾಂಚಿ ಮಾಣಕ್ ಚಂದ್ ಚೌಧರಿ, ಪ್ರಾಂಶುಪಾಲೆ ಬಿ.ವಿಮಲ ಸುದ್ದಿಗೋಷ್ಠಿಯಲ್ಲಿದ್ದರು.

> ನಗರ ಪ್ರದೇಶದ ವಿದ್ಯಾರ್ಥಿಗಳಿಗೆ ದೊರೆಯುತ್ತಿರುವ ಸೌಲಭ್ಯಗಳು ಗ್ರಾಮೀಣ ಮಕ್ಕಳಿಗೂ ನಮ್ಮ ಶಾಲೆಯಲ್ಲಿ ದೊರಕಿಸಿಕೊಡಲಾಗಿದೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಕೇಂದ್ರ ಪಠ್ಯಕ್ರಮ ಅಳವಡಿಸಿಕೊಳ್ಳಲಾಗುತ್ತದೆ. ಅಲ್ಲದೇ ಹೊಸ ಬಸ್ ರೂಟ್‌ಗಳನ್ನು ಅಳವಡಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿಕೊಡಲಾಗುತ್ತದೆ. ಇಡೀ ಶಾಲೆಗೆ 24*7 ಸಿಸಿ ಕ್ಯಾಮರಾ ಅಳವಡಿಸಿ ಎಲ್ಲಾ ತರಗತಿ ವಾಚ್ ಮಾಡುವ ವ್ಯವಸ್ಥೆ ಮಾಡಲಾಗಿದೆ. ಮಕ್ಕಳಿಗೆ ಶುದ್ಧ ಆರ್‌ಓ ವಾಟರ್ ಒದಗಿಸಿಕೊಡಲಾಗುತ್ತಿದೆ.
>
> -ಎನ್.ಎಂ.ರಾಮಚಂದ್ರ, ಶಾಲೆ ಕಾರ್ಯದರ್ಶಿ.

ಟ್ಯಾಲೆಂಟ್ ಶಾಲೆಯಲ್ಲಿ ಸಂಕ್ರಾಂತಿ ವೈಭವ



ಟ್ಯಾಲೆಂಟ್ ಶಾಲೆಯಲ್ಲಿ ಸಂಕ್ರಾಂತಿ ವೈಭವ ನಡೆಯಿತು.

ಹುಣಸೂರು, ಜ.13– ನಗರದ ಟ್ಯಾಲೆಂಟ್ ಶಿಕ್ಷಣ ಸಂಸ್ಥೆಯಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ರಾಗಿ, ಭತ್ತದ ರಾಶಿ ಹಾಗೂ ಹಸುಗಳಿಗೆ ಪೂಜೆ ನೆರವೇರಿಸಿ ಕಿಚ್ಚು ಹಾಯಿಸುವ ಮೂಲಕ ಸಂಕ್ರಾಂತಿ ವೈಭವವನ್ನು ಆಚರಿಸಲಾಯಿತು.

ತಳಿರು ತೋರಣಗಳಿಂದ ಸಿಂಗರಿಸಿದ ಶಾಲೆ ಸುಗ್ಗಿ ಸಂಭ್ರಮ ಮೆರೆಸುವಂತಿತ್ತು. ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸಂಭ್ರಮದಲ್ಲಿ ಭಾಗವಹಿಸಿದ್ದರು. ಆ ಮೂಲಕ ವಿದ್ಯಾರ್ಥಿಗಳಿಗೆ ಸಂಕ್ರಾಂತಿ ಹಬ್ಬದ ವಿಶೇಷತೆ, ಅದರ ಮಹತ್ವದ ಬಗ್ಗೆ ಅರಿವು ಮೂಡಿಸಲಾಯಿತು.

ಸಂಸ್ಥೆ ಸಂಸ್ಥಾಪಕ ನಿರ್ದೇಶಕ ನವೀನ್ ರೈ ಮಾತನಾಡಿ, ಪ್ರಸ್ತುತ ಸಂಕ್ರಾಂತಿ ಹೈಟೆಕ್ ಆಗಿದೆ. ಬೆಳಗ್ಗೆ ಪೂಜೆ ಮಾಡಿ ಎಳ್ಳು ಬೆಲ್ಲ ತಿಂದು ನಗರಕ್ಕೆ ಹೋಗಿ ಮಾಲ್‌ಗಳಲ್ಲಿ ಮಂದಿರಗಳಲ್ಲಿ ಸುತ್ತಾಡಿ ಬಂದರೆ ಸಂಕ್ರಾಂತಿ ಅಲ್ಲ. ನಮ್ಮ ಹಿರಿಯರು ವರ್ಷ ಪೂರ್ತಿ ಮಳೆ ಚಳಿ ಎನ್ನದೇ ಸಾಲ ಸೋಲ ಮಾಡಿ ಬೆಳೆದ ಬೆಳೆ, ದನಕರುಗಳನ್ನು ಪೋಷಣೆ ಮಾಡಿ ಫಸಲು ಬಂದ ನಂತರ ಪೂಜಿಸಿ ಮನೆಗೆ ತರುವ ಈ ಸುದಿನ. ಅಲ್ಲದೇ ತಾನು ಬೆಳೆದ ಭತ್ತ ಕುಟ್ಟಿ ಅಕ್ಕಿ ಮಾಡಿ ಪಾಯಸ, ಪೊಂಗಲ್ ಮಾಡಿ ಸಂಭ್ರಮಿಸುವ ದಿನವೇ ಸಂಕ್ರಾಂತಿ. ಈ ವಿಶೇಷ ಹಳ್ಳಿ ಭಾಗದಲ್ಲಿ ಇನ್ನೂ ಜೀವಂತವಾಗಿದೆ. ಇದನ್ನು ಯುವ ಪೀಳಿಗೆ ತಿಳಿಯಬೇಕು ಎಂದರು. ಇದೇ ವೇಳೆ ಹಬ್ಬದ ಸಂಭ್ರಮದಲ್ಲಿ ಎಳ್ಳು–ಬೆಲ್ಲ ಹಂಚಲಾಯಿತು.

ನಿರ್ದೇಶಕರಾದ ಮಂಜುನಾಥ್, ಶಾಲೆ ಪ್ರಾಂಶುಪಾಲ ಎಂ.ಟಿ.ಮಂಜುನಾಥ್ ಹಾಗೂ ಶಿಕ್ಷಕರಿದ್ದರು.

ಹನಗೋಡಲ್ಲಿ ಸ್ವಾಮಿ ವಿವೇಕಾನಂದ ಜಯಂತಿ



ಹನಗೋಡಿನ ಶ್ರೀಲಕ್ಷ್ಮಣತೀರ್ಥ ವಿದ್ಯಾಸಂಸ್ಥೆಯಲ್ಲಿ ಸ್ವಾಮಿ ವಿವೇಕಾನಂದ ಜಯಂತಿ ಆಚರಿಸಲಾಯಿತು. ಈ ವೇಳೆ ಶಾಲಾ ಮುಖ್ಯಸ್ಥ ನಟರಾಜ್, ಶಿಕ್ಷಕ ವೃಂದ, ಮಕ್ಕಳು ಉಪಸ್ಥಿತರಿದ್ದರು.

ದೊಡ್ಡ ತಮ್ಮನಾಯಕ ನಿಧನ



ಹುಣಸೂರು, ಜ.13– ಹಿರಿಯ ರಂಗ ಕಲಾವಿದ, ನಿವೃತ್ತ ಮುಖ್ಯ ಶಿಕ್ಷಕ ಹಾಗೂ ನಗರದ ಕಲ್ಕುಣಿಕೆ ನಿವಾಸಿ ದೊಡ್ಡ ತಮ್ಮನಾಯಕ (ಡಿಟಿಎನ್ 80) ಸೋಮವಾರ ಸಂಜೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು, ಅಳಿಯಂದಿರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ ನಗರದ ಕಲ್ಕುಣಿಕೆ ನಾಯಕ ಸಮಾಜದ ಸ್ಮಶಾನದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾ.ಡಿಸೋಜ, ಪ್ರೊ.ಮುಜಾಫರ್ ಅಸ್ಸಾದಿ ಅವರಿಗೆ ವಿವಿಧ ಸಂಘಟನೆಗಳಿಂದ ನುಡಿನಮನ



ನಾಡೋಜ ನಾ.ಡಿಸೋಜ ಮತ್ತು ಪ್ರೊ.ಮುಜಾಫರ್ ಅಸ್ಸಾದಿ ಅವರಿಗೆ ನುಡಿನಮನ ಸಲ್ಲಿಸಲಾಯಿತು.

ಮೈಸೂರು, ಜ.13(ಎಂಕೆ)– ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ನಗರ ಹಾಗೂ ಕನ್ನಡ ಸಾಹಿತ್ಯ ಕಲಾಕೂಟದ ವತಿಯಿಂದ ಇತ್ತೀಚೆಗೆ ನಿಧನರಾದ ನಾಡೋಜ ನಾ.ಡಿಸೋಜ ಮತ್ತು ಪ್ರೊ.ಮುಜಾಫರ್ ಅಸ್ಸಾದಿ ಅವರಿಗೆ ನುಡಿನಮನ ಸಲ್ಲಿಸಲಾಯಿತು.

ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಜಿಲ್ಲಾ ಕಸಾಪ ಸಾಹಿತ್ಯ ಭವನದಲ್ಲಿ ಸೋಮವಾರ ನಡೆದ ನುಡಿನಮನ ಕಾರ್ಯಕ್ರಮದಲ್ಲಿ ಇಬ್ಬರು ಮಹನೀಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಮೌನಾಚರಣೆ ಮೂಲಕ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಬಳಿಕ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ಮುಜಾಫರ್ ಅಸ್ಸಾದಿ ಅವರು ನಮ್ಮೊಂದಿಗೆ ಉತ್ತಮ ಒಡನಾಟ ಹೊಂದಿದ್ದರು. ಅವರಿಗೆ ಪ್ರತಿಭೆ ಇದ್ದರೂ ಸಿಗಬೇಕಾದ ಗೌರವ, ಮನ್ನಣೆ ಸಿಗಲಿಲ್ಲ. ಜಾತಿ ಮತ್ತು ಧರ್ಮದ ವಿಚಾರವಾಗಿ ಅವಕಾಶಗಳಿಂದ ವಂಚಿತರಾದರು. ರಾಜ್ಯಪಾಲರೇ ನಿರಾಕರಿಸಿದ್ದ ಅಸ್ಸಾದಿಯವರಿಗೆ ಕುಲಪತಿ ಹುದ್ದೆ ದೊರೆಯಲಿಲ್ಲ ಎಂದು ಬೇಸರ ವ್ಯಕ್ತಪಡಿಸುತ್ತಾ ನಾಡೋಜ ನಾ.ಡಿಸೋಜ ಅವರು ಕೂಡ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಅವರನ್ನು ಸ್ಮರಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

ಸಾಹಿತಿ ಕಾಳೇಗೌಡ ನಾಗವಾರ ಮಾತನಾಡಿ, ಸರ್ವ ಜನಾಂಗದ ಶಾಂತಿಯ ತೋಟದಲ್ಲಿ ಪ್ರೊ.ಮುಜಾಫರ್ ಅಸ್ಸಾದಿ ಅವರಿಗೆ ದೊರೆಯಬೇಕಾದ ಸ್ಥಾನಮಾನ, ಮನ್ನಣೆ ದೊರೆಯಲಿಲ್ಲ. ಹಿರಿಯರಾದ ಡಿಸೋಜ ಅವರಿಂದ ನಾವು ಕಲಿತದ್ದು ಜಾಸ್ತಿ. ಸಣ್ಣ ಗುಮಾಸ್ತರಾಗಿದ್ದ ಅವರು ಮಲೆನಾಡಿನಲ್ಲಿ ಮಾತ್ರವಲ್ಲದೆ ನಾಡಿನ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ಹಲವು ಹೋರಾಟಗಳಲ್ಲಿಯೂ ಭಾಗಿಯಾಗಿದ್ದು, ಅವರ ಪ್ರಭಾವಕ್ಕೆ ಒಳಗಾಗಿದ್ದೇವೆ. ತಾಳ್ಮೆಯ ಮಹಾಮೂರ್ತಿಯಾಗಿದ್ದರು ಎಂದು ಸ್ಮರಿಸಿದರು.

ಸಾಮಾಜಿಕ ನ್ಯಾಯದ ಪರವಾಗಿದ್ದ ಪ್ರಾಧ್ಯಾಪಕರು...

ಅಸ್ಸಾದಿ ಅವರೊಬ್ಬರು ಪ್ರಾಮಾಣಿಕ, ಸಾಮಾಜಿಕ ಕಾಳಜಿ, ಪ್ರಜ್ಞೆ ಮತ್ತು ನ್ಯಾಯದ ಪರವಾಗಿದ್ದಂತಹ ವಿಶಿಷ್ಟ ಪ್ರಾಧ್ಯಾಪಕರು. ಹೈಕೋರ್ಟ್ ನೇಮಿಸಿದ್ದ ಸಮಿತಿಯ ಅಧ್ಯಕ್ಷರಾಗಿ ಬುಡಕಟ್ಟು ಸಮುದಾಯದ ಮೂಲ ಸಮಸ್ಯೆಗಳೇನು, ಅವರಿಗೆ ಸಿಗಬೇಕಾದ ಹಕ್ಕುಬಾಧ್ಯತೆಗಳೇನು ಎಂಬುದನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಿದ್ದರು. ಆ ವರದಿಯನ್ನು ಸರ್ಕಾರ ಪರಿಗಣಿಸದಿರುವುದು ವಿಷಾದನೀಯ.

- ಜನಾರ್ದನ್(ಜನ್ನಿ), ರಂಗಕರ್ಮಿ

ವಿಶ್ರಾಂತ ಕುಲಪತಿ ಪ್ರೊ.ಸಬಿಹಾ ಭೂಮಿಗೌಡ ಮಾತನಾಡಿ, ಇಬ್ಬರು ಹಿರಿಯ ಜೀವಗಳು ನಮ್ಮ ನಡುವೆ ಇಲ್ಲದಿರುವುದು ನೋವು ತಂದರೂ ಅವರ ಸಾಧನೆಯನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಇಬ್ಬರೂ ಕೂಡ ಅಲ್ಪಸಂಖ್ಯಾತ ಸಮುದಾಯದಿಂದ ಬಂದವರಾಗಿದ್ದು, ಎಲ್ಲಿಯೂ ಅಬ್ಬರಿಸದೇ ತಮ್ಮ ಕೆಲಸದಿಂದ ಜನಮಾನಸಗೊಂಡವರು ಎಂದು ಬಣ್ಣಿಸಿದರು.

ನಾ.ಡಿಸೋಜ ಅವರು ತಮ್ಮ ಬರವಣಿಗೆ ಮೂಲಕ ಮಾನವೀಯತೆಯ ಸಂದೇಶಗಳನ್ನು ನೀಡುತ್ತಿದ್ದರು. ಬದುಕಿನ ಮಹತ್ವವನ್ನು ತಿಳಿಸಿಕೊಡುತ್ತಿದ್ದರು. ಅವರ ಬಹುತೇಕ ಬರವಣಿಗೆ ಪ್ರಕೃತಿ, ಮನುಷ್ಯನ ಜೀವನ ಕುರಿತಾಗಿದೆ. ಹಾಗೆಯೇ ಅಸ್ಸಾದಿ ಅವರು ಅಂಕಣಗಳಿಂದ ಪರಿಚಿತರಾಗಿದ್ದು, ಅವರಲ್ಲಿ ದೊಡ್ಡ ಮಟ್ಟದ ಪ್ರತಿಭೆ ಇದ್ದರೂ ಅತಿಯಾದ ವಿಧೇಯತೆಯನ್ನು ಹೊಂದಿದ್ದರು ಎಂದು ನೆನೆದರು.

ನಿವೃತ್ತ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ.ಜಿ.ಟಿ. ರಾಮಚಂದ್ರ, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಪ್ರಗತಿಪರ ಚಿಂತಕಿ ಸವಿತಾ ಪ.ಮಲ್ಲೇಶ್, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಕರ್ನಾಟಕ ಕಾವಲು ಪಡೆ ರಾಜ್ಯಾಧ್ಯಕ್ಷ ಮೋಹನ್ ಕುಮಾರ್ ಗೌಡ ಮತ್ತಿತರರು ಉಪಸ್ಥಿತರಿದ್ದರು.

ಅಸ್ಸಾದಿ ಅವರದ್ದು ಮಾನವೀಯತೆಗೆ ಮಿಡಿಯುವ ಮನಸ್ಸು...

ಪ್ರೊ.ಮುಜಾಫರ್ ಅಸ್ಸಾದಿ ಅವರದ್ದು, ಮಾನವೀಯತೆಗೆ ಮಿಡಿಯುವ ಮನಸ್ಸು. ವೈಜ್ಞಾನಿಕ, ವೈಚಾರಿಕ ಚಿಂತನೆಗಳು ಹಾಗೂ ಸಂವಿಧಾನದ ಆಶಯವನ್ನು ವಿವಿಗಳಲ್ಲಿ ಓದಿಸುವ ಆಸೆ ಅವರಲ್ಲಿತ್ತು. ಬಾಲ್ಯದಲ್ಲಿ ತಾಯಿಯನ್ನು ಕಳೆದುಕೊಂಡಿದ್ದ ಅವರು, ನನಗೆ ಓದಿನ ದೀಕ್ಷೆಯನ್ನು ಅಮ್ಮಕೊಟ್ಟು ಹೋಗಿದ್ದಾರೆ ಎನ್ನುತ್ತಾ ತಮ್ಮ ಸಾಹಿತ್ಯ ಕೃಷಿಯಲ್ಲಿ ತಾಯಿಯನ್ನು ಕಾಣುತ್ತಿದ್ದದ್ದು ವಿಶೇಷ.

- ಪ್ರೊ.ಕೃಷ್ಣ ಹೊಂಬಾಳ್, ರಾಜ್ಯಶಾಸ್ತ್ರ ವಿಭಾಗ, ಮೈಸೂರು ವಿವಿ

ಮೈಸೂರು ವಿವಿ ಸೆಮಿಸ್ಟರ್ ಶುಲ್ಕ ಹೆಚ್ಚಳ ಖಂಡಿಸಿ ಪ್ರತಿಭಟನೆ



ಮೈಸೂರು ವಿಶ್ವವಿದ್ಯಾನಿಲಯ ಸೆಮಿಸ್ಟರ್ ಪರೀಕ್ಷಾ ಶುಲ್ಕ ಹೆಚ್ಚಳ ಮಾಡಿರುವುದನ್ನು ಖಂಡಿಸಿ ಎಐಡಿಎಸ್‌ಓ ವತಿಯಿಂದ ಕ್ರಾಫರ್ಡ್ ಭವನದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜ.13(ಜಿಎ)–ಮೈಸೂರು ವಿಶ್ವವಿದ್ಯಾನಿಲಯ ಸೆಮಿಸ್ಟರ್ ಪರೀಕ್ಷಾ ಶುಲ್ಕ ಹೆಚ್ಚಳ ಮಾಡಿರುವುದನ್ನು ಖಂಡಿಸಿ ಎಐಡಿಎಸ್‌ಓ ವತಿಯಿಂದ ಕ್ರಾಫರ್ಡ್ ಭವನದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಿವಿಧ ಜಿಲ್ಲೆ, ರಾಜ್ಯಗಳಿಂದ ಬಡ– ಮಧ್ಯಮ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳು ಕನಸುಗಳನ್ನು ಹೊತ್ತು ವ್ಯಾಸಂಗಕ್ಕಾಗಿ ಬರುತ್ತಾರೆ. ಆದರೆ, ಮೈಸೂರು ವಿವಿ ತನ್ನ ವ್ಯಾಪಾರಿ ಧೋರಣೆಯಿಂದಾಗಿ ಪ್ರತಿ ವರ್ಷ ಶೇ.10 ಪರೀಕ್ಷಾ ಶುಲ್ಕ ಹೆಚ್ಚಿಸುತ್ತಿರುವುದರಿಂದ ಪ್ರಸ್ತುತ ಮತ್ತು ಭವಿಷ್ಯದಲ್ಲಿ ಉನ್ನತ ಶಿಕ್ಷಣದಿಂದ ಬಡ ವಿದ್ಯಾರ್ಥಿಗಳು ದೂರ ಉಳಿಯುವುದರಲ್ಲಿ ಯಾವುದೇ ಸಂದೇಹವಿಲ್ಲ. ಒಂದು ಸೆಮಿಸ್ಟರ್ ಪರೀಕ್ಷಾ ಶುಲ್ಕ 3300 ದಾಟಿದೆ. ಎಷ್ಟೋ ಸರ್ಕಾರಿ ಕಾಲೇಜುಗಳಲ್ಲಿ ವಾರ್ಷಿಕ ಶುಲ್ಕ 3–4 ಸಾವಿರ ಇದೆ. ಆದರೆ, ಇಲ್ಲಿ ದುಬಾರಿ ಪರೀಕ್ಷಾ ಶುಲ್ಕ ವಿಧಿಸಲಾಗಿದೆ. ಬಹುಸಂಖ್ಯಾತ ವಿದ್ಯಾರ್ಥಿಗಳು ಹಾಗೂ ಪೋಷಕರು ಆರ್ಥಿಕ ಬಿಕ್ಕಟ್ಟಿನಿಂದಾಗಿ ಶುಲ್ಕ ಪಾವತಿ ಮಾಡಲು ಅಸಾಧ್ಯವಾಗಿದ್ದು, ವಿದ್ಯಾರ್ಥಿಗಳ ಶಿಕ್ಷಣದ ನಿರಂತರತೆಯ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ ಎಂದು ಕಿಡಿ ಕಾರಿದರು.

ಪ್ರತಿಯೊಬ್ಬ ಬಡ ವಿದ್ಯಾರ್ಥಿಗಳಿಗೂ ಶಿಕ್ಷಣ ಸಿಗಬೇಕೆಂಬುದು ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆಯ ಆಶಯವಾಗಿತ್ತು. ಆದರೆ, ಇದಕ್ಕೆ ತದ್ವಿರುದ್ಧವಾಗಿ ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳ ಪರ ನಿಲುವು ತೆಗೆದುಕೊಳ್ಳದೆ, ವಿದ್ಯಾರ್ಥಿಗಳಿಂದ ಸುಲಿಗೆ ಮಾಡುತ್ತಿದೆ. ಕೂಡಲೇ ವಿದ್ಯಾರ್ಥಿಗಳ ಆರ್ಥಿಕ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಪ್ರತಿ ವರ್ಷವೂ ಶೇ.10 ಶುಲ್ಕ ಏರಿಕೆ ಹಿಂಪಡೆಯಬೇಕು. ಪ್ರಸ್ತುತ ಸೆಮಿಸ್ಟರ್ ಪರೀಕ್ಷಾ ಶುಲ್ಕ ಹೆಚ್ಚಳ ಕೈಬಿಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷೆ ಚಂದ್ರಕಲಾ, ಕಾರ್ಯದರ್ಶಿ ನಿತಿನ್, ಜಿಲ್ಲಾ ಉಪಾಧ್ಯಕ್ಷೆ ಸ್ವಾತಿ, ವಿದ್ಯಾರ್ಥಿಗಳಾದ ಸುಭಿಕ್ಷ, ರಕ್ಷಿತಾ.ಆರ್, ಸುಕೃತ, ರಕ್ಷಿತ.ಬಿ.ಟಿ, ಹರ್ಷ, ಆದರ್ಶ, ಹರ್ಷಿತ, ರಾಘವೇಂದ್ರ ಚಂದನ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಅಥ್ಲೆಟಿಕ್ಸ್ ಚಾಂಪಿಯನ್ಸ್



ಜನವರಿ 10ರಿಂದ 12ರವರೆಗೆ ಮಂಗಳೂರಿನಲ್ಲಿ ನಡೆದ ಮೊದಲನೇ ದಕ್ಷಿಣ ಏಷ್ಯಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಓಪನ್ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರು ಮಹಾರಾಣಿ ವಿಜ್ಞಾನ ಕಾಲೇಜಿನ ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗದ ಅತಿಥಿ ಉಪನ್ಯಾಸಕ ಡಾ.ಕೆ.ಎಸ್.ರಘುನಂದನ್ ಹಾಗೂ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ರೇಸ್ ಪ್ರತಿನಿಧಿ ಪಿ.ಜಿ.ಚಂದ್ರಶೇಖರ್ ಕ್ರಮವಾಗಿ 5 ಮತ್ತು 3 ಸಾವಿರ ಮೀಟರ್‌ಗಳ ನಡಿಗೆ ಸ್ಪರ್ಧೆಯಲ್ಲಿ ಚಿನ್ನ ಗಳಿಸಿದ್ದಾರೆ.

ಆಮರಣಾಂತ ಉಪವಾಸ ಮಾಡುತ್ತಿರುವ

ರೈತ ಮುಖಂಡ ದಲ್ಲೆವಾಲ ಪ್ರಾಣ ಉಳಿಸಲು ರಾಷ್ಟ್ರಪತಿ ಮಧ್ಯಪ್ರವೇಶಕ್ಕೆ ಆಗ್ರಹಿಸಿ ಪ್ರತಿಭಟನೆ



ರೈತ ನಾಯಕ ಜಗಜಿತ್ ಸಿಂಗ್ ದಲ್ಲೆವಾಲ ಅವರ ಪ್ರಾಣ ಉಳಿಸಲು ರಾಷ್ಟ್ರಪತಿ, ಪ್ರಧಾನಿಮಂತ್ರಿ ಮಧ್ಯ ಪ್ರವೇಶಿಸಬೇಕೆಂದು ಒತ್ತಾಯಿಸಿ ಸಂಯುಕ್ತ ಹೋರಾಟ ಕರ್ನಾಟಕ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.


ಮೈಸೂರು, ಜ.13(ಜಿಎ)–ರೈತರ ವಿವಿಧ ಬೇಡಿಕೆ ಈಡೇರಿಕೆಗೆ ದೆಹಲಿ ಗಡಿಯಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ರೈತ ನಾಯಕ ಜಗಜಿತ್‌ಸಿಂಗ್ ದಲ್ಲೆವಾಲ ಅವರ ಪ್ರಾಣ ಉಳಿಸಲು ರಾಷ್ಟ್ರಪತಿ, ಪ್ರಧಾನಮಂತ್ರಿ ಮಧ್ಯ ಪ್ರವೇಶಿಸಬೇಕೆಂದು ಒತ್ತಾಯಿಸಿ ಸಂಯುಕ್ತ ಹೋರಾಟ ಕರ್ನಾಟಕ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ರೈತರ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಖಾತರಿ, ಸಾಲ ಮನ್ನಾ ಸೇರಿದಂತೆ ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ದಲ್ಲೆವಾಲ ಅವರು ನ.26ರಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ಸತ್ಯಾಗ್ರಹ 48ನೇ ದಿನಕ್ಕೆ ಕಾಲಿಟ್ಟಿದ್ದು ದೇಹ ನಿತ್ರಾಣಗೊಂಡು ರಕ್ತದೊತ್ತಡ ಕೂಡ ಅಪಾಯಕಾರಿ ಮಟ್ಟಕ್ಕೆ ಕುಸಿದಿದೆ. ಯಾವಾಗ ಬೇಕಾದರೂ ಪ್ರಾಣ ಹೋಗುವಂತಹ ಸನ್ನಿವೇಶ ನಿರ್ಮಾಣವಾಗಿದೆ. ರೈತ ನಾಯಕ ಈ ಸ್ಥಿತಿಗೆ ತಲುಪಲು ಕೇಂದ್ರ ಸರ್ಕಾರವೇ ನೇರ ಕಾರಣ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಐತಿಹಾಸಿಕ ದೆಹಲಿ ರೈತ ಹೋರಾಟದ ಸಂದರ್ಭದಲ್ಲಿ ರೈತರ ಜೀವನ ಹಾಗೂ ಕೃಷಿ ರಕ್ಷಣೆಗೆ ಬಹಳ ಅಗತ್ಯವಿದ್ದ ಕರಾಳ ಕೃಷಿ ಕಾಯ್ದೆಗಳ ರದ್ದತಿ, ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನು ಸೇರಿದಂತೆ ಹಲವು ಹಕ್ಕೊತ್ತಾಯಗಳನ್ನು ಮುಂದಿಟ್ಟಿತ್ತು. 385 ದಿನಗಳ ಅನಿರ್ದಿಷ್ಟ ಹೋರಾಟದ ನಂತರ ರೈತ ಹೋರಾಟಕ್ಕೆ ಮಣಿದ ಸರ್ಕಾರ, ಕರಾಳ ಕೃಷಿ ಕಾಯ್ದೆಗಳನ್ನು ರದ್ದುಗೊಳಿಸಿ ಉಳಿದ ಹಕ್ಕೊತ್ತಾಯಗಳನ್ನು ಈಡೇರಿಸಲು ಲಿಖಿತ ಭರವಸೆ ನೀಡಿತ್ತು. ಆದರೆ ಈ ಭರವಸೆಗೆ ವಿರುದ್ಧವಾಗಿ ನಡೆದುಕೊಂಡಿದೆ. ದೇಶಾದ್ಯಂತ ಎಲ್ಲಾ ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಿ ವಿದ್ಯುತ್ ಪಾವತಿ ಮಾಡುವಂತೆ ಬಲವಂತದಿಂದ ಆಧಾರ್ ಕಾರ್ಡ್ ಜೋಡಣೆ ಪೂರ್ಣಗೊಳಿಸಿದೆ. ರೈತರ ಬೆಳೆಗಳನ್ನು ಸಕಾಲದಲ್ಲಿ ಖರೀದಿಸುತ್ತಿಲ್ಲ. ರೈತ ವಿರೋಧಿ ಧೋರಣೆ, ರೈತರ ಆಗ್ರಹಗಳನ್ನು ನಿರ್ಲಕ್ಷ್ಯ ಮಾಡಿದ್ದರ ಫಲವಾಗಿ ರೈತ ನಾಯಕರ ಪ್ರಾಣ ಹೋಗುವಂತಹ ಪರಿಸ್ಥಿತಿ ಉಂಟಾಗಿದೆ. ಕೂಡಲೇ ರಾಷ್ಟ್ರಪತಿ, ಪ್ರಧಾನ ಮಂತ್ರಿ ಹಾಗೂ ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಬೇಕು. ರಾಜ್ಯ ಸರ್ಕಾರ ಕೂಡ ರೈತ ನಾಯಕರ ಪ್ರಾಣ ಉಳಿಸಲು ತಕ್ಷಣ ಕ್ರಮ ಕೈಗೊಳ್ಳಲು ಆಗ್ರಹಿಸಿ ಪ್ರಧಾನ ಮಂತ್ರಿಗೆ ಪತ್ರ ಬರೆಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಹೊಸಕೋಟೆ ಬಸವರಾಜು, ಪಿ.ಮರಂಕಯ್ಯ, ಹೊಸೂರು ಕುಮಾರ್, ಉಗ್ರ ನರಸಿಂಹೇಗೌಡ, ಜಯರಾಂ ಪಾಲ್ಗೊಂಡಿದ್ದರು.

'ಮಣ್ಣು ಉಳಿಸಿ' ಜನ ಜಾಗೃತಿ ಅಭಿಯಾನಕ್ಕೆ ಚಾಲನೆ



ಮಣ್ಣು ಉಳಿಸಿ ಜನಜಾಗೃತಿ ವಾರ್ಷಿಕ ಅಭಿಯಾನದ ದಿನದರ್ಶಿಕೆ ಬಿಡುಗಡೆ ಮಾಡಲಾಯಿತು.

ಮೈಸೂರು, ಜ.13(ಜಿಎ)–ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಉತ್ತಿಷ್ಠ ಭಾರತ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದಿನದರ್ಶಿಕೆ ಬಿಡುಗಡೆ, 'ಮಣ್ಣುಉಳಿಸಿ' ಜನಜಾಗೃತಿ ವಾರ್ಷಿಕ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ ಮಾತನಾಡಿ, ಮಣ್ಣಿನ ಫಲವತ್ತತೆಗೆ ನಿರ್ದಿಷ್ಟ ಸ್ಥಿರತೆ ಇದೆ. ಆದರೆ ಹೆಚ್ಚಿನ ಇಳುವರಿಗಾಗಿ ರಾಸಾಯನಿಕ ಬಳಸಿ ಅದನ್ನು ಹಾಳು ಮಾಡುತ್ತಿದ್ದೇವೆ. ತಂಬಾಕಿನಂತಹ ಮಾದಕ ವಸ್ತು ಬೆಳೆಯಲು ರಾಸಾಯನಿಕ ಬಳಸಿ ಮಣ್ಣಿನ ಆರೋಗ್ಯ ಹಾಳು ಮಾಡುತ್ತಿದ್ದೇವೆ. ಇದು ನಿಲ್ಲಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಣ್ಣಿನ ಆರೋಗ್ಯ ಕುರಿತು ಅರಿವು ಮೂಡಿಸುತ್ತಿರುವ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಸಿ.ಚಂದನ್ ಗೌಡ ಅವರಿಗೆ 'ಮಣ್ಣಿನ ಶ್ರೇಷ್ಠ ಮಗ' ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಯೋಗಾನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್, ಎಂ.ವಿ.ನಾಗೇಂದ್ರ, ಎನ್.ಅನಂತ್ ಮತ್ತಿತರರು ಉಪಸ್ಥಿತರಿದ್ದರು.

ಪ್ರಧಾನಿ ಮೋದಿ ಪ್ರತಿಕೃತಿ ದಹನಕ್ಕೆ ಮುಂದಾದ ರೈತರ ಬಂಧನ, ಬಿಡುಗಡೆ



ರೈತ ನಾಯಕ ಜಗಜಿತ್ ಸಿಂಗ್ ದಲ್ಲೆವಾಲ ಹೋರಾಟ ಬೆಂಬಲಿಸಿ, ಕೇಂದ್ರ ಸರ್ಕಾರದ ರೈತ ವಿರೋಧಿ ನಡೆ ಖಂಡಿಸಿ ಪ್ರಧಾನ ಮಂತ್ರಿ, ಕೃಷಿ ಸಚಿವರ ಪ್ರತಿಕೃತಿ ದಹನ ಮಾಡಲು ಮುಂದಾದ ರೈತರು.

ಮೈಸೂರು, ಜ.13(ಜಿಎ)–ರೈತರ ವಿವಿಧ ಬೇಡಿಕೆ ಈಡೇರಿಕೆಗೆ ದೆಹಲಿ ಗಡಿಯಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ರೈತ ನಾಯಕ ಜಗಜಿತ್ ಸಿಂಗ್ ದಲ್ಲೆವಾಲ ಹೋರಾಟ ಬೆಂಬಲಿಸಿ, ಕೇಂದ್ರ ಸರ್ಕಾರದ ರೈತ ವಿರೋಧಿ ನಡೆ ಖಂಡಿಸಿ ಪ್ರಧಾನ ಮಂತ್ರಿ ಹಾಗೂ ಕೃಷಿ ಸಚಿವರ ಪ್ರತಿಕೃತಿ ದಹನ ಮಾಡಲು ಮುಂದಾದ ರೈತರನ್ನು ಪೊಲೀಸರು ಬಂಧಿಸಿ, ಬಿಡುಗಡೆಗೊಳಿಸಿದರು.

ರೈತ ಸಂಘಟನೆಗಳ ಒಕ್ಕೂಟ, ಕಬ್ಬು ಬೆಳೆಗಾರರ ಸಂಘದ ನೇತೃತ್ವದಲ್ಲಿ ನಗರದ ಗನ್‌ಹೌಸ್ ವೃತ್ತದಲ್ಲಿ ಜಮಾಯಿಸಿದ ರೈತರು, ಪ್ರಧಾನಿ ಹಾಗೂ ಕೃಷಿ ಸಚಿವರ ಪ್ರತಿಕೃತಿ ದಹಿಸಲು ಮುಂದಾದರು. ಈ ವೇಳೆ ಸ್ಥಳದಲ್ಲಿದ್ದ ಪೊಲೀಸರು ರೈತರ ಬಳಿ ಇದ್ದ ಪ್ರತಿಕೃತಿ ಕಿತ್ತುಕೊಳ್ಳಲು ಮುಂದಾದರು. ಆದರೆ, ಇದಕ್ಕೆ ರೈತರು ಪ್ರತಿರೋಧ ಒಡ್ಡಿ ಪ್ರತಿಕೃತಿಗಳಿಗೆ ಬೆಂಕಿ ಹಚ್ಚಿದರು. ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಪ್ರತಿಕೃತಿಗಳನ್ನು ವಶಪಡಿಸಿಕೊಂಡು, ರೈತರನ್ನು ಬಂಧಿಸಿ ಕರೆದೊಯ್ದರು. ಈ ವೇಳೆ ನಡೆದ ತಳ್ಳಾಟ ನೂಕಾಟದಲ್ಲಿ ಮಹದೇವಸ್ವಾಮಿ ಎಂಬುವರ ಕಾಲು ಮುರಿದಿದ್ದು, ಆಸ್ಪತ್ರೆಗೆ ಸೇರಿಸಲಾಗಿದೆ.

ರಾಜ್ಯಾಧ್ಯಕ್ಷ ಕುರುಬೂರ್ ಶಾಂತಕುಮಾರ್ ಮಾತನಾಡಿ, ಕೇಂದ್ರ ಸರ್ಕಾರ ರೈತ ಚಳವಳಿಯನ್ನು ದುರ್ಬಲಗೊಳಿಸಲು ಪ್ರಯತ್ನಿಸುತ್ತಿದೆ. ಇದಕ್ಕೆ ಯಾರೂ ಸೊಪ್ಪು ಹಾಕುತ್ತಿಲ್ಲವಾದ್ದರಿಂದ ಚಳವಳಿಗಾರರ ಬಗ್ಗೆ ತಪ್ಪು ಕಲ್ಪನೆ ಮೂಡಿಸುತ್ತಿದೆ. ಇದು ಸರಿಯಾದ ಬೆಳವಣಿಗೆ ಅಲ್ಲ. ಪ್ರಧಾನಿ ಮೋದಿಯವರು ಅಧಿಕಾರಕ್ಕೆ ಬಂದರೆ ಸ್ವಾಮಿನಾಥನ್ ವರದಿ ಜಾರಿ ಮಾಡುತ್ತೇವೆ ಎಂದು ದೇಶಾದ್ಯಂತ ಭಾಷಣ ಮಾಡಿ ಚುನಾವಣಾ ಪ್ರಣಾಳಿಕೆಯಲ್ಲಿ ಜನರಿಗೆ ತಿಳಿಸಿ ಅಧಿಕಾರಕ್ಕೆ ಬಂದರೂ ಸಮಸ್ಯೆ ಬಗೆಹರಿಸಲಿಲ್ಲ ಎಂದು ಕಿಡಿಕಾರಿದರು.

ರೈತರು, ಕೃಷಿ ಸಮಸ್ಯೆಗಳನ್ನು ಬಗೆಹರಿಸಲು ರಚಿಸಿರುವ 31 ಜನರ ಸಂಸದೀಯ ಮಂಡಲಿ ಎಂಎಸ್‌ಪಿ ಖಾತ್ರಿ ಕಾನೂನು ಮಾಡುವುದು ಅವಶ್ಯಕ ಎಂದು ತಿಳಿಸಿದೆ. ರೈತರ ಹೋರಾಟದ ಸಮಸ್ಯೆಗಳ ಬಗ್ಗೆ ಪರಿಹಾರ ಕ್ರಮ ಕೈಗೊಳ್ಳಲು ನ್ಯಾಯಾಲಯ ನೇಮಿಸಿದ ಸಮಿತಿಯ ಮಧ್ಯಂತರ ವರದಿಯಲ್ಲೂ ರೈತರ ಕೃಷಿ ಉತ್ಪನ್ನಗಳಿಗೆ ಎಂಎಸ್‌ಪಿ ಖಾತ್ರಿ ವ್ಯವಸ್ಥೆ ಜಾರಿ ಅತ್ಯವಶ್ಯಕ ಎಂದು ಹೇಳಿದರು. ಆದರೆ, ಕೇಂದ್ರ ಸರ್ಕಾರ ಇದಕ್ಕೆ ಪ್ರತಿಕ್ರಿಯೆ ನೀಡುತ್ತಿಲ್ಲ. ರೈತರ ಸಮಸ್ಯೆ ಬಗೆಹರಿಸಬೇಕಾದ ಕೃಷಿ ಸಚಿವರು ನಿದ್ರಾವಸ್ಥೆಯಲ್ಲಿದ್ದಾರೆ ಎಂದರು.

ಪ್ರತಿಭಟನೆಯಲ್ಲಿ ಪಿ.ಸೋಮಶೇಖರ್, ಬರಡನಪುರ ನಾಗರಾಜ್, ಕಿರಗಸೂರ್ ಶಂಕರ್, ನೀಲಕಂಠಪ್ಪ ಕೆ.ಸಿದ್ದೇಶ್, ವಿಜಯೇಂದ್ರ, ಪೈ.ವೆಂಕಟೇಶ್, ಪರಶಿವಮೂರ್ತಿ, ಕೆಂಡಗಣ್ಣಪ್ಪ, ಮಹದೇವಸ್ವಾಮಿ, ಪ್ರದೀಪ್, ಮಂಜುನಾಥ್, ಬಸವರಾಜು, ಹಂಪಾಪುರ ರಾಜೇಶ್, ವರಕೋಡು ನಾಗೇಶ್, ಮಂಜುನಾಥ್, ಕಾಟೂರು ಮಹದೇವಸ್ವಾಮಿ, ನಾಗೇಶ್, ಶ್ರೀಕಂಠ, ಗೌರಿಶಂಕರ್, ಪಿ.ರಾಜು, ಕೋಟೆ ಸುನಿಲ್, ವಾಜಮಂಗಲ ನಾಗೇಂದ್ರ ಮಾಲಿಂಗ ನಾಯಕ, ಚಾಮರಾಜು, ಧನಗಳ್ಳಿ ಕೆಂಡಗಣ್ಣಸ್ವಾಮಿ, ಚುಂಚುರಾಯನಹುಂಡಿ ಗಿರೀಶ್, ಕೂಡನಹಳ್ಳಿ ಸೋಮಣ್ಣ, ಪ್ರಕಾಶ್, ಉಮೇಶ್, ರಾಜೇಂದ್ರ, ವರಕೋಡು ಜಯರಾಮ್, ಸಾತಗಳ್ಳಿ ಬಸವರಾಜು, ಬನ್ನೂರ್ ಸೂರಿ, ದೇವನೂರು ಮಹದೇವಸ್ವಾಮಿ, ತಗಡೂರು ಮಾದೇವಸ್ವಾಮಿ ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗೇಮ್ ಚೇಂಜರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗೇಮ್ ಚೇಂಜರ್ (ಕ)+ ಸಂಕ್ರಾಂತಿಕಿ ವಸ್ತುನಂ (ತೆ)	2+2 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಫತೇ(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಛೂ ಮಂತರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ಗೇಮ್ ಚೇಂಜರ್(ತೆ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಛೂ ಮಂತರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗೇಮ್ ಚೇಂಜರ್ (ಹಿ)	4 ಪ್ರದರ್ಶನಗಳು
ಪ್ರಭಾ	
ಮದಗಜ ರಾಜ (ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಆಫ್ಟರ್ ದಿ ಬ್ರೇಕಪ್ (ಕ): ಬೆ.9.40ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಸಂ.5.20ಕ್ಕೆ, ರಾ.7.45ಕ್ಕೆ, ಯುಐ (2024) (ಕ): ಮ.2.35ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಸೋನಿಕ್ ದಿ ಹೆಡ್ಜಾಗ್ 3(ಇಂ): ಬೆ.11.25ಕ್ಕೆ, ಸಂ.4.30ಕ್ಕೆ, ದೇಶಕ್ಕಾರನ್ (ಮ): ಮ.1.55ಕ್ಕೆ, ಮಾರ್ಕೋ (ಹಿಂ): ರಾ.7ಕ್ಕೆ, ಮಾರ್ಕೋ (ಮ): ರಾ.10.10ಕ್ಕೆ
ಸ್ಕ್ರೀನ್ 3	ಹರಿದಾಸರ ದಿನಚರಿ (ಕ): ಬೆ.10.30ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಮ.1.40ಕ್ಕೆ, ಸಂ.4.30ಕ್ಕೆ, ಎ ಲೆಜೆಂಡ್ (ಇಂ): ರಾ.7.20ಕ್ಕೆ, ಐಡೆಂಟಿಟಿ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪುಷ್ಪಾ 2 (ಕ): ಮ.1ಕ್ಕೆ, ಸ್ವೇಚ್ಛಾ (ಕ): ಸಂ.4.40ಕ್ಕೆ, ಯುಐ (ಕ): ಸಂ.6.55ಕ್ಕೆ, ದೇಶಕ್ಕಾರನ್ (ಮ): ರಾ.9.25ಕ್ಕೆ.
ಸ್ಕ್ರೀನ್ 2	ಮ್ಯಾಕ್ಸ್ (ಕ): ಮ.1.10ಕ್ಕೆ, ಮ.3.50ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.11.25ಕ್ಕೆ, ಯುಐ (ಕ): ಮ.1.45ಕ್ಕೆ, ಮ್ಯಾಕ್ಸ್ (ಕ): ಸಂ.6.25ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.11ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.1.45ಕ್ಕೆ, ಸಂ.6.55ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಸಂ.4.25ಕ್ಕೆ, ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಚಳಿಗಾಲದ ರೇಸ್

10ನೇ ದಿನ, ಬುಧವಾರ, 15–01–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.30 ಗಂಟೆಗೆ

I. ಮೈಸೂರು ಜ್ಯೂ ಪ್ಲೇಟ್–1600 ಮೀ. ರೇಟೆಡ್ 40 ರಿಂದ 65. ಮ.2.30ಕ್ಕೆ
1. ನ್ಯಾಚುರಲ್ ಸ್ಪೀಡ್ 2. ಸ್ಕ್ವೇರ್ ಕಟ್ 3. ಇಗ್ನೊರೆನ್ಸ್ ಈಸ್ ಬ್ಲಿಸ್

II. ವಿಜಯವಾಡ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ರೆಡ್‌ಹಿಲ್ಸ್ 2. ಪೆಟ್ವೀಸ್ ಚಾಯ್ಸ್ 3. ಸ್ಪಿರಿಚಿಯಲ್ ಫೋರ್ಸ್

III ಗೇರುಸೊಪ್ಪ ಪ್ಲೇಟ್–1600 ಮೀ. ರೇಟೆಡ್ 00 ರಿಂದ 25. ಮ.3.30ಕ್ಕೆ
1. ನ್ಯಾಚುರಲ್ ಪ್ಲೈ 2. ಡಿ ಅಡ್ಮಿರಲ್ 3. ಎಕೊ ಸಿಸ್ಟಮ್

IV. ಎಂ.ಗೋವಿಂದಪ್ಪ ಮೆಮೋರಿಯಲ್ ಟ್ರೋಫಿ–1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ ಸಂ.4.00ಕ್ಕೆ
1. ಗೋಲ್ಡ್ ಕೈಟ್ 2. ರಿವರ್ ಆಫ್ ಗೋಲ್ಡ್ 3. ದಿ ಫ್ಲೈಯಿಂಗ್ ಫೀಟ್

V. ಸಂಕ್ರಾಂತಿ ಪ್ಲೇಟ್– 1400 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ವರದಾನ್ 2. ನ್ಯಾಚುರಲ್ ಗೋಲ್ಡ್ 3. ಈಗಲ್ ಬ್ಲಫ್

VI. ಫಾರ್ಮುಲ ಇನ್‌ವಿಟೇಷನ್ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45(ನೋವಿಫ್). ಸಂ. 5.00ಕ್ಕೆ
1. ಡಿಲಾರ್ಡ್ 2. ಟೈಗರ್ ಕಿಂಗ್ 3. ಒನ್ ಡೈಮಂಡ್

ದಿನದ ಅತ್ಯುತ್ತಮ	ಡಿ ಲಾರ್ಡ್
ಡಬ್ಬಲ್	ನ್ಯಾಚುರಲ್ ಸ್ಪೀಡ್, ವರದಾನ್
ಜಾಕ್‌ಪಾಟ್	2, 3, 4, 5 ಮತ್ತು 6
ಮಿನಿ ಜಾಕ್‌ಪಾಟ್	3, 4, 5 ಮತ್ತು 6
I ಟ್ರೆಬಲ್	1, 2 ಮತ್ತು 3
II ಟ್ರೆಬಲ್	4, 5 ಮತ್ತು 6
ಎಕ್ಸ್‌ಆಕ್ಟ್	1 ರಿಂದ 6

ಟಿಪ್‌ಸ್ಟರ್ ಪಿಜಿಸಿ

ಮೈಸೂರು ಸಿಟಿ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿಯ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ಬಿ. ನಾಗರಾಜು



ವಿ. ಪ್ರಕಾಶ್

ಮೈಸೂರು, ಜ.13– ದಿ ಮೈಸೂರು ಸಿಟಿ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್‌ನ ಅಧ್ಯಕ್ಷರಾಗಿ ಬಿ.ನಾಗರಾಜು ಹಾಗೂ ಉಪಾಧ್ಯಕ್ಷರಾಗಿ ವಿ. ಪ್ರಕಾಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಇಂದು ನಡೆದ ಚುನಾವಣೆಯಲ್ಲಿ ಇವರಿಬ್ಬರು ಅವಿರೋಧವಾಗಿ ಆಯ್ಕೆಯಾಗಿರುವುದಾಗಿ ಸೊಸೈಟಿ ಕಾರ್ಯದರ್ಶಿ ಬಿ.ಎಸ್. ಶ್ರೀನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.